# ಕನ್ನಡ ಕಟ್ಟಿದವರು ಮಾಲೆ

# ಬಸವರಾಜ ಕಟ್ಟೀಮನಿ

---

ಕನ್ನಡ ಕಟ್ಟಿದವರು ಮಾಲೆ

ಪ್ರಧಾನ ಸಂಪಾದಕರು

ಡಾ. ಸಿದ್ದಲಿಂಗಯ್ಯ

ಸಂಪಾದಕರು

ಡಾ. ಕರೀಗೌಡ ಬೀಚನಹಳ್ಳಿ

## ಬಸವರಾಜ ಕಟ್ಟೀಮನಿ

## ಕೊತ್ತಲ ಮಹಾದೇವಪ್ಪ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಬೆಂಗಳೂರು-೫೬೦ ೦೦೨

---

BASAVARAJA KATTIMANI A Monograph on Basavaraja Kattimani. Written by Kothala Mahadevappa. Published By B.K. Mallikarjun, Administrative Officer, Kannada Pustaka Pradhikara, Kannada Bhavana, J.C. Road, Bengaluru - 560 002.

© ಈ ಆವೃತ್ತಿಯ ಗ್ರಂಥಸ್ವಾಮ್ಯ - ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

First Impression : 2011

Pages: xii + 90

Copies : 1000

Price : 60/

ಮೊದಲನೆಯ ಮುದ್ರಣ : ೨೦೧೧

ಪುಟಗಳು : xii + ೯೦

ಪ್ರತಿಗಳು : ೧೦೦೦

ಬೆಲೆ : ೬೦/

ಕರಡು ತಿದ್ದಿದವರು : ಲೇಖಕರು

ಪ್ರಕಾಶಕರು:

ಬಿ.ಎಚ್.ಮಲ್ಲಿಕಾರ್ಜುನ

ಆಡಳಿತಾಧಿಕಾರಿಗಳು

ಕನ್ನಡ ಪುಸ್ತಕ ಪ್ರಾಧಿಕಾರ

ಕನ್ನಡ ಭವನ, ಜೆ.ಸಿ.ರಸ್ತೆ

ಬೆಂಗಳೂರು-೫೬೦ ೦೦೨

ಮುದ್ರಕರು:

ಮೆ॥ ಪ್ರಿಂಟ್ ಪಾರ್ಕ್

೧೪೯೬/೪, ೩ನೇ ಅಡ್ಡರಸ್ತೆ, ಮರಿಯಪ್ಪನಪಾಳ್ಯ,

ಶ್ರೀರಾಂಪುರಂ ಅಂಚೆ, ಬೆಂಗಳೂರು-೫೬೦ ೦೨೧

ದೂ : ೦೮೦-೨೩೪೨೨೮೩೮

# ಕನ್ನಡ ಕಟ್ಟಿದವರು ಮಾಲೆ

ಪ್ರಧಾನ ಸಂಪಾದಕರು

ಡಾ. ಸಿದ್ದಲಿಂಗಯ್ಯ

ಸಂಪಾದಕರು

ಡಾ. ಕರೀಗೌಡ ಬೀಚನಹಳ್ಳಿ


**ಸಂಪಾದಕ ಮಂಡಳಿ**

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**

**ಶ್ರೀ ಹೊರೆಯಾಲ ದೊರೆಸ್ವಾಮಿ**

**ಪ್ರೊ. ಸುಕನ್ಯಾ ಮಾರುತಿ**

**ಡಾ. ಎಚ್. ಟಿ. ಪೋತೆ**

**ಶ್ರೀ ಪ್ರಕಾಶ್ ಕಂಬತ್ತಳ್ಳಿ**

**ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ**

ಆಡಳಿತಾಧಿಕಾರಿಗಳು

# ಪ್ರಧಾನ ಸಂಪಾದಕರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರವು ವಿವಿಧ ಸಾಹಿತ್ಯ ಮಾಲೆಗಳಡಿಯಲ್ಲಿ ಮಹತ್ವದ ಪುಸ್ತಕಗಳನ್ನು ಪ್ರಕಟಿಸುತ್ತಾ ಬರುತ್ತಿದೆ. ಪುಸ್ತಕೋದ್ಯಮವನ್ನು ಜನಪರವಾಗಿಸುವುದರ ಜೊತೆಗೆ ಜನಸಾಮಾನ್ಯರಿಗೆ ಸುಲಭ ಬೆಲೆಯಲ್ಲಿ ಪುಸ್ತಕಗಳು ಲಭ್ಯವಾಗಬೇಕೆಂಬ ದೃಷ್ಟಿಯಿಂದ ಈ ಮಾಲೆಗಳನ್ನು ಪ್ರಾಧಿಕಾರವು ಪ್ರಾರಂಭಿಸಿರುತ್ತದೆ.

ಈ ದೃಷ್ಟಿಯಿಂದ ಪ್ರಾಧಿಕಾರವು ಕೈಗೊಂಡಿರುವ ಮಹತ್ವದ ಯೋಜನೆಗಳಲ್ಲಿ "ಕನ್ನಡ ಕಟ್ಟಿದವರು ಮಾಲೆ' ಯೂ ಒಂದು. ಕನ್ನಡನಾಡು, ನುಡಿ, ಕಲೆ, ಸಂಸ್ಕೃತಿಯೇ ಮೊದಲಾದ ವಿವಿಧ ಕ್ಷೇತ್ರಗಳಲ್ಲಿ ಅಪಾರವಾದ ಸೇವೆಯನ್ನು ಸಲ್ಲಿಸಿಯೂ ಅಜ್ಞಾತರಾಗಿ ಉಳಿದ ವ್ಯಕ್ತಿಗಳನ್ನು ಒಳಗೊಂಡಂತೆ ಕನ್ನಡನಾಡು, ನುಡಿಯನ್ನು ಕಟ್ಟುವಲ್ಲಿ ನೆರವಾದ ಮಹನೀಯರನ್ನು ಕುರಿತು ಕಿರುಹೊತ್ತಿಗೆಗಳನ್ನು ಈ ಮಾಲೆಯಡಿ ಪ್ರಕಟಿಸಲಾಗುತ್ತಿದೆ. ಈ ಮಾಲೆಯನ್ನು ಅತ್ಯಂತ ರಚನಾತ್ಮಕವಾಗಿ ರೂಪಿಸಬೇಕೆಂಬ ದೃಷ್ಟಿಯಿಂದ ಒಂದು ಸಂಪಾದಕ ಮಂಡಳಿಯನ್ನು ಪ್ರಾಧಿಕಾರವು ರಚಿಸಿತು, ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಪ್ರೊ. ಸುಕನ್ಯಾ ಮಾರುತಿ, ಡಾ. ಎಚ್. ಟಿ. ಪೋತೆ, ಶ್ರೀಪ್ರಕಾಶ್ ಕಂಬತ್ತಳ್ಳಿ ಇವರನ್ನು ಸದಸ್ಯರನ್ನಾಗಿಯೂ ಪ್ರಾಧಿಕಾರವು ನೇಮಿಸಿತು. ಕನ್ನಡ ನಾಡು ನುಡಿ ಕ್ಷೇತ್ರದಲ್ಲಿ ಅಪಾರ ಪರಿಶ್ರಮವನ್ನು ಹೊಂದಿರುವ ಈ ಮಹನೀಯರು ಈ ಮಾಲಿಕೆಯಡಿ ಬರೆಸಬೇಕಾದ ನೂರಾರು ವ್ಯಕ್ತಿಗಳ ಹಾಗೂ ಅವರನ್ನು ಕುರಿತು ಬರೆಯಬಹುದಾದ ಲೇಖಕರ ಪಟ್ಟಿಯನ್ನು ಪರಿಶ್ರಮವಹಿಸಿ ಸಿದ್ಧಪಡಿಸಿಕೊಟ್ಟು ಉಪಕರಿಸಿರುತ್ತಾರೆ. ಸಂಪಾದಕ ಮಂಡಳಿಯು ಸಮರ್ಥವಾಗಿ ಈ ಮಾಲಿಕೆಯ ಹಸ್ತಪ್ರತಿಗಳನ್ನು ಪರಿಶೀಲಿಸಿಕೊಟ್ಟಿರುತ್ತದೆ. ಸಂಪಾದಕರಾದ ಡಾ. ಕರೀಗೌಡ ಬೀಚನಹಳ್ಳಿ ಅವರಿಗೆ, ಸಂಪಾದಕ ಸಮಿತಿಯ ಸದಸ್ಯರಿಗೆ ಹಾಗೂ ಎಲ್ಲ ಲೇಖಕರಿಗೆ ನನ್ನ ಕೃತಜ್ಞತೆಗಳು.

ಈ ಮಾಲೆಯ ಪುಸ್ತಕಗಳನ್ನು ಹೊರತರುವಲ್ಲಿ ಪ್ರಾರಂಭದಿಂದ ವಿಶೇಷ ಆಸಕ್ತಿ ವಹಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ ಅವರಿಗೆ, ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ. ಮುಕುಂದನ್ ಅವರಿಗೆ, ಶ್ರೀ ಜೆ. ಎನ್. ಶಾಮರಾವ್ ಅವರಿಗೆ ಹಾಗೂ ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ಆಭಾರಿಯಾಗಿದ್ದೇನೆ. ಈ ಮಾಲೆಯ ಎಲ್ಲಾ ಕೃತಿಗಳನ್ನು ಕನ್ನಡ ವಾಚಕರು ತುಂಬುಹೃದಯದಿಂದ ಸ್ವಾಗತಿಸುತ್ತಾರೆಂದು ಆಶಿಸುತ್ತೇನೆ.

(ಡಾ. ಸಿದ್ಧಲಿಂಗಯ್ಯ)

ಅಧ್ಯಕ್ಷರು

# ಸಂಪಾದಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರವು 'ಕನ್ನಡ ಕಟ್ಟಿದವರು ಮಾಲೆ'ಯಡಿಯಲ್ಲಿ ಕನ್ನಡ ನಾಡು, ನುಡಿ, ಸಾಹಿತ್ಯ, ಶಿಕ್ಷಣ, ಕಲೆ ಸಂಸ್ಕೃತಿ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಅಪರೂಪದ ವ್ಯಕ್ತಿಗಳ ಜೀವನ, ಸಾಧನೆ, ವ್ಯಕ್ತಿತ್ವ ಮತ್ತು ಹೋರಾಟದ ಕಥನವನ್ನು ಕುರಿತು ನುರಿತ ಲೇಖಕರಿಂದ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸಬೇಕೆಂದು ತೀರ್ಮಾನಿಸಿತು. ಈ ನಿಟ್ಟಿನಲ್ಲಿ ಸಂಪಾದಕ ಸಮಿತಿಯೊಂದನ್ನು ರಚಿಸಿ ನಮ್ಮನ್ನು ಆಹ್ವಾನಿಸಿದಾಗ ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಸಂತೋಷದಿಂದ ನಾವು ಒಪ್ಪಿಕೊಂಡೆವು. ಅನಂತರ ಈ ಸಮಿತಿಯು ಸೇರಿ ಹಲವು ಸಭೆಗಳನ್ನು ನಡೆಸಿ ಈ ಮಾಲೆಯ ಪುಸ್ತಕಗಳ ಸ್ವರೂಪ, ಬರೆಸಬೇಕಾದ ವ್ಯಕ್ತಿಗಳ ಹಾಗೂ ಬರೆಯುವ ಲೇಖಕರ ಪಟ್ಟಿ ಇದನ್ನೆಲ್ಲಾ ಸಿದ್ಧಪಡಿಸಲಾಯಿತು. ಈ ಮಾಲೆಯ ಪುಸ್ತಕಗಳು ಮುಖ್ಯವಾಗಿ ಈ ಕೆಳಕಂಡ ರೀತಿಯಲ್ಲಿ ಮೂರು ಮುಖ್ಯ ವಿಷಯಗಳನ್ನು ಒಳಗೊಂಡಿರಬೇಕೆಂದು ತೀರ್ಮಾನಿಸಿ ಕಾರ್ಯೋನ್ಮುಖರಾದೆವು.

೧. ಆಯಾ ವ್ಯಕ್ತಿಗಳ ಬಾಲ್ಯ, ವಿದ್ಯಾಭ್ಯಾಸ ಕೌಟುಂಬಿಕ ಹಿನ್ನೆಲೆ-ವಿವರಗಳು, ಗಣ್ಯರೊಡನೆ ಒಡನಾಟ, ಪಡೆದ ಪ್ರೇರಣೆ-ಪ್ರಭಾವಗಳು, ಭಾಗವಹಿಸಿದ ಚಳುವಳಿಹೋರಾಟಗಳು, ಸಂಘಟನೆಗಳು, ನಾಡು-ನುಡಿ-ಸಾಹಿತ್ಯ-ಸಂಸ್ಕೃತಿಗೆ ಸಲ್ಲಿಸಿದ ಸೇವೆಗಳು, ಮಾನವೀಯ ಗುಣ-ನಡತೆ ಇತ್ಯಾದಿ ವಿವರಗಳನ್ನು ಅಡಕವಾಗಿ ಈ ಪುಸ್ತಕಗಳಲ್ಲಿ ಅಳವಡಿಸಿ ಬರೆಯಬೇಕು.

೨. ಆಯಾ ವ್ಯಕ್ತಿಗಳ ಜೀವನ ಹಾಗೂ ಸಾಧನೆಗಳನ್ನು ದಾಖಲು ಮಾಡುವಾಗ ಅಧಿಕೃತ ದಾಖಲೆಗಳನ್ನು ಅವಲಂಬಿಸಿ ಬರೆಯಬೇಕು; ಆದಷ್ಟು ಕ್ಷೇತ್ರಕಾರ್ಯ ಮಾಡಿ ಮಾಹಿತಿಗಳನ್ನು ಕಲೆಹಾಕಿ ವಸ್ತುನಿಷ್ಠವಾಗಿ ನಿರೂಪಿಸಬೇಕು.

೩. ಎಲ್ಲಾ ಬಗೆಯ ಓದುಗರನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಪುಸ್ತಕಗಳನ್ನು ಸರಳವಾಗಿ, ಸಂಕ್ಷಿಪ್ತವಾಗಿ ಮತ್ತು ಸ್ಪಷ್ಟವಾಗಿ ಬರೆಯಬೇಕು.

ಹಲವಾರು ಜನ ಎಲೆಮರೆಯ ಕಾಯಂತೆ, ಕರ್ನಾಟಕದ ಏಳ್ಗೆಗಾಗಿ ದುಡಿದು ಕಣ್ಮರೆಯಾಗಿದ್ದಾರೆ. ಆದರೆ ಅಂತಹವರ ಬಗ್ಗೆ ಸಾಹಿತ್ಯ ಚರಿತ್ರೆಯಲ್ಲಿ ಒಂದು ಸಣ್ಣ ದಾಖಲೆಯೂ ಸಿಗುವುದಿಲ್ಲ. ಈ ನಿಟ್ಟಿನಲ್ಲಿ ಶ್ರಮಿಸಿದ ಅನೇಕ ಜನರ ಹೋರಾಟದ ಕಥೆ ನೇಪಥ್ಯಕ್ಕೆ ಸರಿದು ಹೋಗಿದೆ. ಅಂತಹ ವ್ಯಕ್ತಿಗಳ ಚರಿತ್ರೆಯನ್ನು ಇಂದು ಹುಡುಕಿ ಹೊರತೆಗೆದು ದಾಖಲಿಸಿ ಅವರ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ. ಇಂತಹವರ ಹೋರಾಟದ ಜೀವನವು ಮುಂದಿನ ಪೀಳಿಗೆಗೆ ಆದರ್ಶವೂ ಅನುಕರಣೀಯವೂ ಆಗಬೇಕಾಗಿದೆ. ಈ ಪುಸ್ತಕಗಳಲ್ಲಿ ದೊಡ್ಡಗ್ರಂಥಗಳಲ್ಲಿ ಹೇಳಬಹುದಾದ ವಿವರಗಳೆಲ್ಲವನ್ನೂ ಹೇಳಲಾಗದಿದ್ದರೂ ಸೂಕ್ಷ್ಮವಾಗಿ, ಸಂಕ್ಷಿಪ್ತವಾಗಿ ಮತ್ತು ಪರಿಣಾಮಕಾರಿಯಾಗಿ ಹೇಳಲಾಗಿದೆ. ಈ ಪುಸ್ತಕಗಳನ್ನು ಓದುವಾಗ ಇವರ ವ್ಯಕ್ತಿತ್ವ, ಸಾಧನೆ, ಹೋರಾಟ,

ವಿಚಾರಲಹರಿ, ಆಸಕ್ತಿಗಳು ಇನ್ನಷ್ಟು ಸ್ಪುಟಗೊಳ್ಳುತ್ತಾ ಹೋಗುತ್ತವೆ; ಇವರ ವಿಷಯದಲ್ಲಿ ಪ್ರೀತ್ಯಾದರಗಳು ಇಮ್ಮಡಿಗೊಳ್ಳುವುದರ ಜೊತೆಗೆ ಕನ್ನಡ ಪುನರುಜ್ಜೀವನದ ಸಂದರ್ಭಗಳು ಹಾಗೂ ಸವಾಲುಗಳು ಸ್ಪುಟಗೊಳ್ಳುತ್ತವೆ. ಇವರು ಬರೀ ಕನ್ನಡ ನಾಡು, ನುಡಿ, ಸಾಹಿತ್ಯ ಕಟ್ಟಿದವರು ಮಾತ್ರವಲ್ಲ; ಇವರು ಕನ್ನಡ ಸಂಸ್ಕೃತಿಯ ನಿರ್ಮಾಪಕರೂ ಹೌದು. ಕನ್ನಡ ಸಂಸ್ಕೃತಿಯ ಬಗೆಗೆ ಮತ್ತು ಕನ್ನಡಿಗರ ಬದುಕಿನ ಬಗೆಗೆ ಕೆಲಸ ಮಾಡುವ ಯಾರಿಗಾದರೂ ಈ ವ್ಯಕ್ತಿಗಳು ಪ್ರೇರಕಶಕ್ತಿಗಳಾಗಿದ್ದಾರೆ.

ಮೊದಲಿಗೆ ಇಂತಹ ನೂರು ಜನ ಮಹನೀಯರ ಬಗ್ಗೆ ಕಿರುಹೊತ್ತಿಗೆಗಳನ್ನು ಬರೆಸಬೇಕೆಂದು ಸಮಿತಿಯ ಪಟ್ಟಿ ಮಾಡಿ ಬರೆದುಕೊಡುವಂತೆ ನೂರು ಜನ ನುರಿತ ಲೇಖಕರನ್ನು ಗುರುತಿಸಿ ಅವರಿಗೆ ಪತ್ರ ಬರೆಯಲಾಯಿತು. ಆದರೆ ಬರೆಯುವವರು ಸಿಗುವುದು ಬಹಳ ಕಷ್ಟ ಎಂಬ ಸಂಗತಿ ನಂತರ ನಮಗೆ ಮನವರಿಕೆಯಾಯಿತು. ಕೊನೆಗೆ ಈ ಮಾಲೆಗೆ ಇನ್ನೂ ಕೆಲವರು ಬರೆಯುತ್ತಿರುವುದಾಗಿ ತಿಳಿಸಿದ್ದರೂ, ಬರೆದು ಬಂದಂತಹ ಹಸ್ತಪ್ರತಿಗಳು ೨೫ ಮಾತ್ರ ಅವುಗಳನ್ನೆಲ್ಲಾ ಸಂಪಾದಕ ಮಂಡಲಿಯ ಸದಸ್ಯರೆಲ್ಲಾ ಓದಿ, ಪರಿಶೀಲಿಸಿ, ತಿದ್ದುಪಡಿಗಳಿದ್ದರೆ ಲೇಖಕರಿಗೆ ಅವುಗಳನ್ನು ಸೂಚಿಸಿ ನಂತರ ಹಸ್ತಪ್ರತಿಗಳನ್ನು ಮುದ್ರಣಕ್ಕೆ ಅಂತಿಮಗೊಳಿಸಲಾಯಿತು.

ಈ ಯೋಜನೆಯ ಪ್ರತಿಯೊಂದು ಹಂತದಲ್ಲಿಯೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯ ಅವರು ತಮ್ಮ ಸಲಹೆ, ಸಹಕಾರವನ್ನು ನೀಡಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ. ಹೆಚ್. ಮಲ್ಲಿಕಾರ್ಜುನ ಅವರು, ಹಿಂದಿನ ಶ್ರೀ ಅಶೋಕ ಎನ್. ಚಲವಾದಿ ಅವರು, ಅಧ್ಯಕ್ಷರ ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ ಮುಕುಂದನ್ ಅವರು ಹಾಗೂ ಅವರ ಸಿಬ್ಬಂದಿ ಇಂತಹ ಜವಾಬ್ದಾರಿಯನ್ನು ವಹಿಸಿದ ಕನ್ನಡ ಪುಸ್ತಕ ಪ್ರಾಧಿಕಾರದ ಗೌರವಾನ್ವಿತ ಸದಸ್ಯರು-ಇವರೆಲ್ಲರ ಸಲಹೆ, ಸಹಕಾರ ನಮಗೆ ದೊರೆತಿರುತ್ತದೆ. ಇದರ ಸಂಪಾದಕ ಸಮಿತಿ ಸದಸ್ಯರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಶ್ರೀಮತಿ ಸುಕನ್ಯಾ ಮಾರುತಿ, ಡಾ. ಹೆಚ್.ಟಿ. ಪೋತೆ, ಶ್ರೀ ಪ್ರಕಾಶ್ ಕಂಬತ್ತಹಳ್ಳಿ- ಇವರೆಲ್ಲರ ಸಲಹೆ, ಸಹಕಾರ ಹಾಗೂ ಸಾಮೂಹಿಕ ಪ್ರಯತ್ನದ ಫಲವಾಗಿ ಈ ಕೃತಿಗಳು ಸಕಾಲದಲ್ಲಿ ಪ್ರಕಟವಾಗಲು ಕಾರಣವಾಗಿದೆ. ಹೀಗೆ ಇಂತಹ ಒಂದು ಅಪರೂಪದ ಯೋಜನೆಯೊಂದನ್ನು ಅನುಷ್ಠಾನಗೊಳಿಸಲು ನೆರವಾದ ಎಲ್ಲರಿಗು ಸಂಪಾದಕ ಸಮಿತಿಯ ಪರವಾಗಿ ಕೃತಜ್ಞತೆಗಳು.

ಡಾ. ಕರೀಗೌಡ ಬೀಚನಹಳ್ಳಿ

ಸಂಪಾದಕ

# ಲೇಖಕರ ನುಡಿ

ಕನ್ನಡ ಪುಸ್ತಕ ಪ್ರಾಧಿಕಾರದಿಂದ "ಬಸವರಾಜ ಕಟೀಮನಿಯವರ ಕಿರು ಹೊತ್ತಿಗೆ ಪ್ರಕಟವಾಗುತ್ತಿರುವುದು ಸಂತಸದ ಸಂಗತಿ. ಕನ್ನಡ ಕಟ್ಟಿದವರು ಮಾಲಿಕೆಯಲ್ಲಿ ಕನ್ನಡ ನಾಡುನುಡಿ, ಸಾಂಸ್ಕೃತಿಕ ಕ್ಷೇತ್ರಕ್ಕೆ ಸೇವೆ ಸಲ್ಲಿಸಿದ ಮಹಾನುಭಾವರ ಜೀವನ ಬದುಕು - ಬರಹ ಕುರಿತು ಪ್ರಕಟಿಸುತ್ತಿರುವ ಕನ್ನಡ ಪುಸ್ತಕ ಪ್ರಾಧಿಕಾರದ ಕಾರ್ಯ ಶ್ಲಾಘನೀಯ.

ಕನ್ನಡ ನಾಡು ನುಡಿಗಾಗಿ ಹೋರಾಡಿದ ಬಿಚ್ಚು ನುಡಿಯ "ಬಸವರಾಜ ಕಟ್ಟೀಮನಿ" ಯವರ ಜೀವನ ಹೋರಾಟಮಯವಾದುದ್ದು ಬಡತನದಲ್ಲಿ ಜನಿಸಿ ಬಡತನದಲ್ಲಿಯೇ ಬದುಕಿ ಬಾಳಿದವರು ಪತ್ರಕರ್ತ, ಕಾದಂಬರಿಕಾರ, ಸಾಹಿತಿ, ಶಾಸಕ, ಹೋರಾಟಗಾರರಾಗಿ ಎಲ್ಲಿಯೂ ನಿಲ್ಲದ ಬದುಕು ಸಾಗಿಸಿದ ದಿಟ್ಟ ಧೀರ ಕನ್ನಡದ ಸುಪುತ್ರ ನಾಡು ನುಡಿಗೆ ಅಪಮಾನ ಅವಮಾನವಾದಲ್ಲಿ ಕೆಂಡ ಕಾರುವ ನಿಷ್ಠುರವಾದಿ ಕನ್ನಡನುಡಿಯ ಅಭಿಮಾನಿ, ಬದುಕಿನುದ್ದಕ್ಕೂ ಕನ್ನಡಕ್ಕಾಗಿ ಶ್ರಮಿಸಿದವರು ಕನ್ನಡ ನುಡಿ ಉಳಿಸಿ ಬೆಳೆಸಿ ಮಾಡಿಮಡಿದವರು.

"ಬಸವರಾಜ ಕಟ್ಟೀಮನಿ" ಯಂಥವರ ಜೀವನಚರಿತ್ರೆ ಸಾಧನೆಗಳನ್ನು ದಾಖಲಿಸುವ ಅವಕಾಶವನ್ನು ನೀಡಿದ ಕನ್ನಡ ಪುಸ್ತಕ ಪ್ರಾಧಿಕಾರ ಅಧ್ಯಕ್ಷರಿಗೂ ಹಾಗೂ ಸಿಬ್ಬಂದಿಯವರಿಗೂ ಕೃತಜ್ಞತೆಗಳು.

ಈ ಕಾರ್ಯದಲ್ಲಿ ಸಹಕಾರ ನೀಡಿದ ಹಿರಿಯ, ಕಿರಿಯ, ಸ್ನೇಹಿತರಿಗೂ ನನ್ನ ವಂದನೆಗಳು.

**ಕೊತ್ತಲ ಮಹಾದೇವಪ್ಪ**

# ಪರಿವಿಡಿ


೦೧ ಪೀಠಿಕೆ

೦೨ ಜನನ ಹಾಗೂ ಬಾಲ್ಯ

೦೩ ಶಿಕ್ಷಣ ೩

೦೪ ಸಂಸಾರಿಕ ಜೀವನ

೦೫ ಬಸವರಾಜ ಕಟ್ಟೀಮನಿ - ಜೀವನ - ವ್ಯಕ್ತಿತ್ವ ವಿಶಿಷ್ಟತೆ

೦೬ ಪತ್ರಿಕೋದ್ಯಮ

೦೭ ಶಾಸಕ ಕಟ್ಟೀಮನಿ

೦೮ ಹೋರಾಟಗಾರ ಕಟ್ಟೀಮನಿ

೦೯ ಕೃತಿಗಳು

೧೦ ಕಟ್ಟೀಮನಿಯವರ ಕಾದಂಬರಿಗಳು

೧೧ ಐತಿಹಾಸಿಕ ಕಾದಂಬರಿಗಳು

೧೨ ರಾಷ್ಟ್ರೀಯತೆಯ ಕಾದಂಬರಿಗಳು

೧೩ ಸಾಮಾಜಿಕ ಕಾದಂಬರಿಗಳು

೧೪ ಕಟ್ಟೀಮನಿಯವರ ಕಥೆಗಳು

೧೫ ಕಟ್ಟೀಮನಿಯವರ ಇತರ ಕೃತಿಗಳು

೧೬ ಕಟ್ಟೀಮನಿಯವರ ಕಾದಂಬರಿ- ಕುರಿತು ಅಭಿಪ್ರಾಯಗಳು

೧೭ ಸಾಹಿತಿಗಳೊಂದಿಗೆ ಪತ್ರ

೧೮ ಕವಿಗಳು ಕಂಡಂತೆ ಬಸವರಾಜ ಕಟ್ಟೀಮನಿ

೧೯ ಸಾಹಿತ್ಯ ಸಮ್ಮೇಳನಾಧ್ಯಕ್ಷತೆ ಪಟ್ಟ

೨೦ ಕೊನೆಯ ದಿನಗಳಲ್ಲಿ

೨೧ ಅನುಬಂಧ - ೧

ಅನುಬಂಧ - ೨

ಅನುಬಂಧ - ೩

೨೨. ಬಸವರಾಜ ಕಟ್ಟೀಮನಿ ಯವರ ಭಾವಚಿತ್ರಗಳು.



**ಕಾದಂಬರಿಕಾರ**

## ಬಸವರಾಜ ಕಟ್ಟೀಮನಿ

## ಸೌಭಾಗ್ಯಸೃಷ್ಟಿ

ಬದುಕು ಬಹು ವಿಸ್ತಾರ, ಬಾಳು ಅಪರಂಪಾರ
ಜೀವನದುದ್ದಕ್ಕೂ ಬೆಳೆವ ಬಾಳ ಬಳ್ಳಿಯ ಬಿಡುವ
ಹೂ - ಕಾಯಿ - ಹಣ್ಣುಗಳಿಗಿಂತ ವಾಸನೆಯೊಗರು
ಸವಿಯನೆಂಬುದನು ತಿಳಿಯುವ ಬಗೆ, ನೆಲದ ಹದವನು ಬಲ್ಲ
ಸಾಹಿತಿಯೇ ಬಲ್ಲ ಕಷ್ಟ ನಿಷ್ಠುರವಿರಲಿ ಜೀವ
ಜಾಲಾಡುತಿಹ ಘೋರ ಬಡತನವಿರಲಿ ಜನರೆದೆಯ
ವಾಣಿಯಿದು ತೆರೆತೆರೆಯೊಳೇಳೂವುದು ಜೀವಂತವಾಣಿ
ಮಲ್ಲಾ(ಡು) ಮರಡಿಯೇಂ? ಹಳ್ಳಿಯೇಂ? ದಿಳ್ಳಿಯೇಂ?
ನಿನ್ನಂತರಂಗದೊಳ್ ಮೂಡಿ ಬೆಳೆಸಿದ ಜನವು
ಮನು ಕುಲದ ಸಂತಾನವಲ್ಲವೇ ಗೆಳೆಯ!
ಮಾಡಿ ನುಡಿದವರೆಲ್ಲರಮರರಾಗಿಹರಿಂದು
ನಿನ್ನೆದೆಯ ಸೌಭಾಗ್ಯ ಸೃಷ್ಟಿಯೊಳು ಮೂಡಿ ಬಂದು
ಸತ್ಯ ಸಮತೆಯ ದೃಷ್ಟಿ, ವೈಭವದ ಪರಿವೃಷ್ಟಿ
ಓ! ಗೆಳೆಯ! ನಿನ್ನ ಸಾಹಿತ್ಯ ಸೃಷ್ಟಿ

-ಕೃಷ್ಣಮೂರ್ತಿ ಪುರಾಣಿಕ

(ಕಾದಂಬರಿಕಾರ ಶ್ರೀ ಬಸವರಾಜ ಕಟ್ಟೀಮನಿಯವರನ್ನು ಕುರಿತು ಕವನ)

# ಪೀಠಿಕೆ

ಸಾಹಿತ್ಯ, ಸಂಗೀತ, ವಾಸ್ತುಶಿಲ್ಪ, ಕ್ಷೇತ್ರಗಳಲ್ಲಿ ತನ್ನದೇ ಆದ ವೈಶಿಷ್ಟ್ಯತೆಯನ್ನು ಹೊಂದಿದ ಉತ್ತರ ಕರ್ನಾಟಕದ ಗಂಡು ಮೆಟ್ಟಿನ ತಾಣ, ಬೆಳಗಾವಿ ಜಿಲ್ಲೆ ಯಾವುದೇ ದೃಷ್ಟಿಯಿಂದ ವೀಕ್ಷಿಸಿದರೂ ಅತ್ಯಂತ ಸಮೃದ್ಧಿ ಹೊಂದಿದ ಸ್ಥಳ ಪ್ರಾಚೀನ ಕಾಲದಿಂದಲೂ ಈ ಪ್ರದೇಶವು ಜ್ಞಾನಿ, ವಿದ್ವಾಂಸ, ಮೇಧಾವಿಗಳನ್ನು ಪಡೆದಿದೆ. ಈ ನೆಲಕ್ಕೆ ಭವ್ಯ ಪರಂಪರೆ ಇದೆ, ಕಿತ್ತೂರರಾಣಿ ಚೆನ್ನಮ್ಮ, ಬೆಳವಡಿ ಮಲ್ಲಮ್ಮ, ಸಂಗೊಳ್ಳಿ ರಾಯಣ್ಣ - ಮುಂತಾದವರ ನೆಲೆವೀಡು. ಇನ್ನೊಂದೆಡೆ ಕವಿಗಳ, ಸಾಹಿತಿಗಳ ಪಾವನ ಪವಿತ್ರ ಭೂಮಿಯೂ ಆಗಿದೆಂಬುದಕ್ಕೆ ಎರಡು ಮಾತಿಲ್ಲ!

ಈ ಜಿಲ್ಲೆ ಆಧುನಿಕ ಸಾಹಿತ್ಯದಲ್ಲಿ ಅನೇಕ ಶ್ರೇಷ್ಠರನ್ನ ನಾಡಿಗೆ ನೀಡಿದ ಹೆಮ್ಮೆಯನ್ನು ಹೊಂದಿದೆ. ಎಂ. ಅಕಬರ ಅಲಿ, ಕೆ.ಜಿ. ಕುಂದಣಗಾರ, ಎಸ್.ಡಿ. ಇಂಚಲ, ಕೃಷ್ಣಮೂರ್ತಿ ಪುರಾಣಿಕ, ನಿಂಗಣ್ಣ ಸಣ್ಣಕ್ಕಿ - ಇವರೆಲ್ಲರು ಕುಂದರ ನಾಡಿನ ಸಾಹಿತ್ಯವಲಯದಲ್ಲಿ ಅಪಾರವಾದ ಕನ್ನಡ ಸೇವೆ ಸಲ್ಲಿಸಿ ಸ್ಮರಣೀಯರಾಗಿದ್ದಾರೆ.

ಇಂಥವರ ಸಾಲಿಗೆ ಸೇರಬೇಕಾದ ಜಿಲ್ಲೆಯ ಕುಂದರನಾಡಿನ ಶ್ರೇಷ್ಠ ಕಾದಂಬರಿಕಾರ, ಬ.ಕ. ಕಾವ್ಯನಾಮದ ಮಾಸ್ತಮರಡಿಯ ಬಸವರಾಜ ಕಟ್ಟೀಮನಿಯವರು, ಇವರು ಅತ್ಯಂತ ಹಿರಿಯ ಕಾದಂಬರಿಕಾರ, ಪತ್ರಿಕಾರಂಗದ ಭೀಷ್ಮರು, ಶ್ರೀಯುತರು ಸಾಹಿತ್ಯ, ನಾಟಕ, ಪತ್ರಿಕಾರಂಗ, ರಾಜಕೀಯ ಕ್ಷೇತ್ರಕ್ಕೆ ಸಲ್ಲಿಸಿದ ಕೊಡುಗೆ ಪ್ರಶಂಸನೀಯವಾದುದು. ಅಂಥ ಕೀರ್ತಿಶಾಲಿ ಸಾಧನ ಜೀವನ ಹಾಗೂ ಸಾಹಿತ್ಯ ಸಾಧನೆಯ ಪರಿಚಯಿಸುವ ಕೃತಿಯಾಗಿದೆ. ಕನ್ನಡ ನಾಡು ನುಡಿಗಾಗಿ ತಮ್ಮನ್ನೇ ಅರ್ಪಿಸಿಕೊಂಡವರು ಬಸವರಾಜ ಕಟ್ಟೀಮನಿ ಅವರು.

ಕಟ್ಟೀಮನಿ ಎತ್ತರದ ನಿಲುವುಳ್ಳ ವ್ಯಕ್ತಿ ಮಾಸಲು ಬಣ್ಣದ ಹೊಳೆಯುವ ಕಣ್ಣು, ನಿಧಾನನಡೆ, ಪೈಜಾಮ ಜುಬ್ಬ, ಮೇಲೊಂದು, ವೇಸ್ಟ್ ಕೋಟ್ ಕಡಿಮೆ ಮಾತುಳ್ಳವರು ಇದುವೇ ಅವರ ಸ್ಥೂಲ ಚಿತ್ರ.

## ಮನೆತನ

ಕಟ್ಟೀಮನಿಯವರ ಮನೆತನ ಶ್ರೀಮಂತಿಕೆಯಿಂದ ಕೂಡಿರದೆ ಬಳಲಿ ಬೆಂಡಾಗಿತ್ತು. ಬಡತನದಲ್ಲಿ, ತಂದೆ ಅಪ್ಪಣ್ಣ ಪೋಲೀಸ್ ಪಡೆಯಲ್ಲಿ ಪೇದೆಯಾಗಿದ್ದರು, ತಾಯಿ ಬಾಳವ್ವ, ಮನೆಗೆಲಸಮಾಡಿ ಹಣ ಸಂಪಾದಿಸಿ ಕುಟುಂಬವನ್ನು ಸಾಗಿಸುತ್ತಿದ್ದಳು. ನಾಲ್ಕು ಮಕ್ಕಳನ್ನು ಸಾಕಲು ದಂಪತಿಗಳು ಮಾಡುತ್ತಿರುವ ಹರಸಾಹಸ ದೇವರಿಗೆ ಪ್ರಿಯವಾಗಿತ್ತೆಂದರೆ ತಪ್ಪಾಗಲಾರದು.

ತಾಯಿ ಹಾಡುತ್ತಿದ್ದ ಜಾನಪದಗಳು ಮಕ್ಕಳಿಗೆ ಒಳ್ಳೆಯ ಸಂಸ್ಕಾರ ಬೀರುವಲ್ಲಿ ಯಶಸ್ಸು ಪಡೆದಿದ್ದವು. ಹೇಳುವ ಕಥೆಗಳು ಮಕ್ಕಳಲ್ಲಿ ಧೈರ್ಯ ಸಾಹಸವನ್ನು ಬೆಳೆಸುವಲ್ಲಿ ಸಹಕಾರಿಗಳಾಗಿದ್ದವು. ಕಟ್ಟೀಮನಿಯವರ ತಂದೆಯ ವರ್ಗಾವಣೆ, ಊರಿಂದ ಊರಿಗೆ ಪ್ರಯಾಣ, ಓದಿಗೆ ಸಂಚಕಾರ, ಮಿತವಾದ, ಆದಾಯದಲ್ಲಿಯೇ ಸರಳ,

ನಿರಾಡಂಬರ ಜೀವನ ನಡೆಸುತ್ತಿದ್ದರು. ನೆರೆಹೊರೆಯವರೊಂದಿಗೆ, ಸಮುದಾಯದವರೊಂದಿಗೆ ಪ್ರೀತಿ, ಸಹಕಾರದಿಂದ ವರ್ತಿಸುವ ಮೂಲಕ ಅಪಾರ ಪ್ರೀತಿಗೆ ಪಾತ್ರರಾಗಿದ್ದರು. ಜೀವನವನ್ನು ಅಚ್ಚುಕಟ್ಟಾಗಿ ಸಾಗಿಸುತ್ತಿದ್ದರು.

ತಾಯಿ ಬಾಳವ್ವ ತುಂಬಾಸಾಧ್ವಿ, ಬಿಚ್ಚೋಲೆಗೌರಮ್ಮ ಮನೆತನದ ಗೌರವವನ್ನು ರಕ್ಷಿಸುವಲ್ಲಿ ಸದಾ ಪ್ರಯತ್ನಿಸುತ್ತಿದ್ದರು ಅಭ್ಯಾಸ ಬಲದಿಂದಲೇ ಸಭ್ಯತೆ, ಸಂಸ್ಕೃತಿಯನ್ನು ಹೊಂದಿದ್ದಳು. ಸಂಸಾರ ನಡೆಸಲು ಶ್ರಮ, ಆತ್ಮ ಗೌರವದಿಂದ ಕಾಪಾಡಿಕೊಂಡು ಬಂದಿದ್ದಳು.

ಕಟ್ಟೀಮನಿಯವರಿಗೆ ಮೂವರು ಸಹೋದರರು. ಒಬ್ಬ ಅಣ್ಣ-ಇನ್ನಿಬ್ಬರು ತಮ್ಮಂದಿರು, ಅಣ್ಣನಿಗೆ ಮನೆತನದ ಚಿಂತೆವಿರಲಿಲ್ಲ, ಆದರೆ ಬಸವರಾಜ ಅಣ್ಣನ ಗುಣಕ್ಕೆ ತದ್ವಿರುದ್ದ ಅನ್ಯರ ಹಂಗಿನಲ್ಲಿ ಬದುಕಲು ಇಚ್ಚಿಸುತ್ತಿರಲಿಲ್ಲ.

ತಮ್ಮ ಜೀವನದ ಹೋರಾಟದ ಬಗ್ಗೆ ಕಟ್ಟೀಮನಿಯವರು ಕೆಳಗಿನಂತೆ ಸ್ವಾರಸ್ಯವಾಗಿ ವಿವರಿಸುತ್ತಾರೆ- "ಐವತ್ತು ವರ್ಷ ಆಯುಷ್ಯದಲ್ಲಿ ನಲವತ್ತರಷ್ಟು ಬರಿ ಹೋರಾಟದಲ್ಲಿಯೇ ಸವೆದದ್ದು, ಜೀವನವಿಡೀ ಅಲೆದಾಟ ತಪ್ಪಲಿಲ್ಲ. ಬದುಕಲು ಹೋರಾಟ, ಬೆಳೆಯಲು ಹೋರಾಟ, ತಿಳಿಯಲು ಹೋರಾಟ, ಜೀವನದುದ್ದಕ್ಕೂ ಎಲ್ಲವೂ ಹೋರಾಟವೇ ಆಯಿತು".

## ಜನನ ಹಾಗೂ ಬಾಲ್ಯ

ಬೆಳಗಾವ ಜಿಲ್ಲೆಯ ಹುಕ್ಕೇರಿ ತಾಲೂಕಿನ ಶಿರೂರು ಕಟ್ಟೀಮನಿ ಅವರ ತಂದೆ ಅಪ್ಪಣ್ಣವರ ಊರು. ಇದೇ ಜಿಲ್ಲೆಯ ಗೋಕಾಕ್ ತಾಲೂಕಿನ ಮಲಾಮರಡಿ ತಾಯಿ ಬಾಳವ್ವನ ತವರೂರು. ಕಟ್ಟೀಮನಿಯವರು ೫-೧೦-೧೯೧೯ ರಂದು ಶುಭ ಮೂಹೂರ್ತದಲ್ಲಿ ಮಲಾಮರಡಿಯಲ್ಲಿ ಜನಿಸಿದರು. ಇವರು ಅಪ್ಪಣ್ಣ ಹಾಗೂ ಬಾಳವ್ವರ ಸಂಸಾರದಲ್ಲಿ ಸಂತಸವನ್ನು ತಂದಿತು. ಮನೆಯವರ ಸಲಹೆಯಂತೆ ಹುಟ್ಟಿದ ಗಂಡು ಕೂಸಿಗೆ 'ಬಸವರಾಜ' ವೆಂದು ನಾಮಕರಣ ಮಾಡಿದರು. ನಾಲ್ವರು ಮಕ್ಕಳಲ್ಲಿ ಎರಡನೇ ಮಗನಾದ ಬಸವರಾಜರ ಮೇಲೆ ವಿಶೇಷ ಪ್ರೀತಿ. ಬಡತನವಿದ್ದರೂ ಬಾಲ್ಯದಲ್ಲಿಯೇ ಮಕ್ಕಳಲ್ಲಿ ಧೈರ್ಯ, ತಾಳ್ಮೆ, ಸಹನೆಯನ್ನು ಕಲಿಸುವುದರಲ್ಲಿ ಹಿಂದೆ ಬೀಳಲಿಲ್ಲ. ಮಕ್ಕಳು ವಿದ್ಯಾವಂತರಾಗಲು ಹಗಲಿರುಳು ಶ್ರಮಿಸುತ್ತಿದ್ದ ಬಾಳವ್ವನ ಕಳಕಳಿ ಮೆಚ್ಚುವಂತಹುದು. ತನ್ನ ವಿರಾಮದ ಸಮಯದಲ್ಲಿ ಮಕ್ಕಳಿಗೆ ಓದುಬರಹದಲ್ಲಿ ಅಸಕ್ತಿಯನ್ನುಂಟು ಮಾಡುತ್ತಿದ್ದಳು.

"ನಾನಂತೂ ಸಾಲೀ ಕಲೀಲಿಲ್ಲ ನಿಮ್ಮಪ್ಪನೂ ಕಲೀಲಿಲ್ಲ ನನ್ನ ಮಕ್ಕಳು ನೀವಾದರೂ ಕಲೀರಪ್ಪಾ, ಕಲಿತು ಶ್ಯಾಣ್ಯಾರಾಗ್ರಿ, ಎಂದು ತಾಯಿ ಹೇಳುವ ಮಾತಂತೂ ಮಕ್ಕಳ ಅಭಿವೃದ್ಧಿಗೆ ಹಿಡಿದ ರನ್ನಗನ್ನಡಿ, ತಾಯಿಯ ಮಾತು ವೇದವಾಕ್ಯ, ತಾಯಿ ಅಭಿಲಾಷೆಯನ್ನು ಪೂರೈಸಲು ಬಾಲ್ಯದಲ್ಲಿಯೇ ಛಲವು ಚಿಗುರು ಒಡೆಯಿತು.

ಬಸವರಾಜರು ಬಡಮಕ್ಕಳೊಂದಿಗೆ ಹೆಚ್ಚಾಗಿ ಬೆರೆಯುತ್ತಿರಲಿಲ್ಲ ತನ್ನ ಮನೆಗೆಲಸವಾಯ್ತು ತಾನಾಯ್ತು. ತಾಯಿಗೆ ಕೆಲಸದಲ್ಲಿ ಸಹಕರಿಸುತ್ತಿದ್ದರು. ಶಾಲೆಗೆ ಚಕ್ಕರ್ ಹೊಡೆಯುವುದು ಅವರಿಗಾಗುತ್ತಿರಲಿಲ್ಲ. ಸಮಯಕ್ಕೆ ಸರಿಯಾಗಿ ಶಾಲೆಗೆ ಹೋಗಿ ಗುರುಗಳು ಹೇಳಿದ್ದ ಪಾಠವನ್ನು ಗಮನವಿಟ್ಟು ಕಲಿಯುತ್ತಿದ್ದರು.

## ಶಿಕ್ಷಣ

ಬಾಲಕ ಬಸವರಾಜ ಆರುವರ್ಷಗಳು ತುಂಬುತ್ತಿದ್ದಂತೆಯೇ ಮಲಾಮರಡಿಯ ಪ್ರಾಥಮಿಕ ಶಾಲೆಗೆ ಸೇರಿಸಿದರು. ಶಾಲೆಯಲ್ಲಿದ್ದಾಗ ಬಸವರಾಜನು ಆಟ ಪಾಠಗಳಲ್ಲಿ ಆಸಕ್ತಿ, ಗುರುಹಿರಿಯರಲ್ಲಿ ಶ್ರದ್ಧೆ, ಭಕ್ತಿ ಮೈಗೂಡಿಸಿಕೊಂಡು ನಡೆದರು. ಇಂಥ ಮಗನನ್ನು ಪಡೆದದ್ದು ನನ್ನ ಸೌಭಾಗ್ಯವೆಂದು ತಾಯಿ ಬಾಳವ್ವ ಹೆಮ್ಮೆ ಪಟ್ಟಿದ್ದಳು.

ಕಟ್ಟೀಮನಿಯವರ ತಂದೆ ತಾಯಿಯವರು ವಿದ್ಯಾವಂತರಾಗದಿದ್ದರೂ ಮಕ್ಕಳು ವಿದ್ಯಾವಂತರಾಗಬೇಕೆಂದು ಆಸೆ ಪಟ್ಟವರು. ಬೆಳಿಗ್ಗೆ ಐದು ಗಂಟೆಗೆ ತಂದೆ ಅಪ್ಪಣ್ಣರು ಪರೇಡಿಗೆ ಹೋಗುವ ಮುನ್ನ ಎಬ್ಬಿಸುತ್ತಿದ್ದರು. ಓದಲು ಕೂಡ್ರಿಸಿ ಹೋಗುತ್ತಿದ್ದರು. ಮಕ್ಕಳು ಶಾಲೆಗೆ ತಪ್ಪದೇ ಹೋಗಬೇಕಾಗುತ್ತಿತ್ತು. ಇಲ್ಲದಿದ್ದರೆ ಏಟುಗಳನ್ನು ತಿನ್ನಬೇಕಾಗುತ್ತಿತ್ತು. ತಾಯಿಯು ವಿಶೇಷ ಕಾಳಜಿವಯಿಸುತ್ತಿದ್ದಳು.

ಬೆಳಗಾವಿಯಲ್ಲಿ ಮುಲ್ಕಿಪರೀಕ್ಷೆ (ಇಂದಿನ ಏಳನೆಯ ತರಗತಿ) ತೇರ್ಗಡೆಯಾದರು. ಶ್ರೀ ಪ್ರ.ಗೋ. ಕುಲಕರ್ಣಿ ಮಾಸ್ತರ್‌ರು ಬಾಲಕನಿಗೆ ಪುಸ್ತಕ ನೋಟ್ ಬುಕ್ ನೀಡುತ್ತಾ, ಕನ್ನಡಭಾಷೆಯನ್ನು ಸ್ವಾರಸ್ಯಕರವಾಗಿ ಭೋಧಿಸುತ್ತಿದ್ದರು.

ಮುಲ್ಕಿ ಪರೀಕ್ಷೆಯಲ್ಲಿ ಉತ್ತೀರ್ಣನಾದ ನಂತರ ಬೆಳಗಾವದ ಗಿಲಗಂಚಿ ಅರಟಾಳ ಹೈಸ್ಕೂಲಿನಲ್ಲಿ ಸ್ಪೇಶಲ್ ತರಗತಿಗೆ ಸೇರಿದರು. ಶಾಲೆಯ ಶಿಕ್ಷಕರಾದ ಬಿ.ಬಿ. ಮಮದಾಪುರ, ಪಟ್ಟಣಶೆಟ್ಟಿ, ಮೊದಲಾದವರು ಕಟ್ಟೀಮನಿಯವರ ಸಾಹಿತ್ಯ ಪ್ರೇಮವನ್ನು ಕಂಡು ಸಂತಸಪಟ್ಟರು. ತಂದೆ ಅಪ್ಪಣ್ಣನಿಗೆ ಪುಣೆಗೆ ವರ್ಗವಾದದ್ದರಿಂದ ಹೋದರು. ಅಲ್ಲಿಯ ಮರಾಠಿ ಭಾಷೆಯ ಶಾಲೆಯಿದ್ದ ಕಾರಣ ಕಲಿಯಲು ಆಗದ ಕಾರಣ ಪುನಃ ಬೆಳಗಾವಿಗೆ ಬಂದರು. ಆರ್ಥಿಕ ಮುಗ್ಗಟ್ಟಿನಿಂದ ಕಟ್ಟೀಮನಿಯವರು ಬೆಳಗಾವಿಯಲ್ಲಿ ಪತ್ರಿಕೆಯನ್ನು ಮಾರಿ ತಮ್ಮ ವಿದ್ಯಾಭ್ಯಾಸ ಪೂರೈಸಿಕೊಳ್ಳಬೇಕಾಯಿತು. ಆ ಪುಡಿಗಾಸು ಅಧ್ಯಯನಕ್ಕೆ ಆಧಾರವಾಯಿತು. ಕಟ್ಟೀಮನಿಯವರ ಓದು ಕ್ರಮೇಣ ಕುಂಟುತ್ತ ಸಾಗಿ ಸಾಗಿ ಕಲಿಯುವಿಕೆಯಲ್ಲಿ ಆಸಕ್ತಿಯನ್ನು ಕಳೆದುಕೊಂಡರು.

## ಸಂಸಾರಿಕ ಜೀವನ

ಕಟ್ಟೀಮನಿಯವರ ವಿವಾಹವು ಯಲಹಂಕದ ನಂಜುಂಡರ ಸಹೋದರಿ ಗಂಗಮ್ಮರೊಂದಿಗೆ ೧೯೪೪ ರಲ್ಲಿ ಬಸವಜಯಂತಿಯಂದು ವಿವಾಹವಾಯಿತು. ಈ ದಂಪತಿಗಳಿಗೆ ಇಬ್ಬರು ಗಂಡು, ಮೂವರು ಹೆಣ್ಣುಮಕ್ಕಳು,

ಜಯಪ್ರಕಾಶ, ರಾಜಶೇಖರ, ಹಾಗು ಹೆಣ್ಣುಮಕ್ಕಳಾದ ಶಕುಂತಲಾ, ನೀಲವ್ವಾ, ಮಂಜುಳಾ, ಗಂಗಮ್ಮ ಶಹರ ಜೀವನಕ್ಕೆ ಒಗ್ಗಿದವರು. ಬಸವರಾಜರು ಹಳ್ಳಿಯ ಪರಿಸರದಲ್ಲಿ ಹುಟ್ಟಿ ಬೆಳೆದವರು ಸಾಮರಸ್ಯದಲ್ಲಿ ಕೊರತೆ ಕಂಡರೂ ಜೊತೆ ಜೊತೆಯಾಗಿ ಸಂತಸದ ಬಾಳನ್ನು ಬಾಳಿದವರು. ಗಂಗಮ್ಮ ಹೆಚ್ಚು ಓದಿಲ್ಲದಿದ್ದರೂ ಸುಸಂಸ್ಕೃತರು.

೧೮-೧೧-೧೯೮೪ ರಂದು ಕಟ್ಟೀಮನಿಯವರ ಧರ್ಮಪತ್ನಿ ಗಂಗಮ್ಮ ನಿಧನರಾದರು. ಸುಖಸಂಸಾರಕ್ಕೆ ಸಿಡಿಲು ಬಡಿದಂತಾಯಿತು. ಇಳಿವಯಸ್ಸಿನಲ್ಲಿ ಜೀವನ ಸಂಗಾತಿ ಕಳೆದುಕೊಂಡು ವಿಧುರರಾಗಿದ್ದು ವಿಧಿ ವಿಲಾಸವೇ ಸರಿ!

## ಬಸವರಾಜ ಕಟ್ಟೀಮನಿ, ವ್ಯಕ್ತಿತ್ವ ವಿಶಿಷ್ಟತೆ

ಕಟ್ಟೀಮನಿಯವರು ಬಹುಮುಖ ವ್ಯಕ್ತಿತ್ವವುಳ್ಳವರು. ಮೃದು ಸ್ವಭಾವ ಅಷ್ಟೇ ಕಠೋರ, ಜನರ ಕಷ್ಟ ನಷ್ಟಗಳಿಗೆ ಸದಾ ಕ್ರಿಯಾಶೀಲರಾಗಿ ಸ್ಪಂದಿಸುವಂತಹವರು. ಕನ್ನಡ ಕಟ್ಟಾಳು ಕನ್ನಡದ ನುಡಿಗೆ ಅರ್ಪಿಸಿಕೊಂಡವರು, ಹುಬ್ಬಳ್ಳಿ, ಬೆಳಗಾವಿ ಜನ ಹಿತಕ್ಕಾಗಿ ಮುಂಚೂಣಿಯಲ್ಲಿ ನಿಂತು ಹೋರಾಡಿದ ಅನೇಕ ನಿದರ್ಶನಗಳಿವೆ.

ಬಡತನದ ಸಾಗರವನ್ನು ಈಜುತ್ತಾ ಬಂದ ಅವರ ಎದೆ ಗಟ್ಟಿಯಾಗಿತ್ತು. ಶೋಷಕವರ್ಗದವರಿಗೆ ಸಿಂಹಸ್ವಪ್ನರಾಗಿದ್ದರು. ಶೋಷಣೆಯ ಎದುರು ಸಿಡಿದು ನಿಲ್ಲುವ ಕ್ರಾಂತಿಕಾರಿ ಮನೋಭಾವದವರು. ಈ ಗುಣ ಅವರ ರಕ್ತದ ಕಣ ಕಣದಲ್ಲೂ ಬೆರೆತುಕೊಂಡಿತ್ತು. ಮುಚ್ಚು ಮರೆವಿರಲಿಲ್ಲ. ಒಳಗೊಂದು ಹೊರಗೊಂದು ಗುಣ ಅವರಲ್ಲಿ ಎಳ್ಳಷ್ಟುವಿರಲಿಲ್ಲ "ಆರು ಮುನಿದು ಏನು ಮಾಡುವರು" ಅಣ್ಣ ಬಸವಣ್ಣನವರ ನುಡಿಯು ಇವರಿಗೆ ಅತ್ಯಂತ ಸೂಕ್ತವಾಗಿತ್ತು. ಬರಹದಲ್ಲೂ ಬಂಡಾಯದ ಮಾರ್ಗ ಹಿಡಿದು ಸಮಾಜದಲ್ಲಿಯ ಅಸಮಾನತೆಯನ್ನು ನಿವಾರಿಸಲು ಸದಾ ಯತ್ನಿಸಿದವರು.

ಕಟ್ಟೀಮನಿಯವರ ಸಾಹಿತ್ಯದ ಬರವಣಿಗೆಯಲ್ಲಿ ಪ್ರಗತಿಪರ ತತ್ವದ ಮನೋಧರ್ಮವಿದೆ. ಗ್ರಾಮೀಣ ಜನತೆಯ ಕಲ್ಯಾಣದ ಕಳಕಳಿಯಿದೆ. ಜೀವನದುದ್ದಕ್ಕೂ ನಂಜುಂಡು, ನಂಜುಂಡರಾಗಿ ಸಾರ್ಥಕ ಬದುಕನ್ನು ಅನುಭವಿಸಿದವರು ಮಹಾಸ್ವಾಭಿಮಾನಿಯಾದ ಕಟ್ಟೀಮನಿಯವರು ಅಹಂಕಾರಿಯಾಗಲಿಲ್ಲ. ದುರಭಿಮಾನಿಯಂತೂ ಅಲ್ಲವೇಅಲ್ಲ. ಸ್ವಾಭಿಮಾನಕ್ಕೆ ಪೆಟ್ಟುತಾಗಿದಲ್ಲಿ ಸಿಡಿಗುಂಡಿನಂತೆ ಸಿಡಿಯುತ್ತಿದ್ದರು.

ಇವರ ಸರಳತೆಗೆ ಅವರು ತೊಡುವ ಉಡುಪುಗಳೇ ಸಾಕ್ಷಿ, ನುಡಿದಂತೆ ನಡೆದ ಲೇಖಕ, ಪದವಿ ಪುರಸ್ಕಾರಗಳ ಮೋಹಕ್ಕೆ ಅಂಟಿಕೊಂಡವರಲ್ಲ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿ ಗಾಂಧೀ ತತ್ವಗಳನ್ನು ಚಾಚೂ ತಪ್ಪದೇ ಅಳವಡಿಸಿಕೊಂಡವರು. ಸಾಮಾಜಿಕ ಮೌಲ್ಯಗಳನ್ನು ಎತ್ತಿ ಹಿಡಿಯಲು ಶ್ರಮಿಸಿದವರು.

ಶಿವರಾಮಕಾರಂತರು ಕಡಲತೀರದಭಾರ್ಗವರಾದಂತೆ ಕಟ್ಟೀಮನಿಯವರು ಬೆಳವಲ ನಾಡಿನ ಭಾರ್ಗವರೆಂದೇ ಖ್ಯಾತರಾಗಿದ್ದವರು.

ಕಾದಂಬರಿಕಾರ ಕಟ್ಟೀಮನಿಯವರು ಧಾರವಾಡದ ಸಾಧನಕೇರಿಯಲ್ಲಿಯ ಮನೆಗೆ ಕಾದಂಬರಿ ಎಂದು ಹೆಸರಿಟ್ಟರು ಅಂಕಣಕಾರರಾಗಿ ಹುಬ್ಬಳ್ಳಿಯ ಕರ್ಮವೀರ ವಾರಪತ್ರಿಕೆಗೆ 'ಶಾಸಕಸಾಹಿತಿಯ ಸಂಪುಟದಿಂದ' ಅನುಭವ ಪೂರ್ಣತೆಯುಳ್ಳ ಲೇಖನಗಳನ್ನು ಬರೆದರು. 'ಹೇಳುವುದೊಂದು ಮಾಡುವುದು ಇನ್ನೊಂದು' ಇಂಥ ರಾಜಕಾರಣಿಗಳನ್ನು ಟೀಕಿಸಿ ಅವರನ್ನು ಸರಿದಾರಿಗೆ ತರುತ್ತಿದ್ದರು. ಕ್ರಾಂತಿಕಾರಿ ಬದುಕನ್ನು ಎದುರಿಸಿ ಬದುಕಿದ ಕ್ರಾಂತಿಕಾರಿ ಸಾಹಿತಿ.

ಕಿತ್ತೂರ ನಾಡಿನಲ್ಲಿ ಜನ್ಮತಾಳಿದ ಧೀರ ಪುತ್ರರು, ವೀರ ಭೂಮಿಯ ನೆಲದ ಗುಣವೇ ಅಂತಹದು. ಆಷಾಢಭೂತಿ ವಿರುದ್ಧ ಯಾವ ಲೇಖಕರೂ ಚಕಾರವೆತ್ತದಿದ್ದ ಸಮಯದಲ್ಲಿ ಕಟ್ಟೀಮನಿಯವರು ತಮ್ಮ ಹರಿತ ಲೇಖನಿಗಳಿಂದ ಅಭಿವ್ಯಕ್ತಗೊಳಿಸಿದ ವಿಶೇಷ ಗುಣವು ಅನುಕರಣೀಯವಾದುದು.

ಕಟ್ಟೀಮನಿಯವರ ಬದುಕು ಅಲೆಮಾರಿ ಬದುಕು. ತುತ್ತಿನ ಚೀಲ ತುಂಬಿಸಲು ಸದಾಕಾಲ ಪರದಾಟ. ಒಂದೂರಿನಲ್ಲಿ ಎಂದಿಗೂ ನೆಲೆಸಲಿಲ್ಲ, ನಾರದನಂತೆ ಸದಾ ಸಂಚಾರಿ. ಗದಗ, ಹುಬ್ಬಳ್ಳಿ, ಬೆಂಗಳೂರು, ಬೆಳಗಾವ, ದಾವಣಗೆರೆ, ಧಾರವಾಡ ಹೀಗೆ ಊರೂರು ಅಲೆದಾಡಿ ಪತ್ರಿಕಾರಂಗದಲ್ಲಿ ಅಸ್ಥಿರ ಬದುಕನ್ನು ಕಂಡುಂಡವರು. ಇವರ ನಿಷ್ಟುರ ಸ್ವಭಾವವೇ ಮೂಲಕಾರಣ. ಒಳ್ಳೆಯದನ್ನು ಹೊಗಳುವುದು ಕೆಟ್ಟದ್ದನ್ನು ಟೀಕಿಸುವುದು ಇವರ ಸ್ವಭಾವವಾಗಿತ್ತು. ಕೆಟ್ಟದ್ದು ಅರಮನೆಯಲ್ಲಿರಲಿ ಗುರುಮನೆಯಲ್ಲಿರಲಿ ಅದನ್ನು ಬಯಲುಮಾಡುವುದೇ ಇವರ ಧ್ಯೆಯವಾಗಿತ್ತು. ಒಟ್ಟಾರೆ ಕಟ್ಟೀಮನಿ ಹೋರಾಟ ಜೀವಿ.

ಬಸವರಾಜರ ಸಿದ್ಧಿಯ ದಾರಿ ಸುಗಮವಾಗಿರಲಿಲ್ಲ. ನಿರುತ್ಸಾಹದ ಬದುಕಿನಲ್ಲಿಯೇ ಬದುಕಬೇಕಾದಪರಿಸ್ಥಿತಿ. ಸ್ವಪ್ರಯತ್ನ ಪ್ರಾಮಾಣಿಕ ಸಾಧನೆಗಳಿಂದ ಅವಕಾಶಗಳನ್ನು ಸೃಷ್ಟಿಸಿಕೊಂಡು ಬೆಳೆದವರು. ಬದುಕಿನ ಶಾಲೆಯಲ್ಲಿ ಓದಿ ಅನುಭವಗಳಿಸಿದರು. ಕನ್ನಡಕಟ್ಟಾಳು, ಮಹಾಸೇನಾನಿ, ಸಂಸ್ಕೃತಿಯ ಸಂರಕ್ಷಕರು.

ಕಟ್ಟೀಮನಿಯವರ ವ್ಯಕ್ತಿತ್ವದ ಬಗ್ಗೆ ಹೇಳುವುದು ಕಷ್ಟ. 'ಮಣ್ಣಿನ ಕೂಸು ಕಟ್ಟೀಮನಿ' ವೆಂದು ದೇಜಗೌ ಎಂದಿದ್ದಾರೆ. ಡಾ|| ಹಾ. ಮಾ. ನಾಯಕರು ಹೀಗೆ ಹೇಳಿದ್ದಾರೆ: "ಕಟ್ಟೀಮನಿಯವರು ಸುಖ ನೆಮ್ಮದಿಗಳನ್ನು ಕಂಡರೆಂಬುದು ಅನುಮಾನ, ನಿಜದರ್ಥದಲ್ಲಿ ಇವರೊಬ್ಬರು ಬಂಡಾಯಗಾರ, ಅನ್ಯಾಯ, ಅಸಮಾನತೆ, ಶೋಷಣೆ, ಜಾತಿಯತೆಗಳಿಗೆ ವಿರೋಧಿಯಾಗಿದ್ದರು.

ಕಟ್ಟೀಮನಿಯವರು ನಡೆನುಡಿಯಲ್ಲಿ ಬಹಳ ಶಿಸ್ತು ಯಾರನ್ನು ಒಲೈಸಿದವರಲ್ಲ. ಅವರು ಯಾರ ದಾಕ್ಷಿಣ್ಯಕ್ಕೆ ಒಳಗಾದವರಲ್ಲ. ರಾಜಕೀಯ ವ್ಯಕ್ತಿಯಲ್ಲದಿದ್ದರೂ ರಾಜಕಾರಣಿಗಳ ಜೊತೆ-ಜೊತೆ-ಕಾರ್ಯನಿರ್ವಹಿಸಲು ಸೂಕ್ತ

ಮಾರ್ಗದರ್ಶನ ನೀಡಿದವರು. ಗಡಿನಾಡ ಜನರ ಸಮಸ್ಯೆಗಳಿಗೆ ಸ್ಪಂದಿಸಿ ಎಲ್ಲಾ ರೀತಿಯ ಸೌಲಭ್ಯಗಳನ್ನು ಸರ್ವರಿಗೂ ಸಮನಾಗಿ ವಿತರಿಸಲು ಸರಕಾರಕ್ಕೆ ತಮ್ಮ ಮಾತಿನ ಶೈಲಿಯಲ್ಲಿ ಸರಕಾರಕ್ಕೆ ತಿಳಿಸಿದವರು.

ಕಟ್ಟೀಮನಿಯವರು ಅನುಭವಿಸಿದ ಕಷ್ಟ ನಷ್ಟಗಳೆಷ್ಟೋ!? ದುಃಖ ದುಮ್ಮಾನ ಗಳೆಷ್ಟೋ!? ಕನಸು ನನಸುಗಳೆಷ್ಟೋ!? ಸಿಹಿ ಕಹಿ ಸವಿದದ್ದು ಅವರ ಸಾಹಿತ್ಯ ಸೃಷ್ಟಿಯಲ್ಲಿ ಪಲ್ಲವಿಸಿದೆ.

ಬಸವರಾಜ ಕಟ್ಟೀಮನಿಯವರು ನಿಧನರಾದ ದಿನ (೨೩-೧೦-೧೯೮೯) ದಂದು ಅವರ ವ್ಯಕ್ತಿತ್ವ ಕುರಿತು ಕವಿ ಸಾದರ ಪಡಿಸಿದ ಕವನ **ಬಸವರಾಜ ಕಟ್ಟೀಮನಿಯವರ ನೆನಪು**

ಕಪ್ಪು ಕನ್ನಡಕ, ನೋಟ ಕೆಂಪುಜ್ವಾಲೆ
ಬಗಲ ಚೀಲದ ತುಂಬ ಬಂಡಾಯ ಬದ್ಧತೆ
ನಿಧಾನ ನಡೆದಾಟ ಹುಳ ಹುಪಡಿ
ಮೊಸಳೆ ತಿಮಿಂಗಲ ಹುಡಕಾಟ
ಬಕ ಧ್ಯಾನ ಪ್ರಗತಿಯೋಗಕ್ಕೆ ಕ್ರಾಂತಿಯ ತೇರು
ಛತ್ರಿ ಕೈಯಲ್ಲಿ ನೊಂದವರ ನೆರಳಿಗೆ
ಆಗೊಮ್ಮೆ ಈಗೊಮ್ಮೆ ಪ್ರಶ್ನೆಬಡಿಗೆ
ಹಸಿವಿನೂಟ, ನಿರಾಶೆ ನೀರು
ನೋವಿನ ಬುತ್ತಿ ದಾರಿಯುದ್ದಕ್ಕೂ
ಸ್ಲಮ್ಮು, ಗುಡಿಸಲು, ಕೊಚ್ಚೆ
ರಸ್ತೆ ಬದಿ ಬಿಳಿ ಜೋಳ ಹೊಲದಾರಿ ಪಾಚಿಗೆ
ನಡೆದದ್ದೇ ನಡೆದದ್ದು ಅಲೆಮಾರಿ ವೃತ್ತಿ
ನಿತ್ಯ ಮಸೆಯುತ್ತ ನೋವಿನ ಕತ್ತಿ
ರಂಟೆ, ಕುಂಟೆ ಕೈ ಕುಡುಗೋಲು ಸುತ್ತಿಗೆ ಎತ್ತಿ ಹೊತ್ತ ತಲೆ
ಶೂಲೆಗೊಂಡರೂ ದಣಿವರಿಯದ ಛಲ,
ಕುಂದರನಾಡಿನ ನೆಲದ ಫಲ!
ಎದೆತುಂಬ ಕರುಣೆ ಕಬ್ಬಿಣ ಕಲ್ಲಿಗೆ
ಗುಂಡು ಹಾರಿದರೂ ಜೀವ ಕೈಯಲ್ಲಿ ಹಿಡಿಯದ ಧೀರ
ಬತ್ತಳಿಕೆ ತುಂಬ ಕೂರಸಿ ಕುಠಾರ
ಕುಟ್ಟಿದ್ದೇ ಕುಟ್ಟಿದ್ದು ಕುಟ್ಟೋ ಶನಿಯಾಗಿ
ಕಾವಿ, ಖಾದಿ, ಖಾಕಿ ಪ್ರಾಣಿಗಳ ಬೆನ್ನಟ್ಟಿ
ಬೆತ್ತಲೆಗೊಳಿಸಿ ಹರಾಜಿಗಿಟ್ಟಿದ್ದೇ ಇಟ್ಟಿದ್ದು
ದೇಶ, ರಾಜ್ಯ, ನಾಡು- ನುಡಿ ಸಮಾಜದ ಸ್ವಾತಂತ್ರ್ಯದೆಡೆಗೆ
ಸಾಗುವ ಹಟಕ್ಕೆ ಮಾಡುತ್ತಲೇ ಮಡಿದ ವೀರ.

ಎಳೆವಾಗ ಸಂಸಾರದ ತೇರ ಕಾದಂಬರಿ ಮಾರಿ
ಕಟ್ಟಿದ ಸಾಹಿತ್ಯ ಸಿರಿತಲೆ ಎದೆ- ಮೈ- ಮನಗಳ ತುಂಬ
ತಪ್ಪಲಿಲ್ಲ ವಾರೆ ಜಪ್ಪರದ ವಾಸ, ಸುತ್ತಣ ಮೋಸ
ಎಲ್ಲ ಮಾಡಿಯೂ ಏನೂ ಪಡೆಯದ ರೋಷ
ನೋವಿನ ರೈಲು, ಬ್ರೇಕಿಲ್ಲದ ಓಟ, ಆಗಾಗ ಅಷ್ಟಿಷ್ಟು ಹೊಯ್ದಾಟ
ಎಚ್ಚರಿಕೆ ತಡೆಯೊಡ್ಡಿದಾಗ ಟ್ರಕ್ಕಿನುತ್ತರ ಮತ್ತೆ ಹೊಸ ನಡೆ
…………………………………………………………………..
ಬೆಳೆದ ಮರ ಬಿಳಲು ಬಿಟ್ಟರೂ
ನೆಲಕ್ಕಿಳಿಯಲೇ ಇಲ್ಲ ಕಾಂಡ ಕಾಯಲೇ ಇಲ್ಲ
ಏನೆಲ್ಲ ಕತ್ತರಿಸಿ, ಕಡಿದು, ಮುರಿದು
ನಿಗಿ ನಿಗಿ ಕುಪ್ಪಡಿಗೆ ಹೊತ್ತಿಸಿ
ಹೊತ್ತು ಬೆಂಕಿಯ ಕುಂಡ ಸಾಗಿದ್ದೇ ಸಾಗಿದ್ದು
ಸುಟ್ಟದ್ದೆಷ್ಟೋ ! ಸುಡಿಸಿಕೊಂಡದ್ದೆಷ್ಟೋ!!
ಪ್ರಗತಿ ಪಂಜಿನ ಮೆರವಣಿಗೆ
………………………………
ಆಯಾಸಗೊಂಡ ಜೀವ ಜ್ವಾಲಾಮುಖಿಯ
ಕನಸ ಕಾಣುತ್ತ ಮಲಗಿರಬೇಕು.
ಮುಂಜಾನೆಯ ಸೂರ್ಯ
ಚುಮು ಚುಮು ಕೆಂಪಿನ ಮಾತು ಕೊಟ್ಟಾಗಲೇ
ಹೊಣೆ ಹೊರಿಸಿ ಉಸಿರ ನಿಲ್ಲಿಸಿದ್ದು
ಉಸಿರೊಡನೆ ಲೇಖನಿ ಕೆಳಗಿಟ್ಟಿದ್ದು.

## ಪತ್ರಿಕೋದ್ಯಮ

ಪತ್ರಿಕೋದ್ಯಮವು ಅಂದು ಬರಹಗಾರರನ್ನು ಆಕರ್ಷಿಸುತ್ತಿದ್ದ ವೃತ್ತಿಯಾಗಿತ್ತು. ತ.ರಾ.ಸು. ಶಿವರಾಮಕಾರಂತ, ಸಿದ್ದನಹಳ್ಳಿ ಕೃಷ್ಣ ಶರ್ಮ............ ಮುಂತಾದವರು ಪತ್ರಿಕೆಯನ್ನು ನಡೆಸಿದವರು ತಿಳಕ, ಮಹಾತ್ಮಾಗಾಂಧೀಜಿಯವರು ಕೂಡಾ ಪತ್ರಿಕೆಯನ್ನು ಪ್ರಕಟಿಸಿ ಅನುಭವ ಪಡೆದವರಾಗಿದ್ದರು. ಪತ್ರಿಕೆಯು ಕೂಡಾ ಪ್ರಮುಖ ಅಸ್ತ್ರವೆಂದೇ ಹೇಳುತ್ತಾರೆ.

ಕಟ್ಟೀಮನಿಯವರ ಬದುಕು ಪತ್ರಿಕೋದ್ಯಮಕ್ಕೆ ಮೀಸಲಾಗಿತ್ತು. ತಮ್ಮ ತೀಕ್ಷ್ಣ ಬರವಣಿಗೆಗಳಿಂದ ಓದುಗರನ್ನು ಸೂಜಿಗಲ್ಲಿನಂತೆ ತಮ್ಮತ್ತ ಸೆಳೆದಿದ್ದರು 'ಸಂಯುಕ್ತ ಕರ್ನಾಟಕ', 'ತರುಣ ಕರ್ನಾಟಕ' ಗದುಗಿನ 'ಕರ್ನಾಟಕ ಬಂಧು' ಪತ್ರಿಕಾಲಯದಲ್ಲಿ ದುಡಿದರು. ಆಗ್ಗೆ ಉಪವಾಸ, ಶೋಷಣೆಗಳನ್ನು ಅನುಭವಿಸಿದರು.

'ಸಂಯುಕ್ತಕರ್ನಾಟಕ' ಒಂದು ಪ್ರಮುಖ ಸುದ್ದಿ ಪತ್ರಿಕೆ, ಅದರ ಸಂಪಾದಕರಾಗಿದ್ದ ಡಾ. ರಂಗನಾಥ ದಿವಾಕರರು ಕಟ್ಟೀಮನಿಯವರಿಗೆ ಪರಿಚಿತರಾಗಿದ್ದ ಕಾರಣ ೧೯೩೩ರಲ್ಲಿ ಪತ್ರಿಕೆಗಳಿಗೆ ಬರೆಯುತ್ತಿದ್ದರು ಪತ್ರಿಕೆಯಲ್ಲಿರುವಾಗಲೇ ಬದುಕಿನ ಹಲವಾರು ಜನರ ಪರಿಚಯವಾಯಿತು. ಬರಹದಲ್ಲಿಯೂ ಚಾಕಚಕ್ಯತೆಯನ್ನು ತೋರಿಸಿದರು. ಬೆಂಗಳೂರಿನಲ್ಲಿದ್ದಾಗ ಕನ್ನಡದ ಖ್ಯಾತ ಸಾಹಿತಿಗಳ ಪರಿಚಯವಾಯಿತು. ಒಂದು ಸಲ ಸಂಪಾದಕರ ಗಮನಕ್ಕೆ ತರದೆ ಪತ್ರಿಕೆಯಲ್ಲಿ ಒಂದು ಲೇಖನ ಪ್ರಕಟಿಸಿ ಸಂಪಾದಕರ ಕೋಪಕ್ಕೆ ಗುರಿಯಾದರು. ದಿವಾಣರ ಬಗ್ಗೆ ಟೀಕೆಯು ಅವರ ಕೃಪೆಗೆ ಪಾತ್ರರಾದ ಸಂಪಾದಕರಿಗೆ ಸರಿ ಎನಿಸದೇ ಮಾತಿನ ಘರ್ಷಣೆಯಿಂದ ನೊಂದುಕೊಂಡರು. ಪುನಃ ನೌಕರಿಗಾಗಿ ಅರಸಬೇಕಾಗಿತ್ತು. ಪತ್ರಿಕಾ ವ್ಯವಸಾಯ ಹೂವಿನ ಹಾಸಿಗೆಯಲ್ಲ, ಕಟು ಅನುಭವ ಪಡೆದ ಕಟ್ಟೀಮನಿಯವರ ಶ್ರದ್ಧೆ, ಆಸಕ್ತಿಗಳಿಗೆ ತೊಂದರೆಯಾಗಿರಲಿಲ್ಲ. ಅಧ್ಯಯನ ಚಿಂತನೆ, ಹರಿತವಾದ ಶೈಲಿಯಿಂದ ಜನಪ್ರಿಯತೆಯನ್ನು ಗಳಿಸಿದ್ದರು. ದೇಶದಲ್ಲಿ ಕ್ವಿಟ್ ಇಂಡಿಯಾ ಚಳವಳಿಯು ಆಗಸ್ಟ್ ೧೯೪೨ರಲ್ಲಿ ನಡೆಯಿತು. ಬ್ರಿಟೀಷರೇ ಭಾರತವನ್ನು ಬಿಟ್ಟು ತೊಲಗಿರಿ ಎಂದು ಮಹಾತ್ಮಾ ಗಾಂಧೀಜಿಯವರು ಗುಡುಗಿದರು. ಅದರಲ್ಲಿ ಅಸಂಖ್ಯಾತ ದೇಶ ಬಾಂಧವರು ಭಾಗವಹಿಸಿದರು. ಕಟ್ಟೀಮನಿಯವರು ಕೂಡಾ ಸಕ್ರಿಯವಾಗಿ ಭಾಗವಹಿಸಿ ಬಂಧಿತರಾದರು. ಹಿಂಡಲಗಿ ಜೇಲನ್ನು ಸೇರಿದರು. ಕ್ರಾಂತಿ ಮನೋಭಾವನೆಯುಳ್ಳ ಕಟ್ಟೀಮನಿಯವರು ಸುಮ್ಮನಿರದೇ ಹಲವಾರು ಕಥೆಗಳನ್ನು ಬರೆದು ಪ್ರಕಟಿಸಿದರು. ನೆಹರು, ತಿಲಕ. ಮೊದಲಾದ ರಾಷ್ಟ್ರೀಯ ನಾಯಕರು ಸೆರೆಮನೆಯಲ್ಲಿದ್ದರು.

ಅಮೂಲ್ಯವಾದ ಕೃತಿಗಳನ್ನು ರಚಿಸಿದ್ದಾರೆ. ಇದೇ ವೇಳೆಗೆ ಪ್ರಗತಿಶೀಲ ಚಳವಳಿ ಪ್ರಾರಂಭಗೊಂಡಿತ್ತು. ಉತ್ತರ ಕರ್ನಾಟಕದಲ್ಲಿ ಅದರಲ್ಲೂ ಮರಾಠಿ ಪ್ರಭಾವವಿದ್ದ ಕಾರಣ ನೊಂದು ರಾಷ್ಟ್ರೀಯ ಹಾಗೂ ಕನ್ನಡ ಪ್ರಜ್ಞೆಗಾಗಿ ಶ್ರಮಿಸಿದರು.

ಸೆರೆಮನೆಯಿಂದ ಬಿಡುಗಡೆಗೊಂಡ ನಂತರ ಆತ್ಮೀಯರಾದ ಎಸ್. ನಂಜಪ್ಪನವರು ಕಟ್ಟೀಮನಿಯವರನ್ನು ಬೆಂಗಳೂರಿಗೆ ಕರೆತಂದರು. 'ಉಷಾ' ಪತ್ರಿಕೆಯಲ್ಲಿ ಬೆಂಗಳೂರಿಗೆ ಕರೆತಂದರು. ಉಷಾ ಪತ್ರಿಕೆಯು ಕಾರ್ಯಾರಂಭಗೊಂಡಿತು. ಅಲ್ಲಿ ಕೆಲಕಾಲ ನಿಸ್ಪೃಹ ಸೇವೆಯನ್ನು ಸಲ್ಲಿಸಿದರು. ಆ ಕಾಲಕ್ಕೆ ಕಥೆಗಳಿಗಾಗಿ 'ಉಷಾ' ಪತ್ರಿಕೆಯು ಜನಪ್ರಿಯವಾಗಿತ್ತು. ಹಿರಿಯ, ಕಿರಿಯ, ಬರಹಗಾರರ ಕಥೆಗಳನ್ನು ಪ್ರಕಟಿಸಿ ಕಟ್ಟೀಮನಿಯವರು ಪ್ರೋತ್ಸಾಹಿಸಿದರು.

ಅದೇ ಸಮಯಕ್ಕೆ ಬೆಂಗಳೂರಿನಲ್ಲಿಯೇ 'ಸ್ವತಂತ್ರ' ಹಾಗೂ ' ಕರ್ನಾಟಕ ಬಂಧು' ಗಳಂತಹ ವಾರ ಪತ್ರಿಕೆಗಳಲ್ಲಿ ಸೇವೆ ಗಳಿಸಿ ಹೆಸರು ಮಾಡಿದರು. ಹನ್ನೆರಡು ವರ್ಷಕಾಲ ಸಾರ್ಥಕ ರೀತಿಯಿಂದ ಪತ್ರಿಕಾ ರಂಗದಲ್ಲಿ ಸೇವೆ ಸಲ್ಲಿಸಿದರು.

ಕಟ್ಟೀಮನಿಯವರು ಯಾವಾಗಲು ನೇರವಾಗಿ ಮಾತನಾಡುವ ಸ್ವಭಾವದವರಿದ್ದರು. ಅನ್ಯಾಯಕ್ಕೆ ಎಂದಿಗೂ ರಾಜಿಮಾಡಿಕೊಳ್ಳದ ಸ್ವಭಾವದವರಿದ್ದರು.

# ಶಾಸಕ ಕಟ್ಟೀಮನಿ

ಕಾದಂಬರಿಕಾರ ಬಸವರಾಜ ಕಟ್ಟೀಮನಿಯವರು ಪತ್ರಿಕಾ ರಂಗದಲ್ಲಿದ್ದಾಗ ಕೋ. ಚನ್ನಬಸಪ್ಪ, ಎಂ. ಅಕಬರಲಿ ನಿರಂಜನ, ಮುಂತಾದವರ ಕತೆ, ಕವನಗಳನ್ನು ಪ್ರಕಟಿಸಿ ಚಿರಪರಿಚಿತರಾಗಿದ್ದರು.

೧೯೪೨ ರಿಂದಲೂ ಕಟ್ಟೀಮನಿಯವರಿಗೆ ರಾಜಕೀಯದಲ್ಲಿ ಆಸಕ್ತಿಯಿದ್ದರೂ ಅಷ್ಟು ಗಂಭೀರವಾಗಿ ಪರಿಗಣಿಸಿರಲಿಲ್ಲ ಸಾಹಿತ್ಯವನ್ನು ನೆಚ್ಚಿ ರಾಜಕೀಯ ಕ್ಷೇತ್ರಕ್ಕೆ ಪ್ರವೇಶಿಸಲಿಲ್ಲ.

೧೯೬೮ ರಲ್ಲಿ ಕರ್ನಾಟಕ ರಾಜ್ಯದ ವಿಧಾನ ಪರಿಷತ್ತಿಗೆ ನಾಮಕರಣಗೊಂಡು ನೇರವಾಗಿ ರಾಜಕೀಯಕ್ಕೆ ಪ್ರವೇಶವಾದರು. ಸಾಮಾನ್ಯ ಜನರ ಹಾಗೂ ಸಾಹಿತ್ಯ ಕ್ಷೇತ್ರದ ಹಲವಾರು ಕುಂದುಕೊರತೆಗಳನ್ನು ವ್ಯಕ್ತಪಡಿಸಲು ಇದೊಂದು ಉತ್ತಮ ಅವಕಾಶವೆಂದು ಭಾವಿಸಿದರು. ಶಾಸಕರಾದ ನಂತರ ಅನೇಕರು ತಮ್ಮ ತಮ್ಮ ತೊಂದರೆಗಳನ್ನು ನಿವೇದಿಸಿಕೊಂಡರು ಅವೆಲ್ಲ ಸಮಸ್ಯೆಗಳನ್ನು ಪರಿಶೀಲಿಸಿ ಸೂಕ್ತ ಪರಿಹಾರವನ್ನು ಒದಗಿಸಿಕೊಟ್ಟರು.

ಶಾಸಕರಾದವರು ತಮ್ಮ ತಮ್ಮ ಮತಕ್ಷೇತ್ರಗಳಿಗೆ ಹೋಗಿ ಜನತೆಯ ಸಂಕಷ್ಟಗಳಿಗೆ ಸ್ಪಂದಿಸಬೇಕೆಂದು ಕಿವಿಮಾತು ಹೇಳಿದರು. ಸರಕಾರದಿಂದ ದೊರೆತ ಸಹಾಯವನ್ನು ಪ್ರಜೆಗಳಿಗೆ ತಲುಪಿಸಲು ಪ್ರಾಮಾಣಿಕ ಪ್ರಯತ್ನಗೈದರು. ಆಡಳಿತ ಕ್ರಮಕ್ಕೆ ಕಾಯಕಲ್ಪಗೈಯಲು ಸರಕಾರವನ್ನ ಕಟ್ಟೀಮನಿಯವರು ಒತ್ತಾಯ ಮಾಡಿದರು.

ಹೈದರಾಬಾದ್ ಕರ್ನಾಟಕದಲ್ಲಿಯ ಶೈಕ್ಷಣಿಕ ಪರಿಸ್ಥಿತಿಯನ್ನು ಎತ್ತರಿಸಲು ಶ್ರಮಿಸಿದರು. ಕೆಲ ವಿಚಾರಗಳಲ್ಲಿ ದಿಟ್ಟತನದಿಂದ ವರ್ತಿಸಿದರು. ಕಲೆ ಮತ್ತು ಶೈಕ್ಷಣಿಕ ಪ್ರಗತಿಗೆ ವಿಶೇಷ ಕಾಳಜಿ ಹೊಂದಿ ಉತ್ತರ ಕರ್ನಾಟಕದ ಜಿಲ್ಲೆಗಳಾದ ಧಾರವಾಡ, ಕಾರವಾರ, ಬೆಳಗಾವ ಮತ್ತು ಬಿಜಾಪುರ ಜಿಲ್ಲೆಗಳ ಸ್ಕೂಲ್ ಬೋರ್ಡ್ (D.S.B) ಶಿಕ್ಷಕರ ಸಮಸ್ಯೆಗಳನ್ನು ಗಮನಿಸಿ ನಿವಾರಣೆಗೆ ಹೋರಾಟಗೈದರು.

ಆಡಳಿತ ಭಾಷೆ ಕನ್ನಡವಾಗಬೇಕೆಂಬ ಪ್ರಬಲ ಇಚ್ಛೆಯಾಗಿತ್ತು. ಕನ್ನಡಕ್ಕಾಗಿ ಶ್ರಮಿಸಿದ ಡಾ|| ಡಿ. ಜವರೇಗೌಡರನ್ನು ಪ್ರಬುದ್ಧ ಕರ್ನಾಟಕದ ಚಿನ್ನದ ಹಬ್ಬದಂದು ಅಭಿನಂದಿಸಿ ಗೌರವಿಸಿದ್ದು ಕಟೀಮನಿಯವರ ಹೃದಯ ವಿಶಾಲತೆಯನ್ನು ತೋರು ತ್ತದೆ. ಬಸವರಾಜರು "ಜ್ವಾಲಾಮುಖಿಯ ಮೇಲೆ" ಕಾದಂಬರಿಗೆ ಸೋವಿಯೆಟ್ ದೇಶದ ನೆಹರೂ ಪ್ರಶಸ್ತಿ ಪಡೆಯಲು ಹೋಗಿ ರಶಿಯಾ ದೇಶದಲ್ಲಿ ಕನ್ನಡದ ಕಂಪನ್ನು ಪಸರಿಸಿದ್ದಾರೆ.

ವಿಧಾನ ಪರಿಷತ್ತಿನ ಒಳಗೂ ಹೊರಗೂ ತಮ್ಮ ಕ್ರಾಂತಿ ಮನೋಧರ್ಮವನ್ನು ತೋರಿದ್ದಾರೆ. ಜನಪರ ಕಾರ್ಯಗಳು ಪ್ರಗತಿ ಪಥದಲ್ಲಿ ಸಾಗಲು ಕೈಲಾದಮಟ್ಟಿಗೆ ಯತ್ನಿಸಿದರು. ಕರ್ನಾಟಕ ವಿಶ್ವವಿದ್ಯಾಲಯದ ಸಿನೇಟ್ ಸದಸ್ಯರಾಗಿ ೧೯೬೯ ರಿಂದ ೧೯೭೨ ರ ವರೆಗೆ ಸೇವೆ ಸಲ್ಲಿಸಿದರು. ಕನ್ನಡನುಡಿ ಬೆಳೆಯಲು ಉಳಿಸಲು ಸದಾ

ಪ್ರಯತ್ನಿಸಿದರು. ಶಾಸಕರಾಗಿ ಆಳುವ ಸರಕಾರದಿಂದ ಸನ್ಮಾನಗೊಂಡಿದ್ದರು. ಶಾಸಕರಾಗಿದ್ದ ಸಮಯದಲ್ಲಿ ಸೂಕ್ಷ್ಮತೆ ಮತ್ತು ಸೃಜನ ಶೀಲತೆ ಮರೆಯಾಗಿತ್ತೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆದರೆ ರಾಜಕೀಯವು ಸಾಹಿತಿಗಳಿಗೆ ಒಗ್ಗದೆಂದು ಅಭಿಪ್ರಾಯವಾಗಿತ್ತು.

## ಹೋರಾಟಗಾರ ಕಟ್ಟೀಮನಿ

೧೯೪೨ ರಲ್ಲಿ ಸ್ವಾತಂತ್ರ್ಯಕ್ಕಾಗಿ ಬ್ರಿಟೀಷರವಿರುದ್ಧ ದೇಶಾದ್ಯಂತ ಹೋರಾಟ ಚಳುವಳಿ ಬಿರುಸಾಗಿ ನಡೆದವು. ಬಿಸಿರಕ್ತದ ತರುಣ ಬಸವರಾಜ ಕಟ್ಟೀಮನಿಯವರು ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಚಲೇಜಾವ್ ಚಳುವಳಿಯು ದೇಶದ ಉದ್ದಗಲಕ್ಕೂ ಹಬ್ಬಿಕೊಂಡಿತ್ತು. ಇದರಂಗವಾಗಿ ಧಾರವಾಡದಲ್ಲೂ ಪ್ರತಿಭಟನಾ ಮೆರವಣಿಗೆ ಪ್ರಾರಂಭವಾಗಿತ್ತು. ಇದರಲ್ಲಿ ಕಟ್ಟೀಮನಿ ಅವರು ಭಾಗವಹಿಸಿ' ಇಂಕ್ವಿಲಾಬ್ ಜಿಂದಾಬಾದ್' ಘೋಷಣೆ ಕೂಗಿದರು. ಬ್ರಿಟಿಷರ ದುಷ್ಟ ಆಡಳಿತಕ್ಕೆ ಬೇಸತ್ತು ೧೯೪೨ ಆಗಸ್ಟ್ ೯ ರಂದು ಧಾರವಾಡದ ಕಡಪಾ ಮೈದಾನದಲ್ಲಿ ಉಗ್ರ ಪ್ರತಿಭಟನಾ ಕಾರ್ಯಕ್ರಮ ಜರುಗಿತು. ಡಾ|| ಕಲ್ಲೂರ್ ಅವರ ಭಾಷಣ ಪ್ರಾರಂಭಗೊಂಡಾಗ ಪೋಲೀಸರು ಲಾಠಿ ಚಾರ್ಜ್ ಮಾಡಿ ಸಭೆಯನ್ನು ವಿಸರ್ಜಿಸಲು ಯತ್ನಿಸಿದರು. ಆಗ್ಗೆ ಕಟ್ಟೀಮನಿಯವರು ಏಟು ತಿಂದು ಪ್ರಮುಖರೊಂದಿಗೆ ಬಂಧಿತರಾದರು. ವಿಚಾರಣೆಯ ನಂತರ ದೋಷ ಮುಕ್ತರಾಗಿ ಹೊರಗಡೆ ಬಂದರು.

ಕಟ್ಟೀಮನಿಯವರು ಬಂಧನದಿಂದ ಬಿಡುಗಡೆಯಾದ ನಂತರ 'ರಣಭೇರಿ' ಯೆಂಬ ಕರಪತ್ರಗಳನ್ನು ಬರೆದು ರಾತ್ರೋ ರಾತ್ರಿಯಲ್ಲಿ ಸ್ನೇಹಿತರೊಂದಿಗೆ ಧಾರವಾಡದ ವಿವಿಧ ಪ್ರಮುಖ ಭಾಗದ ಗೋಡೆಗೆ ಅಂಟಿಸಿದರು. ೧೯೪೨ ಆಗಸ್ಟ್ ೧೯ ರಂದು ಸರ್ಕಾರ ಇವರನ್ನು ಭಾಷಣ ಮಾಡುವ ಸಮಯಕ್ಕೆ ಬಂಧಿಸಿತು. ಅಪರಾಧಿ ವಿಚಾರಣೆ ನಂತರ ೬ ತಿಂಗಳ ಶಿಕ್ಷೆ ನೀಡಿ ಇವರನ್ನು ಹಿಂಡಲಗಿ. ಸೆರೆಮನೆಗೆ ಕಳಿಸಿತು. ಜೈಲಿನಲ್ಲಿಯೇ ಕಿಸಾನಮಜದೂರ ಸಮಸ್ಯೆ, ಗಾಂಧೀಜಿ ಚರಿತ್ರೆ, ಹಿಂದು ಮುಸ್ಲಿಂ ಸಮಸ್ಯೆ ಕುರಿತು ಸಮಗ್ರವಾಗಿ ಅಧ್ಯಯನ ಗೈದರು. ಅನೇಕ ಕತೆಗಳನ್ನು ಜೇಲಿನಲ್ಲಿಯೇ ರಚಿಸಿದರು. ಮಾನವ ಸ್ವಭಾವದ ನೂರಾರು ಮುಖಗಳ ಪರಿಚಯವಾಯಿತೆಂದು ಹೇಳಿದ್ದಾರೆ.

ಪ್ರಾಥಮಿಕ ಶಿಕ್ಷಣದಲ್ಲಿ ಕನ್ನಡವನ್ನು ಕಡ್ಡಾಯವಾಗಿ ಅನುಷ್ಟಾನಕ್ಕೆ ತರಲು ಸರಕಾರ ಗೋಕಾಕ ಸಮಿತಿಯನ್ನು ನೇಮಿಸಿತು. ಡಾ. ವಿ.ಕೃ. ಗೋಕಾಕರವರು ವರದಿಯನ್ನು ಸರಕಾರಕ್ಕೆ ಸಲ್ಲಿಸಿದ್ದರು. ಆದರೆ ಸರಕಾರವು ವರದಿಯನ್ನು ಅನುಷ್ಟಾನಕ್ಕೆ ತರಲು ಮೀನ ಮೇಷವನ್ನು ಮಾಡಿದಾಗ ರಾಜ್ಯದ ತುಂಬ ಪ್ರತಿಭಟನೆಯು ಚಳುವಳಿ ಸ್ವರೂಪ ತಾಳಿತು. ೧೯೮೨ರಲ್ಲಿ ನಡೆದ ಗೋಕಾಕ್ ಚಳುವಳಿಗೆ ಸಂಬಂಧಿಸಿದಂತೆ ಶಿಕ್ಷಣತಜ್ಞರು, ಸಾಹಿತಿಗಳಲ್ಲಿ ಭಿನ್ನಾಭಿಪ್ರಾಯ ಮೂಡಿತು. ಕನ್ನಡ ಭಾಷೆಯನ್ನು ಕಡ್ಡಾಯ ಮಾಡಿದರೆ ಅಲ್ಪಸಂಖ್ಯಾತರ ಹಿತಾಶಕ್ತಿಗೆ ಧಕ್ಕೆಯುಂಟಾಗಬಹುದೆಂಬ ಅಪಸ್ವರ ಕೇಳಿಬಂದ ಹಿನ್ನೆಲೆಯಲ್ಲಿ ರಾಜ್ಯದ ತುಂಬ ಗೋಕಾಕ ವರದಿ ಬಗ್ಗೆ ಚಳುವಳಿ ಪ್ರಾರಂಭವಾಯಿತು.

ಧಾರವಾಡದಲ್ಲಿ ನಾಡೋಜ ಡಾ॥ ಪಾಟೀಲ ಪುಟ್ಟಪ್ಪ ಅವರ ನೇತೃತ್ವದಲ್ಲಿ ಚಳುವಳಿ ಉಗ್ರ ಸ್ವರೂಪ ತಾಳಿತು. ಗೋಕಾಕ ವರದಿ ಜಾರಿಗೆ ಬರಲೆಂದು ಕಟ್ಟೀಮನಿಯವರು ಸರ್ಕಾರ ೧೪೪ನೇ ಕಾಲಂ ಜಾರಿ ಗೊಳಿಸಿದರೂ ಗಮನಿಸದೇ ಹೋರಾಟಕ್ಕೆ ಅಣಿಯಾದರು. ಕವಿ ಚೆನ್ನವೀರ ಕಣವಿ, ಡಾ. ರಾ.ಯ. ಧಾರವಾಡಕರ, ವೆಂಕಟೇಶ್ ಕುಲಕರ್ಣಿ, ಡಾ. ಆರ್.ಸಿ. ಹಿರೇಮಠ... ಮೊದಲಾದವರನ್ನು ಪೋಲೀಸರು ಬಂಧಿಸಿದರು. ಸತತ ಹೋರಾಟದ ಸ್ವರೂಪ ಕಂಡು ಸರ್ಕಾರವು ತನ್ನ ಬಿಗಿಪಟ್ಟನ್ನು ಸಡಿಲಗೊಳಿಸಿತು. ದಿನಾಂಕ ೨೪-೦೬-೧೯೮೨ರಲ್ಲಿ ರಾಜ್ಯಾದ್ಯಂತ ವಿಜಯೋತ್ಸವ ಆಚರಿಸಲಾಯಿತು. ಆ ಸಮಯಕ್ಕೆ ಬಸವರಾಜ ಕಟ್ಟೀಮನಿಯವರು ಅನಾರೋಗ್ಯದಿಂದ ಬಳಲುತ್ತಿದ್ದರು ಕಾರ್ಯಕ್ರಮದಲ್ಲಿ ಭಾಗವಹಿಸಿ ಸಂತಸ ಹಂಚಿಕೊಂಡರು. ಕನ್ನಡ ಕ್ರಿಯಾ ಸಮಿತಿ ಈ ಉಗ್ರ ಹೋರಾಟದಲ್ಲಿ ಗದುಗಿನ ತೋಂಟದಾರ್ಯ ಮಠದ ಶ್ರೀ ಸಿದ್ಧಲಿಂಗ ಸ್ವಾಮಿಜಿ ಮತ್ತು ವರನಟ ಕರ್ನಾಟಕ ರತ್ನ ಡಾ॥ ರಾಜ್ ಕುಮಾರ್ ಅವರು ಹೋರಾಟದಲ್ಲಿ ಭಾಗವಹಿಸಿದ್ದು ಮರೆವಂತಿಲ್ಲ. ಇವೆಲ್ಲರ ಸಹಕಾರದಿಂದ ಕಟ್ಟೀಮನಿಯವರಿಗೆ ಅಪಾರ ಸಂತಸವಾಯಿತ್ತು.

ಹೋರಾಟದ ಇನ್ನೊಂದು ಹೆಸರೇ ಕಟ್ಟೀಮನಿಯವರು ಇವರ ಕ್ರಿಯಾಶೀಲತೆಗೆ, ಗೋಕಾಕ ಚಳುವಳಿಯೇ ಪ್ರಮುಖವಾದುದು. ಇವರು ಶಿಸ್ತಿನ ಸಿಪಾಯಿ ತೆರದಿ ಹೋರಾಟದಲ್ಲಿ ಭಾಗಿಗಳಾಗಿ ಯಶಸ್ಸು ಕಂಡರು.

## ಕೃತಿಗಳು

ಬಸವರಾಜ ಕಟ್ಟೀಮನಿಯವರು ಕಾದಂಬರಿ, ಸಣ್ಣಕಥೆ, ನಾಟಕ, ಮಕ್ಕಳ ಸಾಹಿತ್ಯ, ಜೀವನ ಚರಿತ್ರೆ, ಆತ್ಮಕಥೆ ಪ್ರವಾಸ ಕಥನ, ಗ್ರಂಥ ಸಂಪಾದನೆ ಈ ಪ್ರಕಾರ ಸಾಹಿತ್ಯ ರಚನೆ ಗೈದಿದ್ದಾರೆ. ಇವರು ಕಾದಂಬರಿಕಾರರಾಗಿಯೇ ಖ್ಯಾತರಾಗಿದ್ದಾರೆ. ಇವರ ಕೃತಿಗಳ ಮೇಲೆ ಪಾಶ್ಚಾತ್ಯ ಲೇಖಕರ ಪ್ರಭಾವವಾಗಿದೆಂದರೆ ತಪ್ಪಾಗದು. ಬರಹಗಳಲ್ಲಿ ಕ್ರಾಂತಿಯ ಕಾವುಂಟು. ಪ್ರಗತಿಶೀಲ ವಿಚಾರವನ್ನು ಅಳವಡಿಸಿಕೊಂಡ ಲೇಖಕರು.

ಕಟ್ಟೀಮನಿಯವರು ಹಳ್ಳಿಯ ಪರಿಸರದಲ್ಲಿ ಹುಟ್ಟಿ ಬೆಳೆದವರು. ಹಳ್ಳಿಯ ಜೀವನ ಕ್ರಮವನ್ನು ಚೆನ್ನಾಗಿ ಬಲ್ಲವರು.

ಬಡತನ, ಹಸಿವು ಶ್ರಮ, ಪ್ರೀತಿ, ಶೋಷಣೆ, ಮುಗ್ಧತೆ ಹೀಗೆಲ್ಲ ಪ್ರಮುಖ ಮುಖಗಳ ಪರಿಚಯವುಳ್ಳವರು. ಅನ್ಯಾಯದ ವಿರುದ್ಧ ಲೇಖನಿಯನ್ನು ಎತ್ತದೆ ಬಿಡಲಿಲ್ಲ, ತೆರೆದ ಕಣ್ಣುಗಳಿಂದ ಸಮಾಜ ಕಂಡು ಅವುಗಳಲ್ಲಿಯ ನ್ಯೂನತೆಗಳನ್ನು ಚಿತ್ರಿಸಿದರು. ಪ್ರಗತಿಶೀಲ ಕಮ್ಯುನಿಸ್ಟರ ಧೋರಣೆಗಳನ್ನು ಮೈಗೂಡಿಸಿಕೊಂಡವರು. ಲೇಖನಿ ಇವರ ಕ್ರಾಂತಿಕಾರಿ ಮನಸ್ಸಿಗೆ ಪ್ರಬಲ ಆಯುಧವು.

ಕಟ್ಟೀಮನಿಯವರ ಕಥೆ, ಕಾದಂಬರಿಗಳಲ್ಲಿಯ ವರ್ಣನೆಗಳು ಅದ್ಭುತ. ಭಾಷೆಯ ಮೇಲಿನ ಹಿಡಿತ ಓದುಗರನ್ನು ಚುಂಬಕದಂತೆ ಸೆಳೆಯಿತು. 'ಸ್ವಾತಂತ್ರ್ಯದೆಡೆಗೆ', 'ಜ್ವಾಲಾಮುಖಿಯ ಮೇಲೆ', 'ಜರತಾರಿ ಜಗದ್ಗುರು' ಜನಿವಾರ ಮತು ಶಿವದಾರ ಹರಿಜನಾಯಣ', ಬೀದಿಯಲ್ಲಿ ಬಿದ್ದವಳು'............ ಮೊದಲಾದ ಕಾದಂಬರಿಗಳು

ಎಂದೆಂದಿಗೂ ಓದುವಂತಹವು. ಅವುಗಳಲ್ಲಿ ಮಾಡಿ ಮಡಿದವರು 'ಪೌರುಷ ಪರೀಕ್ಷೆ ಎಂತಹವರನ್ನಾದರೂ ಚಿಂತನೆಗೆ ಹಚ್ಚುವಂತಹ ಆತ್ಮಕತೆಯೆಂದರೆ ಅತಿಶಯೋಕ್ತಿಯೆನಿಸದು.

ಕೆಲವು ಕಾದಂಬರಿಗಳು ಪ್ರತಿರೋಧವನ್ನುಂಟು ಮಾಡಿದವು. ಅವರ ದಿಟ್ಟತನವೇ ಕಾರಣವೆನ್ನಬಹುದು. ಸಮಾಜದಲ್ಲಿಯ ಆಷಾಢ ಭೂತಿಗಳ ಕೃತ್ಯವನ್ನು ಬಯಲಿಗೆ ತರುವಲ್ಲಿ ಹಿಂದೆ ಬೀಳಲಿಲ್ಲ. ಸಾಹಿತ್ಯದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯವಿರಬೇಕೆಂಬುದು ಅವರ ಅಭಿಪ್ರಾಯವಾಗಿತ್ತು. ಧಾರ್ಮಿಕ ಡಾಂಭಿಕತೆ, ಸಮಾಜದಲ್ಲಿ ಅಸಮಾನತೆಗಳನ್ನು ನೋಡಿದಾಗ ಕೋಪಗೊಳ್ಳುತ್ತಿದ್ದರು. ದಿಟ್ಟತನವು ಅವರ ಹುಟ್ಟುಗುಣವೇ ಆಗಿತ್ತು.

ಪ್ರಗತಿ ಶೀಲ ಸಾಹಿತ್ಯದ ಬಗ್ಗೆ ಅವರದೇ ಆದ ವಿಚಾರಧಾರೆಗಳಿದ್ದವು. ಪ್ರಗತಿ ಶೀಲರೆಂದು ಬಾಹ್ಯದಲ್ಲಿ ಸೋಗು ಹಾಕಿ ವಾಚಕರನ್ನು ಮರುಳು ಮಾಡುವವರನ್ನು ಕಂಡಾಗ ಎಲ್ಲಿಲ್ಲದ ಕೋಪ. ಅಶ್ಲೀಲವನ್ನೇ ವಿನಾಕಾರಣ ಸಾಹಿತ್ಯದಲ್ಲಿ ತರುವುದನ್ನು ಅಲ್ಲಗಳೆಯುತ್ತಿದ್ದರು. ಪ್ರಗತಿಶೀಲ ಸಾಹಿತ್ಯಕ್ಕೆ ಗೊತ್ತು ಗುರಿಗಳಿಲ್ಲದಾಗ ಅದಕ್ಕೆ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿ ಹೊರಬಂದರು.

ಕಟ್ಟೀಮನಿಯವರ ಕೃತಿಗಳಲ್ಲಿ ಪ್ರಗತಿ ತತ್ವದ ಮನೋಧರ್ಮವಿದೆ. ಜನತೆಯ ಕಲ್ಯಾಣದ ಕಳಕಳಿಯಿದೆ ಅಸಹಾಯಕ ಸ್ಥಿತಿಯವರ, ಗ್ರಾಮೀಣಜನರ, ಶೋಷಿತ ವರ್ಗದವರ ಕೃಷಿಕಾರ್ಮಿಕರ ದಾರುಣ ಚಿತ್ರಗಳನ್ನು ಚಿತ್ರಿಸಿದ್ದಾರೆ. ಬರಹಕ್ಕೆ ಕಥಾವಸ್ತುವನ್ನು ಹುಡುಕುವ ಪ್ರಮೇಯವಿರಲಿಲ್ಲ. ದೊರಕಿದ ಯಾವುದೇ ವಸ್ತುವನ್ನು ಅಂದವಾಗಿ ಪಳಗಿದ ಕೈಯಲ್ಲಿ ಕೃತಿಗಿಳಿಸುವ ಪ್ರತಿಭಾವಂತರು. ತಮ್ಮ ಸುತ್ತಲಿನ ಸಮಸ್ಯೆಗಳೇ ಬರಹಕ್ಕೆ ವಸ್ತು. ದೂರದ ದೇಶದ ಹೋರಾಟಗಳನ್ನು ಆಯ್ಕೆ ಮಾಡಿದವರಲ್ಲ. ನೈಜ ಚಿತ್ರಣಗಳೇ ತುಂಬಾ ಪ್ರಿಯವಾದುದು. ವೈವಿಧ್ಯತೆಯನ್ನು ಎತ್ತಿ ತೋರಿಸಿ ಒಂದು ಸಂದೇಶವನ್ನು ತೋರಿಸುವಲ್ಲಿ ತುಂಬಾ ಯಶಸ್ವಿಯಾದವರು.

ಕಟ್ಟೀಮನಿ ಅವರ ಕಾದಂಬರಿಗಳು ಸಾಹಿತ್ಯ ಪ್ರಕಾರಗಳಲ್ಲಿ ಕಾದಂಬರಿ ಪ್ರಭಾವಶಾಲಿಯಾದುದು. ಈ ಮಾತು ಕನ್ನಡ ಸಾಹಿತ್ಯಕ್ಕೆ ಮಾತ್ರ ಅನ್ವಯಿಸದೆ ವಿಶ್ವದ ಎಲ್ಲ ಸಾಹಿತ್ಯಕ್ಕೂ ಅಳವಡಿಸುತ್ತದೆ. ಇದು ಒಂದು ಮಾಧ್ಯಮ. ಮಾನವರಲ್ಲಿ ಕಥೆಯನ್ನು ಹೇಳುವ ಕೇಳುವ ಆದಿಕಾಲದಿಂದಲೂ ಜನಪ್ರಿಯವಾದ ಮನೋರಂಜನೆಯ ಪ್ರಕಾರ ಕಾದಂಬರಿ ಅಂಗೈ ರಂಗಭೂಮಿ ಎನ್ನಬಹುದು.

ಸಮಾಜದ ಕೆಳಗಿನ ಹಂತದವರ ಇತಿಹಾಸ, ವರ್ಗಗಳ ಹೋರಾಟದ ಕಥನಗಳು, ಸ್ವೇಚ್ಛಾಚಾರವನ್ನು ಬಯಲಿಗೆ ತರುವ ಹತ್ತು ಹಲವು ವಸ್ತುಗಳನ್ನೊಳಗೊಂಡ ಕಾದಂಬರಿಗಳು ರಚಿಸಿದ್ದಾರೆ. ಅವರು ಇಂಥ ವಿಷಯಗಳನ್ನು ಆಯ್ಕೆಮಾಡಿ .ಕಾದಂಬರಿಗಳನ್ನು ನೀಡಿದ್ದಾರೆ. ವರ್ಗದ ಹೋರಾಟ ಕುರಿತು 'ಜ್ವಾಲಾಮುಖಿಯ ಮೇಲೆ'. ವೇಶ್ಯಾ ಸಮಸ್ಯೆಯ ನೈಜತೆಯನ್ನು ಬೀದಿಯಲ್ಲಿ ಬಿದ್ದವಳು, ಮಠಾಧಿಪತಿಗಳ ಸ್ವೇಚ್ಛಾಚಾರವನ್ನು 'ಜರತಾರಿ ಜಗದ್ಗುರು' ರಾಷ್ಟ್ರೀಯ ಪ್ರಜ್ಞೆಯನ್ನು ತೋರುವ' ಸ್ವಾತಂತ್ರ್ಯದೆಡೆಗೆ', ಮಾಡಿ ಮಡಿದವರು' ಇತಿಹಾಸ

ಕಥನಗಳನ್ನು 'ಪೌರುಷ ಪರೀಕ್ಷೆ ಸಂಗೊಳ್ಳಿರಾಯನಾಯಕ', ನರಗುಂದ ಬಂಡಾಯ' ಕಾದಂಬರಿಗಳ ಮೂಲಕ ಕಟ್ಟೀಮನಿ ಅವರ ಕೃತಿಗಳ ಬಗೆಗೆ ತಿಳಿಯಬಹುದು.

**ನೀ ನನ್ನ ಮುಟ್ಟಬೇಡ (೧೯೫೪)**

ಈ ಕಾದಂಬರಿಯಲ್ಲಿ ಹರಿಜನ ಬಂಧುಗಳ ಸುತ್ತ ಹೆಣೆಯಲ್ಪಟ್ಟಿದೆ. ಜಾತಿಯ ಪ್ರಭಾವದಲ್ಲಿ ದಲಿತರಿಗೆ ಸಿಗುವ ಅವಕಾಶ ಅವರ ಪರಿಸ್ಥಿತಿ ಕರುಣಾಜನಕ, ಉತ್ತಮ ಕುಲದವರೆಂದು ಬೀಗುತ್ತಾ ಕನಿಷ್ಠ ಕುಲದವರನ್ನು ಹೀಯಾಳಿಸುತ್ತಾ, ಅವಮಾನ ಮಾಡುತ್ತ, ಕೇಕೆ ಹಾಕಿ ನಗುವವರಿಗೆ ಸಂದೇಶ ನೀಡುತ್ತದೆ. 'ಜಾತಿ ಹೀನನ ಮನೆಯ ಜ್ಯೋತಿ ತಾ-ಹೀನವೇ!?'ವೆಂಬ ಸರ್ವಜ್ಞನ ವಚನವನ್ನು ನೆನಪಿಸದಿರಲಾರದು. ಅಂಥ ಶ್ರದ್ಧೆಗಳ ವಿರುದ್ಧ ಹೋರಾಟ ದೇವರ ಹೆಸರಿನಲ್ಲಿ ಸೂಳೆ ಬಿಡುವ ಅನಿಷ್ಟ ಪದ್ದತಿಯನ್ನು ವಿರೋಧಿಸುತ್ತಾ ಹರಿಜನರಲ್ಲಿ ಒಬ್ಬಳಾದ ರೇಣುಕಾದೇವಿಯ ಮಗಳು ಚಂದ್ರಿಯನ್ನು ಸೂಳೆ ಬಿಡುವಂತಹದು ಹೇಯವಾದುದು ವಿರೋಧಿಸುವ ಮಹಾದೇವಗೆ ಅವಮಾನದ ಪ್ರಸಂಗವು ಕಟ್ಟೀಮನಿಯವರು ಇಂಥ ಮೂಢನಂಬಿಕೆಯ ವಿರುದ್ಧ ಜನರಲ್ಲಿ ಜಾಗ್ರತಗೊಳಿಸಿದ್ದಾರೆ.

**ಮಣ್ಣು ಮತ್ತು ಹೆಣ್ಣು (೧೯೫೩)**

ಉತ್ತರಕರ್ನಾಟಕದ ಹಳ್ಳಿಯ ಜೀವನವನ್ನು ಪರಿಚಯಿಸುವ ಕಥೆ. ಯಾವುದೇ ಹಿಂದುಳಿದ ಹಳ್ಳಿಗೂ ಅನ್ವಯಿಸುವಂತಹದು. ಹಳ್ಳಿಗಳಲ್ಲಿ ಗುಂಪುಗಾರಿಕೆ ಹೆಚ್ಚು ಒಂದೊಂದು ಗುಂಪಿಗೆ ಒಬ್ಬ ನಾಯಕನಿದ್ದು, ತಮ್ಮ ತಮ್ಮ ಪ್ರತಿಷ್ಟೆಗಾಗಿ ಹೋರಾಡುವುದು ಸಹಜ. ಭೀಮಪ್ಪ ಹೊಲಗಳನ್ನು ಕಳೆದುಕೊಂಡು ಹೆಂಡತಿಯನ್ನು ಸಾಯಿಸಿ ಅವಳ ಹಣವನ್ನು ಲಪಟಾಯಿಸುತ್ತಾನೆ. ಆ ಹಣದ ಮೇಲೆ ಕಳ್ಳಭಟ್ಟಿ ತಯಾರಿಸುವ ಕಾಮಣ್ಣನ ಆಶೆಯುಂಟಾಗುತ್ತದೆ. ಇದು ಒಂದು ಗುಂಪಿನ ಕಥೆಯು ಗಿರಿಯೆಂಬವನು ಹಣ ಸುಲಿಗೆ ಮಾಡಲು ಸಿದ್ಧನಾಗುತ್ತಾನೆ. ಬಾಲಿ ಎಂಬಾಕೆ - ತನ್ನ ಗಂಡನನ್ನು ಬಿಟ್ಟು ಬೇರೆ ಗಂಡಿನೊಂದಿಗೆ ಸೇರುವಳು. ಇಷ್ಟವಿಲ್ಲದಿದ್ದರೂ ತಾಯಿಯ ಆಸೆಯಂತೆ ಬದುಕ ಕಂಡವಳು ಗಿರಿಯನ್ನು ಮೆಚ್ಚಿ ಬಾಳಲು ಆಸೆ ಹೊಂದುತ್ತಾಳೆ. ಹಳ್ಳಿಗಳಲ್ಲಿ ಸಾಮಾನ್ಯವಾಗಿ ಹೊಡೆದಾಟ, ಕೋರ್ಟು, ವಕೀಲ........ ಗಳೆಂಬ ಮಾತುಗಳೇ ಇರುತ್ತವೆ. 'ಜನಪಥ' ಪತ್ರಿಕೆಯ ಸಂಪಾದಕರಾದ ಹರಿಹರ ರೈತರ ಸಂಘಟನೆಗೆ ಯತ್ನಿಸಿ ಶೋಷಿಸುತ್ತಿರುವವರ ವಿರುದ್ಧ ಹೋರಾಡಲು ಜಾಗೃತಗೊಳಿಸುತ್ತಾನೆ.

ಹಳ್ಳಿಯ ಜೀವನದಲ್ಲಿ ಮಣ್ಣು ಮತ್ತು ಹೆಣ್ಣಿಗಾಗಿ ತಮ್ಮ ಬದುಕನ್ನು ಹಾಳುಮಾಡಿಕೊಂಡು ಅವುಗಳ ವ್ಯಾಮೋಹ ಬಿಡದೇ ಅಂತ್ಯ ಕಾಣುವುದು ಸರಿಯಲ್ಲವೆಂಬುದೇ ಕಟ್ಟೀಮನಿ ಅವರ ಮುಖ್ಯವಿಚಾರ. ಹೆಣ್ಣಿನ ಮೈಮಾಟಕ್ಕೆ ಸೋತು ಮನೆಯಲ್ಲಿ ಕೋಲಾಹಲ ಮಾಡಿ ಹೆಂಡಿರು ಮಕ್ಕಳನ್ನು ತೊಂದರೆಗಳಿಗೆ ಸಿಕ್ಕಿಸಿ, ಮೆಚ್ಚಿದವಳ ಜೊತೆ ಚೆಲ್ಲಾಟವಾಡುತ್ತ ಬಾಳುವ ಜನರಿಗೆ ಕೊರತೆವಿಲ್ಲ. ಹೆಣ್ಣಿನ ಆಕರ್ಷಣೆಗೆ ಬಲವಿದೆಂದು ಮನೋಜ್ಞವಾಗಿ ವಿವರಿಸಿದ್ದಾರೆ.

## ಬೀದಿಯಲ್ಲಿ ಬಿದ್ದವಳು (೧೯೫೨)

ಸಮಾಜದಲ್ಲಿಯ ವೇಶ್ಯಾ ಸಮಸ್ಯೆಗಳನ್ನು ಕುರಿತು ಅನೇಕ ಕೃತಿಗಳು ಬಂದಿವೆ. ತ.ರಾ.ಸು. ರವರ 'ಮಸಣದ ಹೂ', ಎಂ.ಕೆ. ಇಂದಿರಾ ರವರ 'ಗೆಜ್ಜೆಪೂಜೆ' ಮುಂತಾದವುಗಳನ್ನು ನೆನಪಿಸಬಹುದಾಗಿದೆ.

'ಬೀದಿಯಲ್ಲಿ ಬಿದ್ದವಳು' ಈ ಕಾದಂಬರಿಯು ಓದುಗರ ಮನವನ್ನು ಸೆಳೆಯುತ್ತದೆ. ಓದಿಸಿಕೊಳ್ಳುವ ಗುಣವನ್ನು ಹೊಂದಿದೆ. ಹುಟ್ಟುತ್ತಲೇ ಯಾರು ವೇಶ್ಯೆಯಾಗಿ ಬರಲು ಸಾಧ್ಯವಿಲ್ಲ. ಸಂದರ್ಭ, ಪರಿಸ್ಥಿತಿ, ಸನ್ನಿವೇಶಗಳು ಹೆಣ್ಣನ್ನು ವೇಶ್ಯೆಯನ್ನಾಗಿಸುತ್ತದೆ. ಹೆಣ್ಣು ವೇಶ್ಯಾ ಬದುಕನ್ನು ಬಯಸದು. ಗಂಡುಗಳು ಕೂಡಾ ಕಾರಣವಾಗುವುದು ಸಹಜ, ತಂದೆಯ ಬಡತನ ಪರಿಸ್ಥಿತಿ, ತಾಯಿ ಮತ್ತು ಗಂಡನ ಕಿರುಕುಳ ಕಾರಣವಾಗುತ್ತವೆ. ರುದ್ರೇಗೌಡನ ಲಂಪತನಕ್ಕೆ ಯಮುನೆ ನಾಶವಾಗುವಳು. ಯಮುನೆಯ ಮನಸ್ಸು ರಾಮನ ಮೇಲೆ ಇರುವುದು. ಅವಳ ಮೈಮಾಟವನ್ನು ಅನುಭವಿಸಲು ಮಲ್ಲಪ್ಪಯುವಕನು ಪಾತ್ರವಹಿಸಿದ್ದಾನೆ. ಯಮುನೆಯು ಸಿದ್ದರಾಮನ ಸಂಗಡದಲ್ಲಿದ್ದರೂ ಸಹ ರಾಮನ ನೆನಪು ಮಾಸುವದಿಲ್ಲ. ಯಮುನೆಯ ಪಾತ್ರದ ಮೂಲಕ ವೇಶ್ಯೆಯರ ಗೋಳಿನ ಕಥೆಯನ್ನು ಕಟ್ಟೀಮನಿಯವರು ಮಾರ್ಮಿಕವಾಗಿ ಚಿತ್ರಿಸಿದ್ದಾರೆ.

## ಜ್ವಾಲಾಮುಖಿಯ ಮೇಲೆ (೧೯೫೧)

'ಜ್ವಾಲಾಮುಖಿಯ ಮೇಲೆ' ಬಸವರಾಜ ಕಟ್ಟೀಮನಿ ಅವರ ಮಹತ್ವದ ಕೃತಿ, ಬಂಡವಾಳಶಾಹಿ ಹಾಗೂ ಕಾರ್ಮಿಕ ಸಂಘಟನೆಗಳು ದೇಶದ ಸಾಮಾಜಿಕ ಪರಿಸ್ಥಿತಿಯ ಮುಖಾ ಮುಖಿಯಾಗಿದೆಂದು ವಿವರಿಸಿದ್ದಾರೆ.

ಕಟ್ಟೀಮನಿಯವರು ಅಪ್ಪಟ ಪ್ರಗತಿಶೀಲರು ಆಗಿದ್ದರೆಂಬುದನ್ನು ಈ ಕಾದಂಬರಿ ಸಾಬೀತು ಪಡಿಸುತ್ತದೆ.

## ಐತಿಹಾಸಿಕ ಕಾದಂಬರಿಗಳು

ಬಸವರಾಜ ಕಟ್ಟೀಮನಿಯವರ 'ಸಮರಭೂಮಿ' (೧೯೫೬), 'ಪೌರುಷ ಪರೀಕ್ಷೆ' (೧೯೫೫), 'ಸಂಗೊಳ್ಳಿ ರಾಯಣ್ಣ' (೧೯೭೪). 'ಕಿತ್ತೂರ ಕೇಸರಿ' (೧೯೬೯) ಕೃತಿಗಳನ್ನು ರಚಿಸಿದ್ದು, ಸಮರಭೂಮಿಯು, ನರಗುಂದ ಬಂಡಾಯ ಕುರಿತದ್ದು ಉಳಿದೆರಡು ಕೃತಿಗಳು ಕಿತ್ತೂರು ಸಂಸ್ಥಾನದ ಇತಿಹಾಸ ಕುರಿತದ್ದಾಗಿದೆ.

**'ನರಗುಂದದಬಂಡಾಯ':** ಆಂತರಿಕ ಕಲಹದ ಕಾದಂಬರಿಯು, ಭಾಸ್ಕರರಾಯರಿಗೆ ಕಂಪನಿ ಸರಕಾರದಿಂದ ದತ್ತು ಪುತ್ರನನ್ನು ಸ್ವೀಕರಿಸಲು ಅನುಮತಿ ನೀಡದಿದ್ದು, ತನ್ಮೂಲಕ ಹಲವು ಬಂಡಾಯದ ಬಾವುಟವನ್ನು ಹಾರಿಸಲು ಆ ಚಾರಿತ್ರಿಕ ಹಿನ್ನಲೆಯೇ ಕಾದಂಬರಿಯ ಮೂಲ ತಿರುಳು. 'ಸಮರ ಭೂಮಿ'

ರಚಿಸುವಾಗ ಲೇಖಕರು ನರಗುಂದಕ್ಕೆ ಹೋಗಿ ಅಂದಿನ ಹೋರಾಟದಲ್ಲಿ ಭಾಗವಹಿಸಿದ ಕೆಲ ವಂಶಜರ ಅಭಿಪ್ರಾಯಗಳನ್ನು ಸಂಗ್ರಹಿಸಿದ್ದು ಗಮನಾರ್ಹ.

ಇಲ್ಲಿ ಅದಕ್ಷತೆ, ಅವಿವೇಕ, ಪಿತೂರಿತನಗಳು, ಬಂಡಾಯವನ್ನು ವಿಫಲಗೊಳಿಸಿವೆ. ಕಟ್ಟೀಮನಿಯವರು ವಿವರವಾಗಿ ನಿರೂಪಿಸಿರುವವರು.

**'ಪೌರುಷಪರೀಕ್ಷೆ'**ಯಲ್ಲಿ ಕಿತ್ತೂರಿನ ದೊರೆ ಮಲ್ಲಸರ್ಜನ ಆಳ್ವಿಕೆಯ ದಿನಗಳನ್ನು ಚಿತ್ರಿಸಿವೆ. ಮಲ್ಲಸರ್ಜನ ಆಡಳಿತ ವಿಷಯವು ಕಥಾವಸ್ತುವಾಗಿ ಲೇಖಕರು ಬಳಸಿಕೊಂಡಿದ್ದಾರೆ ಮೈಸೂರಿನ ಟಿಪ್ಪುಸುಲ್ತಾನ ಮತ್ತು ಮಲ್ಲಸರ್ಜರ ನಡುವೆ ಘೋರ ಯುದ್ಧ ಜರುಗಿ ರಾಜ್ಯವನ್ನು ಕಳೆದುಕೊಂಡು ಸೆರೆಯಾಳಾಗುತ್ತಾನೆ. ನಿಸ್ವಾರ್ಥಿಯಾದ ಮಡಿವಾಳ ಕಾದಂಬರಿಯ ಮುಖ್ಯ ಪಾತ್ರಧಾರಿ.

**ಸಂಗೊಳ್ಳಿ ರಾಯಣ್ಣ:** ಇದೊಂದು ಚಿಕ್ಕ ಕಾದಂಬರಿ, ಕಿತ್ತೂರಿನ ಇತಿಹಾಸದ ಅಂತಿಮ ದಿನಗಳನ್ನು ಚಿತ್ರಿಸಿದ ಮುಖ್ಯ ಉದ್ದೇಶವಿದೆ. ಇಂದಿನ ಜನತೆಗೆ ರಾಯಣ್ಣನ ಚರಿತ್ರೆ ಸ್ಫೂರ್ತಿ ನೀಡುತ್ತದೆ. ರಾಯಣ್ಣನ ವ್ಯಕ್ತಿತ್ವ ನಿರೂಪಿಸಲಾಗಿದ್ದು, ಕಾದಂಬರಿಯ ಕೊನೆಯ ದುರಂತ ಚಿತ್ರಣವನ್ನು ವಿವರಿಸುತ್ತದೆ. ಕಿತ್ತೂರು ಸಂಸ್ಥಾನದಲ್ಲಿ ನಡೆದ ಐತಿಹಾಸಿಕ ಹೋರಾಟದ ವರ್ಣನೆ ಇದೆ. ರಾಯಣ್ಣ ಗಂಗಾಧರ, ಕೆಂಚವ್ವ, ಬಿಚ್ಚುಗತ್ತಿಚನ್ನಬಸಪ್ಪ, ಪಾರ್ವತಿ..... ಮೊದಲಾದವರ ಪಾತ್ರ ಮನೋಜ್ಞ.

## ರಾಷ್ಟ್ರೀಯತೆಯ ಕಾದಂಬರಿಗಳು.

ಸ್ವಾತಂತ್ರ್ಯದೆಡೆಗೆ ಮತ್ತು 'ಮಾಡಿಮಡಿದವರು' ಇವೆರಡು ಕಾದಂಬರಿಗಳು ರಾಷ್ಟ್ರೀಯ ಪ್ರಜ್ಞೆಯನ್ನು ಜಾಗೃತಗೊಳಿಸುವಂಹವು. **'ಸ್ವಾತಂತ್ರ್ಯದೆಡೆಗೆ'** ಕಾದಂಬರಿಯು ದೇಶಕ್ಕೆ ಸ್ವಾತಂತ್ರ್ಯ ಬಂದರೂ ಆದರ್ಶಗಳು ಮಾತ್ರ ದೊರೆಯಲಿಲ್ಲ. ಭಾರತ ದೇಶ ಸ್ವಾತಂತ್ರ್ಯದತ್ತ ಇಂದಿಗೂ ಸಾಗುವಂತಿದೆ. ಇದರಲ್ಲಿ ಗಾಂಧೀಜಿಯವರು ಬೆಳಗಾವಿಯಲ್ಲಿ ಗೈದಹರತಾಳದವರ್ಣನೆಯಿದೆ. ಕಾದಂಬರಿಯ ಕಥಾ ನಾಯಕ ಶೇಖರ ಪೊಲೀಸ್ ಸಿಪಾಯಿಯ ಮಗ, ಕಡು ಬಡತನದಲ್ಲಿಯ ಕುಟುಂಬದಲ್ಲಿ ಬೆಳೆದವನು. ಬಡತನದಲ್ಲಿ ನೊಂದುಬೆಂದರೂ ಉನ್ನತ ವೈಚಾರಿಕತೆಯುಳ್ಳವನು ತಂದೆಯ ನೌಕರಿ ಹೋಗುವುದೆಂಬ ಭ್ರಮೆ. ಶೇಖರ ಮನೆಯ ಬಿಟ್ಟು ಒಂದು ಹಳ್ಳಿಗೆ ಹೋಗುತ್ತಾನೆ. ಅಲ್ಲಿಯ ರೈತರ ಸಹವಾಸದಲ್ಲಿ ಸರ್ಕಾರದ ವಿರುದ್ಧ ರೈತರನ್ನು ಹೋರಾಡಲು ಅಣಿಗೊಳಿಸುವನು. ಕ್ವಿಟ್ಇಂಡಿಯಾ ಚಳುವಳಿಯಲ್ಲಿ ಭಾಗವಹಿಸುತ್ತಾನೆ. ಈತನ ಪ್ರೋತ್ಸಾಹದ ಮೂಲಕ ಪ್ರಭಾವಿತರಾಗಿ ತನು ಮನ ಧನದಿಂದ ಧುಮುಕುತ್ತಾರೆ. ಜನತೆ ದೌರ್ಜನ್ಯದಿಂದ ಬಳಲಿ, ಶೋಷಿಸುವವರ ವಿರುದ್ಧ ತಮ್ಮ ಕೋಪವನ್ನು ಎತ್ತಿ ತೋರಿಸುತ್ತಾರೆ ಇಲ್ಲಿ ಕಾದಂಬರಿಕಾರರ ನೈಜ ಪರಿಸ್ಥಿತಿಯನ್ನೇ ವ್ಯಕ್ತಪಡಿಸುವಂತಿದೆ

**ಮಾಡಿ ಮಡಿದವರು (೧೯೫೦)** : ಈ ಕೃತಿಯು ಕ್ವಿಟ್ ಇಂಡಿಯಾ ಚಳುವಳಿಯ ವಸ್ತು. ಶೇಖರನ ಬೆಂಬಲಿಗರು ಧೀರತನದಿಂದ ಸ್ವಾತಂತ್ರ್ಯಕ್ಕಾಗಿ ಮಾಡಿಮಡಿದದ್ದನ್ನು ನಿರೂಪಿಸುತ್ತದೆ, ಬಾಳಪ್ಪ ಪೋಲೀಸರ ಕೈಗೆ ಸಿಗುತ್ತಾನೆ

ಪೋಲೀಸರು ಅವನಿಂದ ಮಾಹಿತಿ ಪಡೆಯಲು ತೊಂದರೆ ನೀಡಿ ಹಿಂಸಿಸುತ್ತಾನೆ ಕಿತ್ತೂರ ನಾಡಿನಲ್ಲಿ ಹುಟ್ಟಿದವನು. ಮಾಹಿತಿ ನೀಡಿ ಆತ್ಮವಂಚನೆ ಮಾಡಿಕೊಳ್ಳುವುದಿಲ್ಲವೆಂದು ಹೇಳುತ್ತಾನೆ. ೧೯೪೨ರಲ್ಲಿ ಸ್ವಾತಂತ್ರ್ಯ ಸಂಗ್ರಾಮ ಚಳುವಳಿ ಚಟುವಟಿಕೆಗಳನ್ನು ಮೈ ಜುಮ್ಮೆನ್ನುವಂತೆ ವಿವರಿಸಿದ್ದಾರೆ. ರಾಜಕೀಯ, ಸಾಮಾಜಿಕ ಸಂಘರ್ಷಗಳ ತೊಳಲಾಟದ ಚಿತ್ರ ಈ ಕಾದಂಬರಿಯಲ್ಲಿ ಉಲ್ಲೇಖವಾಗಿದೆ. 'ಸ್ವಾತಂತ್ರ್ಯದೆಡೆಗೆ' ಮತ್ತು 'ಮಾಡಿ ಮಡಿದವರು' ಎರಡೂ ಕಾದಂಬರಿಗಳು ಭಿನ್ನವಾಗಿ ಕಂಡು ಬಂದರೂ ಗುರಿ ಮಾತ್ರ ಸ್ವಾತಂತ್ರ್ಯ ಪಡೆಯುವುದಾಗಿದೆ.'

**ಕಿತ್ತೂರ ಕೇಸರಿ:** ಕಿತ್ತೂರ ಸಂಸ್ಥಾನದ ಬಗ್ಗೆ ವಿವರಣೆಯುಂಟು ಚೆನ್ನಮ್ಮನ ಬಂಟ ಸಂಗೊಳ್ಳಿ ರಾಯಣ್ಣ ಶಿಸ್ತಿನ ಸಿಪಾಯಿ ಕಿತ್ತೂರ ನಾಡಿಗೆ ತನ್ನ ಪ್ರಾಣ ತೊರೆದ ಶ್ರದ್ಧಾವಂತ ಹೋರಾಟಗಾರ ಆತನ ವ್ಯಕ್ತಿತ್ವ ಚಿತ್ರಿತವಾಗಿದೆ.

## ಸಾಮಾಜಿಕ ಕಾದಂಬರಿಗಳು

ಬಸವರಾಜ ಕಟ್ಟೀಮನಿಯವರು ಸಾಮಾಜಿಕ ಕಾದಂಬರಿಗಳಲ್ಲಿ ಸಮಾಜದಲ್ಲಿ ನಡೆದ ವಿವಿಧ ಮುಖಗಳ ಸಮಸ್ಯೆಗಳನ್ನು ಕಾದಂಬರಿಗಳಲ್ಲಿ, ತಮ್ಮದೇ ಆದ ವಿಚಾರ ಶೈಲಿಯಿಂದ ವ್ಯಕ್ತಪಡಿಸಿದ್ದಾರೆ.

**ನೀ ನನ್ನ ಮುಟ್ಟಬೇಡ (೧೯೫೪)**

ಈ ಕಾದಂಬರಿಯಲ್ಲಿ ಹರಿಜನರ ಸುತ್ತ ಹೆಣೆಯಲ್ಪಟ್ಟಿದೆ. ಜಾತಿಯ ಪ್ರಭಾವದಲ್ಲಿ ದಲಿತರಿಗೆ ಸಿಗುವ ಅವಕಾಶ, ಪಡುವ ಕರುಣಾಜನಕ ಪರಿಸ್ಥಿತಿ, ಹಾಗೂ ಉತ್ತಮ ಕುಲದವರೆಂದು ಬೀಗುತ್ತ, ಕೆಳವರ್ಗದವರನ್ನು ಹೀಯಾಳಿಸುತ್ತ ಅವಮಾನಗೊಳಿಸುತ್ತ, ಕೇಕೆ ಹಾಕುತ್ತ ನಗುವಂತವರಿಗೆ ಎಚ್ಚರಿಕೆ ನೀಡುವಂತಿದೆ. 'ಜಾತಿಹೀನರಮನೆಯ ಜ್ಯೋತಿಯ ತಾ ಹೀನವೇ' ವೆಂಬ ಸರ್ವಜ್ಞನ ಉಕ್ತಿ ನೆನಪಾಗದಿರಬಹುದು ಕಥಾನಾಯಕ ಮಹಾದೇವ ಸಮಾಜ ಸುಧಾರಣೆಯಲ್ಲಿ ಆಸಕ್ತಿಯುಳ್ಳ ಉತ್ಸಾಹಿ, ಸಮಾಜ ಸ್ಥಿತಿ ಕಂಡು ಸ್ವತಃ ಸಿದ್ಧನಾಗಿ ನಿಲ್ಲುತ್ತಾನೆ. ಮೂಢನಂಬಿಕೆಗಳನ್ನು ತೊರೆಯಲು ಪ್ರತಿಭಟಿಸುವನು. ರೇಣುಕಾದೇವಿಯ ಮಗಳಾದ ಚಂದ್ರಿಯನ್ನು ಸೂಳೆಬಿಡುವ ಪ್ರಸಂಗದಲ್ಲಿ ಪ್ರಬಲವಾದ ಪ್ರತಿಭಟನೆಯಿಂದ ವಿರೋಧಿಸುತ್ತಾನೆ. ದೇವರಿಗೆ ಬಿಡುವುದು ಸರಿಯಲ್ಲ ಚಂದ್ರಿಯನ್ನು ಸೂಳೆ ಬಿಡಬೇಡಿರೆಂದು ಕೇಳಿಕೊಳ್ಳುತ್ತಾನೆ. ಮಹಾದೇವನಿಗೆ ಅನೇಕ ತೊಂದರೆಗಳನ್ನು ಸಮಾಜ ಒಡ್ಡಿದರೂ ಹರಿಜನರ ಕಲ್ಯಾಣಕ್ಕೆ ಪಣತೊಡುತ್ತಾನೆ. ಕಟ್ಟೀಮನಿಯವರು ಮಹದೇವರ ಪಾತ್ರದ ಮೂಲಕ ಅಸ್ಪೃಶ್ಯರ ತೊಂದರೆಗಳನ್ನು ನಿವಾರಿಸಲು ಯತ್ನಿಸಿರುವರು.

**ಬೆಳಗಿನ ಗಾಳಿ (೧೯೫೭):**

ರಾಜ ಈ ಕಾದಂಬರಿ ಕಥಾನಾಯಕ, ಕೀಳುಜಾತಿಯಲ್ಲಿ ಜನಿಸಿದವನು, ವರ್ಣ ಹಾಗೂ ಜಾತಿಯ ಅವ್ಯವಸ್ಥೆಯ ಬಗ್ಗೆ ಕೋಪಗೊಂಡು ಬೇರು ಸಹಿತ ಕೀಳಲು ಪ್ರಯತ್ನ ಮಾಡುತ್ತಾನೆ. ಈ ವರ್ಗದ ಪ್ರಗತಿಗಾಗಿ ಸಂಘರ್ಷಕ ವಿಚಾರಗಳು ಕಾದಂಬರಿಯಲ್ಲಿವೆ.

**ಹರಿಜನಾಯಣ (೧೯೬೯):**

ಶಂಭುನಾಯಕ ಕಥೆಯ ಮೂಲ ವ್ಯಕ್ತಿ, ಲೋಹಿಯಾ ಅಂಬೇಡ್ಕರ ಮುಂತಾದ ದಲಿತ ನಾಯಕರ ಭಾಷಣದಿಂದ ಸ್ಫೂರ್ತಿ ಪಡೆದ ಹಳ್ಳಿಯ ಎಲ್ಲ ಅಸ್ಪೃಶ್ಯರನ್ನು ಒಂದುಗೂಡಿಸಿ, ಹುರಿದುಂಬಿಸಿ ಸವರ್ಣಿಯರ ಸಲ್ಲದ ವಿಷಯಗಳ ವಿರುದ್ಧ ಪ್ರತಿಭಟನೆಗೈಯುವುದು ಇದು ಈ ಕಾದಂಬರಿಯ ಪ್ರಮುಖ ಉದ್ದೇಶ.

**ಜನಿವಾರ ಶಿವದಾರ (೧೯೬೧):**

ಅಂತರ್ಜಾತಿ ವಿವಾಹದ ಸುತ್ತ ಹೆಣೆದ ಕಥೆಯಿದು ಇಂಥ ಪ್ರೇಮದಿಂದ ಸಮಾಜದಲ್ಲಿ ಎಂಥ ಕಷ್ಟಗಳು ಬರುವುದೆಂಬ ಚಿತ್ರಣವನ್ನು, ಜಾತಿಮತ ಲೆಕ್ಕಿಸದೆ ಸದಾನಂದ (ಲಿಂಗಾಯತ), ಶಾಂತಾ ( ಬ್ರಾಹ್ಮಣ) ಪರಸ್ಪರ ಪ್ರೀತಿಸುವುದು ಪ್ರೀತಿಗೆ ಜಾತಿವಿಲ್ಲೆಂಬ ಸಂದೇಶ ಸಾರುವುದೇ ಈ ಕೃತಿಯ ಮುಖ್ಯ ಉದ್ದೇಶ.

**ದ್ರೋಹಿ (೧೯೬೧):**

ರೂಪವತಿಯಾದವಳು ಕುರೂಪಿ ಗಂಡನ್ನು ಮದುವೆ ಆಗಿರುವಾಗ ಸಮಾಜದಲ್ಲಿ ಕಾಮಣ್ಣರು ಸ್ತ್ರೀಯ ಅನುರೂಪ ದೇಹ ಸೌಂದರ್ಯಕ್ಕೆ ಮರುಳಾಗಿ ಗಂಡನಿಂದ ಹೆಂಡತಿಯನ್ನು ಅಗಲಿಸಿ ಅವಳನ್ನು ಭೋಗಿಸುವ ರೀತಿಯನ್ನು ವಿವರಿಸಿದ್ದಾರೆ. ಲಕ್ಷ್ಮಣನಿಗೆ ರೂಪವಿಲ್ಲ, ಅಂತಸ್ತಿಲ್ಲ, ಅವನ ಹೆಂಡತಿ ತಾರಾ ಸುರಸುಂದರಿ, ಹಳ್ಳಿಯ ಹೆಣ್ಣಾದರು ಅಪ್ಸರೆಗಿಂತ ಸೌಂದರ್ಯದಲ್ಲಿ ಹೆಚ್ಚು. ಹಳ್ಳಿಯ ಶ್ರೀಮಂತರಿಗೆ ಅವಳನ್ನು ಕದ್ದು ಕಾಮದಾಸನೆಯಿಂದ ಭೋಗಿಸಲು ಪ್ರಬಲ ಹಿರಿಯಾಶೆ. ಇವುಗಳ ಮಧ್ಯ ಅವರ ಜೀವನ ದುರಂತವಾಗುತ್ತದೆ. ಹೃದಯ ಸ್ಪರ್ಶಿ ಘಟನೆಯು.

**ಖಾನಾವಳಿ ನೀಲಾ (೧೯೬೨):**

ಷಡಕ್ಷರಪ್ಪ ದೀನಬಂಧು ಪತ್ರಿಕೆಯ ಸಂಪಾದಕ. ಈ ಕಾದಂಬರಿಯ ಕೇಂದ್ರ ಬಿಂದು ನೀಲಾ, ಅವಳು ಓದಿದವಳು ವೀರಭದ್ರಪ್ಪನು ನೀಲಾಳ ತಾಯಿಯನ್ನು ಇಟ್ಟುಕೊಂಡಿರುತ್ತಾನೆ. ನೀಲಾಳಿಗೆ ಎಲ್ಲ ಅನುಕೂಲ ಮಾಡಿರುತ್ತಾನೆ. ತಾಯಿಗೆ ನೀಲಾಳ ಮೂಲಕ ಅವನಿಂದ ಹಣ ಮತ್ತು ಇನ್ನಿತರ ಸೌಲಭ್ಯಗಳನ್ನು ಸೆಳೆಯುವಾಶೆ, ಆದರೆ ನೀಲಾ ಸೂಳೆಯಾಗಲು ಪ್ರತಿಭಟಿಸುತ್ತಾಳೆ. ಷಡಕ್ಷರಪ್ಪ ತನ್ನ ಕಾಮ ತೀರಿಸಿಕೊಳ್ಳಲು ಶ್ರೀಶೈಲವೆಂಬನ ಮೂಲಕ ನೀಲಾಳನ್ನು ಅನುಭೋಗಿಸಲು ಆಶಿಸುತ್ತಾನೆ. ಆದರೆ ಶ್ರೀಶೈಲನನ್ನು ವಿವಾಹವಾಗಲು ನೀಲಾ

ನಿರಾಕರಿಸುತ್ತಾಳೆ. ಕುತಂತ್ರ ತಿಳಿದ ಶ್ರೀಶೈಲನು ಸೈನ್ಯ ಸೇರಲು ಹೋಗುವನು. ಸನ್ನಿವೇಶಗಳು ಮಾರ್ಮಿಕತೆಯಿಂದ ಕೂಡಿದೆ.

**ಜಲತರಂಗ (೧೯೫೭):**

ಈ ಕಾದಂಬರಿಯಲ್ಲಿ ಕಥಾವಸ್ತು ಹೊಸ ವಿಚಾರದಿಂದ ತುಂಬಿಕೊಂಡಿದೆ. ಈ ಕಾದಂಬರಿಯ ನಾಯಕ ಮಹಾಂತನು ತುಂಬು ಯೌವನದ ಯುವಕ. ಇದರಲ್ಲಿ ಯುವತಿಯ ಕಾಮುಕತೆಯ ವಿರಹ ವೇದನೆಯುಂಟು. ಇಲ್ಲಿ ಮಹಾಂತನ ಅನುಭವ ಕಾದಂಬರಿಕಾರರ ಅನುಭವವಾಗಿದೆಂದು ಕಟ್ಟೀಮನಿಯವರು 'ಕಾದಂಬರಿಕಾರನ ಕಥೆಯಲ್ಲಿ ಹೇಳಿಕೊಂಡಿದ್ದಾರೆ. ಯೌವನದಲ್ಲಿ ಹುಡುಗ ಹುಡುಗಿಯರ ಮನಸ್ಸಿನಲ್ಲಿಯ ತುಮುಲವನ್ನು ಮಾರ್ಮಿಕ ವಿಶ್ಲೇಷಿಸಿದ್ದಾರೆ.

**ಪ್ರಪಾತ (೧೯೮೭):**

ಹಳ್ಳಿಯ ಯುವತಿ ರಾಧೆಯ ಆದರ್ಶ ಪ್ರೇಮದ ಸುತ್ತ ಹೆಣೆದ ಕಥೆ. ಗೋಪಾಲನೊಂದಿಗೆ ಬದುಕಲು ಇಚ್ಛಿಸಿ ಮುನ್ನಡೆದಾಗ ಸಮಾಜವು ಮೂಗು ಮುರಿಯುವುದು. ಅನೇಕ ಸಮಸ್ಯೆಗಳಿಗೆ ಬಲಿಯಾದರೂ ಅವುಗಳಿಗೆ ಯಾವುದೇ ತರಹದಿಂದ ಹಿಮ್ಮುಖವಾಗದೆ ಸಮಸ್ಯೆಗಳನ್ನು ಎದುರಿಸಿ ಬಂದ ದಾರುಣ ಸ್ಥಿತಿಯನ್ನು ಇಲ್ಲಿ ಚಿತ್ರಿಸಲಾಗಿದೆ.

**ಪಾತರಗಿತ್ತಿ (೧೯೮೭):**

ಈ ಕಾದಂಬರಿಯಲ್ಲಿ ಲೈಂಗಿಕ ಮುಕ್ತ ಸುಖವು ಹೆಣ್ಣಿಗೆ ತರವಲ್ಲೆಂಬುದನ್ನು ಕಟ್ಟೀಮನಿಯವರು ತಮ್ಮ ವಿಶಿಷ್ಟ ಶೈಲಿಯಲ್ಲಿ ವಿವರಿಸಿದ್ದಾರೆ. ನವ ಸಮಾಜದ ದೃಷ್ಟಿಯಲ್ಲಿ ಸೂಕ್ತವೆನಿಸಿದರು ಕೆಲವು ಕಡೆ ವಿಚಾರಗಳು ಸತ್ಯವೆನಿಸುವದಿಲ್ಲ.

ಮಕ್ಕಳಾಗದಿದ್ದರೆ ಬಂಜೆಯೆಂಬ ಪಟ್ಟ, ಮತ್ತೆ ಮನೆಬಿಟ್ಟು ಹೊರ ಹಾಕಿರುತ್ತಾರೆ. ಹ್ಯಾಗಾದ್ರು ಮಾಡಿ ನಾವು ಮಕ್ಕಳನ್ನು ಹಡೆಯಲು ಬೇಕಂತಾ ಬೇರೆ ಗಂಡನ್ನು ವರಿಸಿದರೆ ಹ್ಯಾಂಗ' ಎನ್ನುವಲ್ಲಿ ಹೆಣ್ಣು ಅದೇ ತೆರನಾಗಿ ಗಂಡು ಕೂಡಾ ಬೇರೆ ಹೆಣ್ಣನ್ನು ಕೂಡಲು ವಿಚಾರಿಸುವುದು. ಒಟ್ಟಾರೆ ಇಬ್ಬರಿಗೂ ಬೇಕಾದದ್ದು ಮಕ್ಕಳೇ ಅವು ಯಾರಿಂದ ಆದ್ರೇನು? ಎಂಬುದೇ ವಿಚಾರ.

ಕಟ್ಟೀಮನಿ ಅವರು ಹೆಣ್ಣಿನ ಸ್ವಚ್ಛಂಧತೆಯನ್ನು ಮುಕ್ತವಾಗಿ ಚಿತ್ರಿಸಿದ್ದಾರೆ. ಪುರುಷ ಪ್ರಧಾನ ಸಮಾಜಕ್ಕೆ ಸವಾಲು ಹಾಕಿ ಹೆಣ್ಣಿಗೂ ಪುರುಷನಂತೆ ಹಕ್ಕುವಿರಬೇಕೆಂದು ಹೇಳುವಲ್ಲಿ ಉತ್ಪ್ರೇಕೆ ಅವರದು. ಲೇಖಕರು ವ್ಯವಸ್ಥೆಯ ಬಗ್ಗೆ ದಿಟ್ಟತನದಿಂದ ವಿಶ್ಲೇಷಿಸಿದ್ದಾರೆ.

**ಹೆಂಡತಿ (೧೯೬೪)**

ಕಟ್ಟೀಮನಿಯವರು ಗ್ರಾಮೀಣ ಪ್ರದೇಶದಲ್ಲಿಯ ಭ್ರಷ್ಟ ರಾಜಕೀಯದ ಬಗ್ಗೆ 'ಕ್ಷ' ಕಿರಣ ಬೀರಿದ್ದಾರೆ ಹಳ್ಳಿಯಲ್ಲಿಯ ಪರಿಸರ ರಿಪೇರಿಯಾಗದಷ್ಟು ಹೊಲಸುಗೆಟ್ಟಿದೆಂದರೆ ತಪ್ಪಾಗದು. ಹೆಂಡ ಮತ್ತು ಹೆಣ್ಣುಗಳಿಗಾಗಿ ತಮ್ಮ ಬಾಳನ್ನೇ ಹಾನಿ ಮಾಡಿಕೊಂಡವರ ಚಿತ್ರ ನಮಗೆಲ್ಲ ಅಸಹ್ಯವನ್ನು ಹುಟ್ಟಿಸುತ್ತದೆ, ಅತ್ತೆ, ಸೊಸೆ ತಾಯಿ-ಮಗ ಇವರ ನಡುವಿನ ಜಗಳ ಪರಸ್ಪರ ದ್ವೇಷಗಳು ಜೀವನಕ್ಕೆ ಅಂತ್ಯ ಹಾಡುವುದು ಸರಿಯೆನಿಸದು. ಮಗ ಮತ್ತು ಸೊಸೆಯರ ಬಾಳನ್ನು ಹಾಳು ಮಾಡುವ ತಾಯಿಯ ಚಿತ್ರಣ ಈ ಕಾದಂಬರಿ ವಸ್ತುವಾಗಿದೆ.

'ನಾನು ಪೋಲೀಸನಾಗಿದ್ದೆ' (೧೯೫೪) ಹಾಗು 'ಬಂಗಾರದ ಜಿಂಕೆಯ ಹಿಂದೆ (೧೯೫೪):

ಇವೆರಡು ಕೃತಿಗಳು ವಿಶಿಷ್ಟಮಯವಾಗಿವೆ. ಪೋಲೀಸ ಇಲಾಖೆಯೆಂದರೆ ಭ್ರಷ್ಟತನದ ಹಾಗೂ ಅಮಾನವೀಯ ಇಲಾಖೆಯೆಂಬುದು ಜನರಲ್ಲಿ ಭಾವನೆಯಾಗಿದೆ. ಆದರೆ ಲೇಖಕರು ಮಾನವೀಯ ದೃಷ್ಟಿಯಿಂದ ಚಿತ್ರಿಸಿದ್ದಾರೆ. ಅವರ ತಂದೆ, ಅಣ್ಣ ಪೊಲೀಸ ಇಲಾಖೆಯಲ್ಲಿ ಸೇವೆ ಸಲ್ಲಿಸಿದ್ದಿರಬಹುದು. ಸಮೀಪದಿಂದ ಇಲಾಖೆಯ ಚಟುವಟಿಕೆಯನ್ನು ಕಂಡವರು ಕಟ್ಟೀಮನಿ ಅವರು, ಒಳಗಿನ, ಹೊರಗಿನ ವಿದ್ಯಮಾನಗಳನ್ನು ಎಳೆ ಎಳೆಯಾಗಿ ಬಿಡಿಸಿದ್ದಾರೆ. ಕಾದಂಬರಿ ವಸ್ತು ವಿಶಿಷ್ಟತೆಯಿಂದ ಕೂಡಿದೆ.

**ಬೆಳಗಿನ ಗಾಳಿ (೧೯೫೬):**

ಅಪರಾಧಿ ವೃತ್ತಿಯ ಜನರು ನಾಗರಿಕರೆನಿಸಿಕೊಂಡವರ ದೃಷ್ಟಿಯಲ್ಲಿ ಅಲಕ್ಷಕ್ಕೆ ಗುರಿಯಾಗುವರು. ಊರಲ್ಲಿಯ ದೂರದ ಪ್ರದೇಶದಲ್ಲಿ ಕೇರಿ ಕಟ್ಟಿಕೊಂಡು ಅನಾಗರಿಕತೆಯ ಜೀವನ ನಡೆಸುತ್ತಾರೆ. ಇವೆಲ್ಲವನ್ನು ಚಿತ್ರಿಸಿದ್ದಾರೆ. ಕತ್ತಲೆಯ ಬಾಳಿನಲ್ಲಿ ಬೆಳಕು ಕಾಣಲು ಪ್ರಯತ್ನಿಸುವುದು, ಶೋಷಣೆ ರಹಿತ ಸಮಾಜ ಕಟ್ಟುವ ಲೇಖಕರ ಕನಸು ಇಲ್ಲಿ ಎದ್ದು ಕಾಣುತ್ತದೆ.

'ಬೆಂಗಳೂರಿಗೊಂದು ಟಿಕೆಟ್' (೧೯೩೫) 'ಗೆಳೆಯನಮಡದಿ' (೧೯೫೮) 'ಚಕ್ರವ್ಯೂಹ' (೧೯೮೨) 'ಜೊತೆಗಾತಿ' (೧೯೮೫)' 'ಮಗನತಾಯಿ(೧೯೮೬)' "ಆಶ್ರಮವಾಣಿ' (೧೯೮೭) ಇವೆಲ್ಲ ಕಾದಂಬರಿಗಳಲ್ಲಿ ಗ್ರಾಮೀಣ ಪರಿಸರ ಸುತ್ತಣ ಹೆಣೆದಿದೆ. ಮನುಷ್ಯನ ವಿಕೃತ ಮನಸ್ಸು ಮತ್ತು ಗ್ರಾಮೀಣ ಬದುಕಿನ ಗೋಳಾಟ, ಗ್ರಾಮೀಣರ ಮುಗ್ಧತೆಗಳ ತೊಳಲಾಟ ಕಾಣಬಹುದು.

# ಕಟ್ಟೀಮನಿಯವರ ಕಥೆಗಳು

ಕಾದಂಬರಿಗಳನ್ನು ಓದುವ ತಾಳ್ಮೆ ಓದುಗರಲ್ಲಿ ಇಂದು ಕಡಿಮೆ. ಅಲ್ಲದೆ ಸಮಯದ ಅಭಾವವು ಕೂಡಾ ಕಾರಣವು. ಈ ಕಾರಣದಿಂದ ಸಣ್ಣ ಕಥೆಗಳಿಗೆ ಹೆಚ್ಚಿನ ಆದ್ಯತೆ ಲಭಿಸಿದೆ. ಹೊಸ ಹೊಸ ತಂತ್ರಗಳ ಕಥೆಗಳು ರಚನೆಗೊಂಡುದುಂಟು ವೈವಿಧ್ಯ ಶೈಲಿಯ ಕತೆಗಳು, ಕಟ್ಟೀಮನಿ ಅವರ ಲೇಖನಿಗಳಿಂದ ಮೂಡಿ ಬಂದಿರುತ್ತವೆ.

'ಕಾರವಾನ್' (೧೯೪೫) ಸೆರೆಯಿಂದ ಹೊರಗೆ (೧೯೪೬) 'ಗುಲಾಬಿ ಹೂ' ೧೯೪೬) 'ಜೋಳದ ಬೆಳೆಯ ನಡುವೆ (೧೯೫೩) "ಜೀವನ ಕಲೆ' (೧೯೬೪) 'ಸುಂಟರಗಾಳಿ' (೧೯೫೭) 'ಸೈನಿಕನ ಹೆಂಡತಿ' (೧೯೬೬) 'ಹುಲಿಯಣ್ಣನ ಮಗಳು' (೧೯೬೮) 'ಗರಡಿಯಾಳು' (೧೯೭೫) ಇವರ ಅತ್ಯುತ್ತಮ ಕಥಾ ಸಂಕಲನಗಳು.

**ಕಾರವಾನ್ (೧೯೪೫)**: ಕಟ್ಟೀಮನಿಯವರ ಪ್ರಥಮ ಕಥಾ ಸಂಕಲನವು. ಭಾರತದ ಸ್ವಾತಂತ್ರ್ಯ ಯುದ್ಧದಲ್ಲಿ ಹೋರಾಟಗೈದು, ಜೇಲು ವಾಸದ ಅನುಭವ ಹೊಂದಿದ್ದು ಅನ್ಯಾಯದ ವಿರುದ್ಧ ಸಿಡಿದೇಳುವ ಪ್ರವೃತ್ತಿ ಮತ್ತು ಪ್ರತಿಭಟಿಸುವ ಮನೋಧರ್ಮ, ಈ ಕಥೆಗಳಲ್ಲಿ ಜನರ ಮುಗ್ಧತೆ, ಪ್ರೇಮ, ಛಲ, ಇವುಗಳನ್ನೇ ವಸ್ತುಗಳಾಗಿಸಿಕೊಂಡಿದ್ದು, ಶೋಷಿತರ ಪರವಾಗಿ ನಿಲ್ಲುವುದು ಮಾನವೀಯತೆಯನ್ನು ಹಲವಾರು ಕತೆಗಳಲ್ಲಿ ಮೆರೆದಿದ್ದಾರೆ. ಪಾತ್ರ ನಿರೂಪಣಾ ಕೌಶಲ್ಯವು ಅದ್ಭುತವಾದುದು.

**ಆಗಸ್ಟ್ ಒಂಭತ್ತು (೧೯೪೫):** ಈ ಸಂಕಲನದಲ್ಲಿಯ ಏಳು ಕಥೆಗಳು ೧೯೪೨ರ ಚಲೇಜಾವ್ ಚಳುವಳಿಯ ಹಿನ್ನೆಲೆಯುಳ್ಳವವು. ಈ ಕಥೆಯಲ್ಲಿ ಪತಿಯ ಪವಿತ್ರಪ್ರೇಮ ಇವುಗಳಿಂದ ಪ್ರಭಾವಿತಳಾಗಿ, ಕಾಮುಕರು ಬೆನ್ನಟ್ಟಿದರು ಶೀಲವನ್ನುಳಿಸಿಕೊಂಡ ಸಾಧ್ವಿಯ ಚಿತ್ರಣವಿದೆ. ಹುತಾತ್ಮರ ಶೌರ್ಯ, ತ್ಯಾಗ, ದೇಶಪ್ರೇಮ, ಬಲಿದಾನದ ಕುರಿತು ಕಥೆಗಳಲ್ಲಿ ಚಿತ್ರಿಸಿದ್ದಾರೆ, ದೇಶಪ್ರೇಮ ಹಾಗೂ ದೇಶ ಭಕ್ತಿಯ ಕಥಾ ಸಂಕಲನವಾಗಿದೆ.

**ರಕ್ತಧ್ವಜ ಆಗಸ್ಟ್ ೯** ರ ಕಥಾ ಸಂಕಲನದ ಏಳುಕಥೆಗಳ ಪೈಕಿ ಉತ್ತಮ ಕಥೆಯು ಹತ್ತು ವರ್ಷದ ಕಿಶೋರ ಕಿಶನ್‌ನ ವಯಸ್ಸಿಗೆ ಮೀರಿ ಗೈದ ಸಾಹಸ ವರ್ಣಿತವಾಗಿದೆ ಕೋರ್ಟಿನ ಗೋಪುರ ಏರಿ ನಿರ್ಭೀತೆಯಿಂದ ರಾಷ್ಟ್ರಧ್ವಜವನ್ನು ಹಾರಿಸಿದ್ದು, ಬ್ರಿಟೀಷರ ಗುಂಡಿಗೆ ಬಲಿಯಾದ ಹೃದಯ ವಿದ್ರಾವಕ ಚಿತ್ರಣವಿದೆ. ಈತ ಸ್ವಾತಂತ್ರ್ಯ ಪ್ರೇಮಿಯ ಬಿಸಿರಕ್ತದ ಬಾಲಕ, ಓದುಗರ ಮನವನ್ನು ಕದಲುವಂತಹ ಹೃದಯ ಸ್ಪರ್ಶಿ ಕತೆಯು.

**'ಹುತಾತ್ಮ'**ವೆಂಬ ಕಥೆಯಲ್ಲಿ ಬೆಳಗಾವಿ ಜಿಲ್ಲೆಯ ಒಬ್ಬ ಕ್ರಾಂತಿಕಾರನ ಕಥೆಯ ಚಿತ್ರವಿದೆ. ಹೋರಾಟಕಾಲದಲ್ಲಿ ಖೈದಿಗಳಿಗೆ ಕಾರಾಗೃಹದಲ್ಲಿ ನೀಡುವ ಚಿತ್ರಹಿಂಸೆಗಳ ವಿವರಣೆಗಳನ್ನು ಒಳಗೊಂಡಿದೆ. ಬ್ರಿಟೀಷ್ ಅಧಿಕಾರಿಗಳ ಕ್ರೌರ್ಯದ ವರ್ಣನೆಯಿದೆ.

**'ಜನೇವರಿ ಇಪ್ಪತ್ತಾರು'** ವೀರ ಖೈದಿಗಳು ಜೇಲಿನಲ್ಲಿ ಅನುಭವಿಸಿದ ಕಹಿ ಅನುಭವಗಳ ಕುರಿತು ವಿವರಣೆಯುಂಟು ಜೈಲು ಅಧಿಕಾರಿಗಳ ಕ್ರೂರ ವರ್ತನೆಯ ಭೀಕರ ಚಿತ್ರಣವುಂಟು.

**'ಬಲಿ'** ಕ್ವಿಟ್ ಇಂಡಿಯಾ ಚಳುವಳಿಯ ಸಮಯದಲ್ಲಿ ಧೈರ್ಯ, ಸ್ಥೈರ್ಯದೊಂದಿಗೆ ಬ್ರಿಟೀಷರ ಮದ್ದು ಗುಂಡುಗಳ ಮಧ್ಯದಲ್ಲಿ ಹೋರಾಡಿದ ವೀರನ ಸಾಹಸ ಕಥೆಯಾಗಿದೆ. ಪೊಲೀಸರ ಕೃತ್ಯದಿಂದ ಕಿಶೋರ-ಕಿಶೋರಿಯರು ಅನುಭವಿಸಿದ ದೃಶ್ಯವಿದೆ. ಹೃದಯ ಮಿಡಿಯುವ ಕರುಣಾಜನಕ ಕಥೆಯಾಗಿದೆ.

**'ಸುಂಟರಗಾಳಿ'** ದೇಶಪ್ರೇಮವುಳ್ಳ ಯುವಕನು ತಂದೆ-ತಾಯಿಗಳ ವಿರೋಧತೆಯಲ್ಲಿ ವಿವಾಹವಾಗುತ್ತಾನೆ. ಕುಟುಂಬದ ಬಗ್ಗೆ ಅನಾಸಕ್ತಿ, ಹೆಣ್ಣಿನ ಮನಸ್ಸಿನ ತುಮುಲಕ್ಕೆ ಕಾರಣನಾಗುವ ಚಿತ್ರಣವಿದೆ.

**'ಗೂಢಚಾರಿಣಿ'** ಈ ಕಥೆಯು ಗೋವಾವಿಮೋಚನೆಯ ಯುದ್ಧಕ್ಕೆ ಸಂಬಂಧವುಳ್ಳದ್ದಾಗಿದೆ.

**'ಬೂಟ್ ಪಾಲಿಶ್'** ಸ್ವಾತಂತ್ರ್ಯ ಬಂದ ಹೊಸದರಲ್ಲಿ ದೇಶದ ಮಕ್ಕಳು ಬೂಟ್ ಪಾಲಿಶ್ ಮಾಡುವುದು ಸಾಮಾನ್ಯ ಪರಿಸ್ಥಿತಿಯಿತ್ತು. ಇಲ್ಲಿ ಕಡುಬಡತನದಲ್ಲಿ ಬೆಂದು ಬೆಂಡಾದ ಅನಾಥ ಬಾಲಕನೊಬ್ಬನ ಕಥೆ. ನನ್ನದು ನಾಯಿಬಾಳು, ನಾಯಿ ಜೀವನಕ್ಕಿಂತಲು ಕನಿಷ್ಟವೆಂಬ ಮನದ ಮಾತು ಇಲ್ಲಿದೆ.

**'ದೀಪಾವಳಿ ಕತ್ತಲೆ'** ಬಡತನಕ್ಕೆ ನಲುಗಿ ಹೋದ ತರುಣ ದಂಪತಿಗಳ ಸುತ್ತ ಹೆಣೆದ ಕಥೆ. ಬಡತನ ದೃಶ್ಯವನ್ನು ವಿವರಿಸಿ ಯಾರಿಗೂ ಬರಬಾರದೆಂಬ ಅಂಶ ಕಂಡುಬರುವುದು 'ರವಿಕೆಗಳು ಹರಿದ ದೋಸೆಯಂತೆ'ವೆಂಬ ಹೋಲಿಕೆ ರೋಚಕವಾಗಿದೆ.

**'ಪರಾಜಿತೆ'** ಅತ್ತೆ ಸೊಸೆಯರ ಕಥೆಯಾಗಿದೆ. ಅತ್ತೆಯು ಕೋಪದಲ್ಲಿ ನುಡಿದ ಮಾತಿನಿಂದ ಸೊಸೆಯು ಸೇಡು ತೀರಿಸುವ ಮಟ್ಟಿಗೆಯ ಪ್ರಸಂಗವಿದೆ. ಅತ್ತೆ ತನ್ನ ಅನಾರೋಗ್ಯದಿಂದ ಪುನಃ ಸೊಸೆಯನ್ನು ಆಶ್ರಯಿಸುತ್ತಾಳೆ. ಅತ್ತೆಯ 'ಮಾತೃ ವಾತ್ಸಲ್ಯ, ವಿಶಾಲ ಹೃದಯ, ಮುಂತಾದವು ಪ್ರಕಟವಾಗುತ್ತವೆ.ಇದೊಂದು ಸುಂದರವಾದ ಸಹಜ ಕಥೆ.

**'ಹೊಸ ವರ್ಷದ ಹಳೆ ರಾತ್ರಿ'** ಈ ಕಥೆಯಲ್ಲಿ ಬಡತನ ಸಿರಿತನದ ನಡುವಿನ ವ್ಯತ್ಯಾಸವನ್ನು ಮಾರ್ಮಿಕವಾಗಿ ಚಿತ್ರಿಸಿದೆ.

**'ಗಿರಿಜಾ ಕಂಡ ಸಿನಿಮಾ'** ಈ ಕಥೆಯಲ್ಲಿ ಬಡ ದಂಪತಿಗಳ ಸಂಸಾರ ಚಿತ್ರಣವುಂಟು ಗಂಡ ಬಡಕೂಲಿಕಾರ, ಗಿರಿಜಾಳಿಗೆ ಗಂಡನೆಂದರೆ ತುಂಬಾ ಪ್ರೀತಿ, ಅವಳು ಸಿನಿಮಾ ನೋಡಲು ಬಯಸುವಳು, ಪಟ್ಟಣಕ್ಕೆ ಹೋದಾಗ ಅಲ್ಲಿಯ ಜನರದಾರುಣ ಬದುಕನ್ನು ಕಂಡುಕೊಳ್ಳುತ್ತಾಳೆ. ಇದೇ ಅವಳು ನೋಡಿದ ಸಿನಿಮಾ.

ಸಿನಿಮಾ ನೋಡಲು ಬ್ಲಾಕ್ ಮಾರ್ಕೆಟ್ಟಿನಲ್ಲಿ ಟಿಕೇಟು ಸಿಗುವದಿಲ್ಲ. ಚಿಕ್ಕ ಲಾಲಬಾಗ್‌ಗೆ ಹೋಗಿ ನೋಡುವ ದೃಶ್ಯಗಳು ಚಲನಚಿತ್ರದ ಸುರುಳಿಯಂತೆ ಬಿಚ್ಚುತ್ತವೆ. ಇದು ಪರಿಣಾಮಕಾರಿ ಕತೆಯು.

**'ಮನಸ್ಸಿನ ಮಂಜು'** ಮನಶ್ಯಾಸ್ತ್ರದ ಮೇಲೆ ಹೆಣೆದ ಕತೆಯಿದು. ಮೋಸಗಾರರಿಂದ ಸುಸಂಸ್ಕೃತರು, ವಿಚಾರಶೀಲರು ಹೇಗೆ ಮೋಸಕ್ಕೆ ಬಲಿಯಾಗುತ್ತಿರುತ್ತಾರೆಂಬುದನ್ನು ಇಲ್ಲಿ ವಿಶ್ಲೇಷಿಸಿದ್ದಾರೆ.

**'ಹಾಜಿಪೀರ್ ಕಣಿವೆಯ ಮಾರ್ಗದಲ್ಲಿ'** ರಾಷ್ಟ್ರ ಪ್ರೇಮವನ್ನು ವ್ಯಕ್ತಪಡಿಸುವ ಕತೆಯಿದು..

**'ಮುದ್ದು'** ಮುದ್ದು ಮೂಕ ಪ್ರಾಣಿ ನಾಯಿಯ ಅನಾಥ ಸ್ಥಿತಿ ವರ್ಣಿತವಾಗಿದೆ. ಪ್ರಪಂಚದ ರೀತಿ ರಿವಾಜುಗಳನ್ನು ತಿಳಿಯದಾಗಿದೆ. ಅಂತಿಮವಾಗಿ ಪೊಲೀಸರ ಬಲಿಯಾಗುವ ಪರಿಣಾಮಕಾರಿ ಕಥೆ.

ಕಟ್ಟೀಮನಿಯವರ ಎಲ್ಲಾ ಕಥೆಗಳು ಜೀವನದ ವೈವಿಧ್ಯತೆಯನ್ನು ಪ್ರಕಟಿಸುವವು. ಅವರ ಗಮನಾರ್ಹ ಶೈಲಿಯೇ ಮೂಲ ಕಾರಣ, ದ್ವೇಷ, ಆಕ್ರೋಶ, ಪ್ರೇಮ- ಕಾಮ, ಮುಂತಾದ ಹಲವಾರು ಮುಖಗಳನ್ನು ಕಾಣಬರುತ್ತದೆ.

'ಗುಲಾಬಿಹೂ', 'ಸತ್ಯವಾನ ಮರಳಲಿಲ್ಲ', 'ನಾಯಕನಮಾವ', 'ಆಕರ್ಷಣೆ'. “ಸಂಪಾದಕನ ಕುರ್ಚಿ' 'ಒಂಭತ್ತು ಕಾಸು', 'ಜೀವನ ಕಲೆ', 'ಎರಡು ಗುಲಾಬಿ', “ಬಣ್ಣದ ಬುಗ್ಗೆ' ಮುಂತಾದ ಕಥೆಗಳನ್ನು ಗಮನಿಸಬಹುದಾಗಿದೆ.

**ಸೆರೆಯಿಂದ ಹೊರಗೆ (೧೯೪೬):**

ಈ ಕಥಾ ಸಂಕಲನದಲ್ಲಿ ಹತ್ತು ಕಥೆಗಳಿವೆ. ಅವುಗಳಲ್ಲಿ ೪ ಕಥೆಗಳು ಚಿಕ್ಕವು, ಸಣ್ಣ ಕಥೆಗಳಲ್ಲಿ ಜೀವನದ ದರ್ಶನವಾಗುತ್ತದೆ. ಸೆರೆಯಿಂದ ಹೊರಗೆ ಬಂದಾಗ ತಿಳಿಯುವುದೇನೆಂದರೆ ಜೀವನದಲ್ಲಿ ಅತೃಪ್ತಿ, ಅಸಂತೋಷ..... ಮುಂತಾದ ಗುಣಗಳನ್ನು ಕಾಣುವೆವು.

'ಮೂವರು ಸೈನಿಕರು' - ಈ ಕಥೆಯಲ್ಲಿ ಮೂವರು ಸೈನಿಕರು ಗಾಂಧೀಜಿಯವರ ಅಹಿಂಸಾ ತತ್ವದ ಮೇಲೆ ಕ್ರಾಂತಿ ಮಾಡಿದ ಘಟನೆಯು ವರ್ಣಿತಗೊಂಡಿರುವದು. ಲೇಖಕರು ಹೋರಾಟಗಾರರನ್ನು ಕೊಲ್ಲುವುದಕ್ಕಾಗಿ ಚಿತ್ರಿಸಿರುವುದಿಲ್ಲ. ಅಹಿಂಸಾ ಪರಮೋಧರ್ಮದ ಮೇಲೆ ಅವಲಂಬಿತವಾದ ಕಥೆ.

ಬ್ರಿಟೀಷರು ಸಂಗ್ರಹಿಸಿದ ವಸೂಲಿ ಹಣವನ್ನು ಎತ್ತುವ ಘಟನೆ. ಪರಸ್ಪರರ ಹೋರಾಟ, ಹೀಗೆ ಹೋರಾಡಿ ಮಡಿದವರ ವೀರತ್ವದ ಕಥೆಗಳಿವೆ.

**“ಉಪಸಂಪಾದಕನ ಕುರ್ಚಿ'-** ಬಡವರನ್ನು ಹಾಗೂ ಅಸಹಾಯಕರನ್ನು ಹೇಗೆ ಶೋಷಣೆ ಮಾಡುವರೆಂಬುದನ್ನು ಉಪಸಂಪಾದಕನ ಕುರ್ಚಿ ಕಥೆಯಲ್ಲಿ ಹೇಳಲಾಗಿದೆ. ಪತ್ರಿಕೆಯಲ್ಲಿ ಉಪಸಂಪಾದಕನಾಗಿ ಕೇವಲ ೩೦ ರೂಪಾಯಿ ಸಂಪಾದಿಸಿ ಅದರಲ್ಲಿಯೇ ಬಾಳುವ ದಾರುಣ ಕಥೆಯಿದು. ಮಾಲೀಕರ ಕಠೋರ ವರ್ತನೆ ಎದ್ದು ಕಾಣುವುದು. ವಿಪರೀತವಾದ ಕಾಯಿಲೆಯಿಂದ ಬಳಲಿದರು ಮೂರುಮೈಲು ನಡೆದು ಬಂದು ಪತ್ರಿಕೆಗೆ ಸಂಪಾದಕೀಯ ಬರೆಯುವ ಕೆಲಸ. ಕೊನೆಗೆ ವಿಧಿವಶನಾಗುವುದು. ಬಡತನದ ಬದುಕು ಮತ್ತು ಶ್ರೀಮಂತರ ದರ್ಪ ಇಲ್ಲಿ ಕಾಣುತ್ತೇವೆ.

**'ಒಂಬತ್ತು ಕಾಸು'-** ನಂಜ ಅಡುಗೆಯನ್ನು ಮಾಡುವಾತ. ತನ್ನ ಪ್ರೇಯಸಿಗೆ ಒಂದು ಪುಟ್ಟ ಕಾಣಿಕೆ ನೀಡಲು ಅಸಹಾಯಕ. ಅವನಲ್ಲಿ ಒಂಭತ್ತು ಕಾಸು ವಿರುವುದಿಲ್ಲ. ತನ್ನ ಒಡೆಯನಿಂದ ಆತನಿಗೂ ಒಂಭತ್ತು ಕಾಸು ಸಿಗುವದಿಲ್ಲ ಕಾರಣ ಆತ ತನ್ನ ಪ್ರೇಯಸಿಯ ಪ್ರೇಮದಿಂದ ವಂಚಿತನಾಗುತ್ತಾನೆ. ನಂಜನ ಮಾಲಿಕನು ಮನಸ್ಸು ಮಾಡಿದ್ದರೆ ಆತನ ಪ್ರೇಮದ ಬಳ್ಳಿಯಲ್ಲಿ 'ಹೂ' ಅರಳಬಹುದಾಗಿತ್ತು ಈ ಘಟನೆಯು ಹಣದಿಂದ ತಿರಸ್ಕರಿಸಲ್ಪಟ್ಟ ಪ್ರೇಮವು ನಂಜನ ಬಾಳಲ್ಲಿ ತಂದ ನಂಜು. ಕೇವಲ ಪುಟ್ಟ ಕನ್ನಡಿ ಪಡೆಯಲು ಆಕೆ ನಂಜನನ್ನು ತೊರೆಯುವಳು. ಇದು ಈ ಕಥೆಯ ಮರ್ಮ.

**'ಜೀವನ ಕಲೆ'-** ಕಟ್ಟೀಮನಿಯವರು ಜೀವನ ಮತ್ತು ಕಲೆಯನ್ನು ಕುರಿತು ವಿವರಿಸುತ್ತಾರೆ. ಮಾನವನ ಕಪಟವನ್ನು ಕಾಣಲು ಸಾಧ್ಯ ೫೦೦ ರೂಪಾಯಿಕೊಟ್ಟು ಮುದಿ ಭಿಕ್ಷುಕನ ಚಿತ್ರವನ್ನು ತಂದು ಮನೆಯ ಅಲಂಕಾರ ಮಾಡುವರು. ಅದೇ ಭಿಕ್ಷುಕ ಪ್ರತ್ಯಕ್ಷನಾಗಿ ಅಮ್ಮಾ! ಕವಳ ಎಂದರೆ ಹಾಕುವ ಹೃದಯವಂತರಿಲ್ಲ. ಜೀವನವನ್ನು ಕೊಲೆಮಾಡುವ ಕಲೆಯು ಖಂಡಿತವಾಗಿಯೂ ಅದು ಕಲೆಯಾಗುವದಿಲ್ಲ.

“ಕಲ್ಲುನಾಗರ ಕಂಡರೆ ಹಾಲನೆರೆಯೆಂಬರು, ದಿಟನಾಗರ ಕಂಡರೆ ಕೊಲ್ಲೆಂಬರು.....” ಮಹಾತ್ಮ ಬಸವಣ್ಣರ ವಚನದ ತತ್ವ ಈ ಕಥೆಯ ಸಾರಾಂಶ.

**ಎರಡು ಗುಲಾಬಿ ಮತ್ತು ಮಧ್ಯ ಹಾಗೂ ಅಮೃತ -** ಜೀವನವು ಅನೇಕ ತಾಪತ್ರಯಗಳ ಗೂಡು, ಕಪಟ ಜೀವನವು ಅರ್ಥಹೀನ. ಇಂಥ ಬಾಳಿಗಿಂತ ಮರಣವೇ ಪರಮಸುಖ. ಗುಲಾಬಿ ಹೆಣ್ಣಿನಮುಡಿಗೇರಿ ತನ್ನ ಬದುಕನ್ನು ಸಾರ್ಥಕಮಾಡಿಕೊಂಡರೆ ಕೊನೆಗೆ ಅದು ಮಣ್ಣು ಪಾಲಾಗಿ ಅಂತ್ಯವನ್ನು ಕಾಣುತ್ತದೆ. ಇದು ಕಥೆಯ ಹಂದರ.

**ಅವನು ಕೊನೆಯ ಉಸಿರು ಹಾಕಿದ ಬಳಿಕ:**

ಈ ಕಥೆಯಲ್ಲಿ ವ್ಯಕ್ತಿಯು ಕೊನೆ ಉಸಿರು ಹಾಕಿದ ನಂತರ ಹೆಂಡತಿ, ಮಕ್ಕಳು ರೋಧಿಸುವರು ಇಲ್ಲಿ ಅದು ಕೇವಲ ನಾಟಕೀಯ. ಮನೆಯವರು ಆಪ್ತರು ಮೊಸಳೆ ಕಣ್ಣೀರು ಹಾಕುವರು. ಬಹಿರಂಗದಲ್ಲಿ ಅಕ್ಕರೆಯನ್ನು ತೋರಿಸುವ ಕುತಂತ್ರವು, ಆತನ ಸಾವಿಗಾಗಿ ಮಿತ್ರ ಕಣ್ಣೀರು ಹಾಕುತ್ತಾನೆ. ಗೋಳಾಡುತ್ತಾನೆ, ನೀನು ಹೋಗಿ ಬಿಟ್ಟೆಯಾ? ನಿನ್ನೊಂದಿಗೆ ಕಳೆದುಕೊಂಡ ಅಮೂಲ್ಯ ವಸ್ತುವನ್ನು ಇನ್ನೇತರದಿಂದಲೂ ಪಡೆಯಲಾರೆ, ಸ್ನೇಹಿತನ ನುಡಿ ಕೇಳಿದಾಗ ದುಃಖ ಉಮ್ಮಳಿಸಿ ಬರದಿರಲಾರದು!

**ಬಣ್ಣದ ಬುಗ್ಗೆ**

ಮಾನವನಿಗೆ ಕೀರ್ತಿ ಸಂಪತ್ತುಗಳಿದ್ದರೆ ಸ್ವರ್ಗ ಕೇವಲ ಮೂರೇ ಮೂರು ಗೇಣು ಅಮಲುಏರಿದವ ಗರಬಡಿದಂತೆ ವರ್ತಿಸುತ್ತಾನೆ. ಅಹಂದಿಂದ ತನ್ನನ್ನು ತಾನೇ ಮರೆಯುತ್ತಾನೆ. ಇದು ಸತ್ಯವಾದುದು.

ಬ್ರಹ್ಮಚಾರಿ ಮಹಾಶಯನೊಬ್ಬ ಜನರ ಹೊಗಳಿಕೆಯ ನುಡಿಗಳಿಗೆ ಉಬ್ಬಿ ಮೆರೆವನು. ತನ್ನ ವ್ಯಕ್ತಿತ್ವದ ಅರಿವು ಇರದಾಗದು. ಅವನನ್ನು ಅದೇ ಜನರು ದೂರ ತಳ್ಳಿದಾಗ ತನ್ನ ಮರಳುತನಕ್ಕೆ ಪಶ್ಚಾತ್ತಾಪಪಟ್ಟುಗೊಳ್ಳುವನು. ತನ್ನ ಕಾಯಕವನ್ನು ಪ್ರಾಮಾಣಿಕವಾಗಿ ಮಾಡಿ ತೃಪ್ತಿ ಪಡೆಯಬೇಕು. ಅದುವೇ ಸಂತೋಷದ ವಿಷಯ, ಕಡ್ಲೆಕಾಯಿ ಮಾರಿ ಜೀವಿಸುವ ಓರ್ವ ಮುದುಕಿಯ ಉದಾಹರಣೆಯನ್ನು ಲೇಖಕರು ಚಿತ್ರಿಸುತ್ತಾರೆ. ವಂಚಕರು ಸದಾ ಸುಳಿಯುತ್ತಾರೆ. ಅಂಥವರಿಂದ ದೂರವಿದ್ದು ಬದುಕನ್ನು ಸುಖಕರವಾಗಿ ಕಳೆಯಬೇಕೆಂದು ತಿಳಿಸುವುದೇ ಕಥೆಯ ಪ್ರಮುಖ ಉದ್ದೇಶ.

## ಕಟ್ಟೀಮನಿ ಅವರ ಇತರ ಕೃತಿಗಳು

### ಸಂಪಾದನೆ:

**ನವಿಲೂರ ಮನೆಯಿಂದ(೧೯೫೧):** ಕಟ್ಟೀಮನಿಯವರು ಸಂಪಾದಿಸಿದ ಕೃತಿಗಳಲ್ಲೊಂದಾಗಿದೆ. ಕವಿ ಚೆನ್ನವೀರ ಕಣವಿಯವರ ಸಹಕಾರದೊಂದಿಗೆ ಸಂಪಾದಿಸಿದ್ದಾರೆ. ಕವಿ ಶಿವೇಶ್ವರ ದೊಡ್ಡಮನಿ ಅವರ ಕೃತಿಗಳ ಸಂಕಲನವು ಇವರು ಉದಯೋನ್ಮುಖ ಕವಿಗಳಾಗಿದ್ದರು. ೧೯೫೦ರಲ್ಲಿ ನಿಧನರಾಗಿದ್ದು ಅವರ ವಯಸ್ಸು ಇಪ್ಪತ್ತೈದು ಮಾತ್ರ, ಆರ್ಥಿಕ ಮುಗ್ಗಟ್ಟಿನಿಂದ ಕಾಲೇಜ್ ಶಿಕ್ಷಣ ಪಡೆಯಲಾಗಲಿಲ್ಲ.

ಶಿವೇಶ್ವರ ದೊಡ್ಡಮನಿಯವರು ನೇಕಾರ ಕುಟುಂಬದಲ್ಲಿ ಜನಿಸಿ ಹಳ್ಳಿಯ ಸುಂದರ ಪರಿಸರದಲ್ಲಿ ಬೆಳೆದಿದ್ದವರು. ಜನಪದ ಸಾಹಿತ್ಯದಲ್ಲಿ ಆಸಕ್ತಿವುಳ್ಳವರಾಗಿದ್ದರು. ಕಟ್ಟೀಮನಿಯವರು ಇವರ ಸಾವಿನ ಬಗ್ಗೆ ತಿಳಿಸುತ್ತ ಚಿಕ್ಕ ವಯಸ್ಸುಳ್ಳವರಾಗಿದ್ದು ಸಾಯುವ ವಯಸ್ಸಾಗಿರಲಿಲ್ಲ. ವಿಷಮಜ್ವರದಿಂದ ಮರಣಿಸಿದರು. ಸಾಮಾಜಿಕ, ಆರ್ಥಿಕ, ಸಾಹಿತ್ಯಕ, ಸಾಂಸ್ಕೃತಿಕ ವಿಷಮತೆಯ ಜ್ವರವೆಂದೇ ವ್ಯಕ್ತಪಡಿಸುತ್ತಾರೆ ಕಟ್ಟೀಮನಿಯವರು.

ಸಮಾಜದಲ್ಲಿಯ ಅನಿಷ್ಟಗಳನ್ನು ಬಯಲಿಗೆಳೆಯುವಲ್ಲಿ ಆಸಕ್ತಿ ಹೊಂದಿದ್ದ ಶಿವೇಶ್ವರರು, ಅವರಾಶೆಯನ್ನು ಸಾವುನುಂಗಿ ನೀರು ಕುಡಿಯಿತೆಂದರೆ ತಪ್ಪಾಗದು!

**ರಸಿಕ ರಂಗದರ್ಶನ (೧೯೬೬):** ಖ್ಯಾತ ಸಾಹಿತಿ ಡಾ॥ ರಂ.ಶ್ರೀ. ಮುಗಳಿಯವರ ಅಭಿನಂದನ ಗ್ರಂಥ, ಮಾಧವ ಮಹಿಷಿಯವರೊಂದಿಗೆ ಕಟ್ಟೀಮನಿಯವರು ಸಂಪಾದಿಸಿರುವರು. ಈ ಕೃತಿಯಲ್ಲಿ ಅಭಿಮಾನಿಗಳು ಡಾ॥ ಮುಗಳಿಯವರ ಬದುಕು- ಬರಹ ಕುರಿತು ಚಿತ್ರಿಸಿದ್ದಾರೆ. ಕಟ್ಟೀಮನಿ ಅವರ 'ನಮ್ಮ ಮುಗಳಿಯವರಿಗೂ ಇದ್ದ ಸಾಹಿತ್ಯಕ ಸಂಬಂಧವನ್ನು ಮಾರ್ಮಿಕವಾಗಿ ವಿವರಿಸಿದ್ದಾರೆ. ಅವರ ಶಿಷ್ಯರು ಅಲ್ಲ, ವಿದ್ಯಾರ್ಥಿಯೂ ಆಗಿಲ್ಲ, ಆದರೆ ಡಾ॥ ಮುಗಳಿಯವರ ವ್ಯಕ್ತಿತ್ವಕ್ಕೆ ಮಾರು ಹೋದವರು. ಕಟ್ಟೀಮನಿ ಅವರ ಕಥೆಗಳನ್ನು ಮೆಚ್ಚಿದವರಾಗಿದ್ದರು. ಡಾ॥ ಮುಗಳಿಯವರ ಹೃದಯ ಶ್ರೀಮಂತಿಕೆಯನ್ನು ಹೊಗಳಿದ್ದಾರೆ.

**ಗೋಕಾಕ್ ತಾಲೂಕಿನಲ್ಲಿಯ ಸ್ವಾತಂತ್ರ್ಯ ಸಮರ (೧೯೮೦) :** ಈ ಪುಟ್ಟ ಕೃತಿಯನ್ನು ಶಿವಲಿಂಗಪ್ಪ ಭಾವಿಕಟ್ಟಿಯವರೊಂದಿಗೆ ಸಂಪಾದಿಸಿರುವರು. ಈ ಕೃತಿಯಲ್ಲಿ ಗೋಕಾಕ ತಾಲೂಕಿನ ಹಲವಾರು ಹೋರಾಟಗಾರರ ಪರಿಚಯವುಂಟು.

**ಹಾಲು ತೆರೆಗೆ ಬೆಲ್ಲದ ಕೆಸರು (೧೯೮೩):** ಕಟ್ಟೀಮನಿಯವರು ಸ್ವತಂತ್ರವಾಗಿ ಸಂಪಾದಿಸಿದ ಕೃತಿ. ಇದರಲ್ಲಿ ಸುಮಾರು ೧೫೦ ಶರಣರ ವಚನಗಳುಂಟು, ಜನಮನವನ್ನು ಗೆದ್ದ ಕೃತಿ ಇದಾಗಿದೆ.

**ಜೀವನ ಚರಿತ್ರೆ:** ಕಟ್ಟೀಮನಿ ಅವರು ವ್ಯಕ್ತಿ ಚಿತ್ರವನ್ನು ವಿಶಿಷ್ಟ ಶೈಲಿಯಲ್ಲಿ ನಿರೂಪಿಸಿದ್ದಾರೆ. ಹೋರಾಟಗಾರರ ಬದುಕು ಹಾಗೂ ಅವರ ತ್ಯಾಗವನ್ನು ವಿವರಿಸಿದ್ದಾರೆ.

**ಸೇನಾಪತಿ ಚೆನ್ನಪ್ಪವಾಲಿ (೧೯೫೦) -** ಈ ಕೃತಿಯಲ್ಲಿ ವಾಲಿಯವರ ಹೋರಾಟಮಯ ಬದುಕು ಚಿತ್ರಿತಗೊಂಡಿದೆ ಬೆಳಗಾವ ಜಿಲ್ಲೆಯಲ್ಲಿಯ ಸಮಗ್ರ ಹೋರಾಟ ಪರಿಚಯವಾಗುತ್ತದೆ. ಸ್ವಾತಂತ್ರ್ಯ ಪ್ರಿಯರಿಗೆ ಹಿಡಿಸುವ ಕೃತಿಯು.

**ಪ್ರಿಯದರ್ಶಿನಿ, ಮಾರ್ಗದರ್ಶಿನಿ, ಇಂದಿರಾಗಾಂಧಿ (೧೯೩೫):** ಇಂದಿರಾಜಿಯವರ ಹೋರಾಟ, ಅವರು ಧೈರ್ಯ, ಸ್ಥೈರ್ಯ, ಛಲವಂತಿಕೆಯಿಂದ ಆಳಿದ ಆಡಳಿತ ವೈಖರಿ ವಿವರಿಸಲಾಗಿದೆ. ಅವರು ಕಮ್ಯುನಿಸ್ಟ್ ಧೋರಣೆಗಳನ್ನು ಅಳವಡಿಸಿಕೊಂಡಿದ್ದರು ಅವರ ವಿಶಾಲ ಭಾವನೆ, ರಾಷ್ಟ್ರಪ್ರೇಮ, ವ್ಯಕ್ತವಾಗುತ್ತದೆ.

**ಪ್ರವಾಸ ಸಾಹಿತ್ಯ:** ಕಟ್ಟೀಮನಿಯವರು ಪ್ರವಾಸದ ಅನುಭವಗಳನ್ನು 'ನಾನು ಕಂಡ ರಷ್ಯಾ'ವೆಂಬ ಕೃತಿಯಲ್ಲಿ ವಿವರಿಸಿದ್ದಾರೆ. ರಷ್ಯಾದೇಶದ ಸೋವಿಯತ್ ಲ್ಯಾಂಡ್ ನೆಹರುಪ್ರಶಸ್ತಿಯು ದೊರೆತಾಗ ಅದನ್ನು ಸ್ವೀಕರಿಸಲು ರಶಿಯಾಕ್ಕೆ ಹೋಗಿದ್ದರು. ಅಲ್ಲಿ ಕಂಡ, ಅನುಭವಿಸಿದ ವಿವರಣೆಯನ್ನು ದಾಖಲಿಸಿದ್ದಾರೆ. ಆ ಸಮಯದಲ್ಲಿ ಎರಡು ವಾರದವರೆಗೆ ರಶಿಯಾದಲ್ಲಿ ಪ್ರವಾಸ ಕೈಕೊಂಡು ಸಾಕಷ್ಟು ಅನುಭವಗಳಿಸಿಕೊಂಡಿದ್ದು ಸಾಹಿತ್ಯ ದೃಷ್ಟಿಯಿಂದ ಪ್ರಯೋಜನಕರವೇ ಸರಿ!

**ನಾನು ಕಂಡ ರಷ್ಯಾ (೧೯೭೦) -** ಸಾಹಿತ್ಯ ಪ್ರಿಯರಿಗೆ ಅಚ್ಚು ಮೆಚ್ಚಾದ ಕೃತಿ. ಆ ದೇಶದ ಆಚಾರ, ವಿಚಾರ, ಸಂಸ್ಕೃತಿ, ಸಾಹಿತ್ಯಕ ಹಿನ್ನೆಲೆ ಅರಿಯಲು ಉತ್ತಮ ಕೃತಿ, ಇದೊಂದು ವಿವರಣಾತ್ಮಕ ಪ್ರವಾಸ ಕಥನ.

**ಮಕ್ಕಳ ಸಾಹಿತ್ಯ :** ಬಸವರಾಜ ಕಟ್ಟೀಮನಿಯವರು ಮಕ್ಕಳ ಸಾಹಿತ್ಯದಲ್ಲೂ ಕೃಷಿ ಮಾಡಿದ್ದಾರೆ. ಮಕ್ಕಳು ರಾಷ್ಟ್ರದ ಆಸ್ತಿ, ದೇಶದ ಭವಿಷ್ಯ ಮಕ್ಕಳನ್ನೇ ಅವಲಂಬಿಸಿದೆ. ಇಂದಿನ ಮಕ್ಕಳೇ ನಾಳಿನ ಪ್ರಜೆಗಳು, ಕಥೆ, ಕವಿತೆ, ನಾಟಕ, ಪ್ರಬಂಧ - ಮುಂತಾದ ಪ್ರಕಾರಗಳುಂಟು. 'ಸಂಗೊಳ್ಳಿ ರಾಯಣ್ಣ' (೧೯೭೩) ಮತ್ತು 'ಕುಮಾರರಾಮ' (೧೯೩೫) ಈ ಎರಡು ಕೃತಿಗಳು ಐತಿಹಾಸಿಕ ಕೃತಿಗಳಾಗಿವೆ ಮಕ್ಕಳ ವಯೋಮಾನಕ್ಕೆ ಅನುಗುಣವಾಗಿ ರಚಿಸಲ್ಪಟ್ಟಿವೆ. ಜ್ಞಾನಾರ್ಜನೆಗೆ ಉಪಯುಕ್ತವಾಗಿವೆ. ಶೈಲಿ ಹಿಡಿಸುವಂತಹದು. ಮಕ್ಕಳಿಗಾಗಿ ಭಾರತ- ಭಾರತಿ ಪುಸ್ತಕ ಸಂಪದ ಮಾಲಿಕೆಯಲ್ಲಿ ಪ್ರಕಟಗೊಂಡಿವೆ. ಪುಟ್ಟ ಪುಟ್ಟ ಪುಸ್ತಕಗಳು ಓದಲು ಮಕ್ಕಳಿಗೆ ಬಲು ಅಚ್ಚು ಮೆಚ್ಚು.

**ಆತ್ಮಕಥೆ: "ಕಾದಂಬರಿಕಾರನ ಕಥೆ' (೧೯೮೧)** - ಈ ಕೃತಿಯು ಕಟ್ಟೀಮನಿ ಅವರ ಆತ್ಮ ಚರಿತ್ರೆಯಾಗಿದೆ. ತಮ್ಮ ಜೀವನದ ಬಹುಮುಖಗಳನ್ನು ದಾಖಲಿಸಿದ ಸಾರ್ಥಕ ಕೃತಿಯಾಗಿರುವುದು ಅವರ ಸಾಹಿತ್ಯಕ, ರಾಜಕೀಯ, ಸಾಂಸ್ಕೃತಿಕ, ಚಟುವಟಿಕೆಯನು ಹಾಗೂ ಮಾಹಿತಿಯನ್ನು ಒಳಗೊಂಡಿರುವುದು. ಪ್ರಖರವಾದ ಶೈಲಿಯನ್ನು ಹೊಂದಿದೆ. ಕಟ್ಟೀಮನಿ ಅವರನ್ನು ಕುರಿತು ಸಮಗ್ರ ಅಧ್ಯಯನ ಗೈಯುವವರಿಗೆ ಮಾರ್ಗದರ್ಶಿಕೆಯಾಗುತ್ತದೆ. ಆತ್ಮಕಥೆಯು ಸ್ವಾಗತಾರ್ಹವಾದುದು.

**ಕವನ ಸಂಕಲನ**

ಕಟ್ಟೀಮನಿಯವರು ಕಥೆ, ಸಣ್ಣ ಕಥೆ, ಹಾಗೂ ಕಾದಂಬರಿಗಳನ್ನು ರಚಿಸಿ ಪ್ರಸಿದ್ಧರಾದಂತೆ ಕವನಗಳನ್ನು ರಚಿಸಿದ್ದಾರೆ. ಅವರು ಎರಡು ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಕಂಪೋಜಿಟರ್ (೧೯೭೬) ಸ್ವತಂತ್ರವ್ವ (ಗೀತರೂಪಕ) (೧೯೭೭) ಸಂಕಲನಗಳು ಅನಿಸಿಕೆಗಳನ್ನು, ಅನುಭವಗಳನ್ನು, ತಳಮಳಗಳನ್ನು, ಪರಿಣಾಮಕಾರಿ ಅಭಿವ್ಯಕ್ತಗೊಳಿಸಲು ಪದ್ಯಪ್ರಕಾರವೇ ಸಮರ್ಥವಾದ ಮಾಧ್ಯಮವು.

**ಕಂಪೋಜಿಟರ್ (೧೯೭೬):**

ದುಡಿಯುವ ಜನರ ಶೋಷಣೆಯನ್ನು ಖಂಡತುಂಡಾಗಿ ಖಂಡಿಸಿ ಬೆಂಬಲಕ್ಕೆ ಸಿದ್ಧರಾಗಿರುವುದು. ಗ್ರಾಮೀಣ ಜನರ ಬಡತನ, ನೋವು ಬಗ್ಗೆ ಪ್ರಸ್ತಾಪಿಸಲು ಕವನಗಳ ಮೂಲಕ ವ್ಯಕ್ತಪಡಿಸಲು ಪ್ರಯತ್ನಿಸಿರುವರು. ಈ ಸಂಕಲನದಲ್ಲಿ ಎಂಟು ಕವನಗಳಿದ್ದು ಅವುಗಳಲ್ಲಿ ಮೂರು ಕವನಗಳು ವ್ಯಕ್ತಿಗಳನ್ನು ಕುರಿತದ್ದಾಗಿದೆ, ಉಳಿದ ಇನ್ನುಳಿದ ಐದು ಕವನಗಳು ದುಡಿಯುವ ಬಡಜನರ, ಚಿಂದಿ ಬದುಕು ನಡೆಸುವವರನ್ನು ಕುರಿತದ್ದಾಗಿದೆ, 'ಎಲುಬುಗಳ ಹಾಡು' ಕವನದಲ್ಲಿ ಮಣ್ಣಲ್ಲಿ ಮಣ್ಣಾಗುವ, ಕಲ್ಲಿನೊಡನೆ ಕಲ್ಲಾಗುವ, ಕಟ್ಟಿಗೆಯೊಡನೆ ಕಟ್ಟಿಗೆಯಾಗುವ ಜನರ ಪಾಡೇ ಎಲುವುಗಳಹಾಡು. "ಕುಡುಗೋಲು' ಕವನವು ಎಲ್ಲವನ್ನು ಕಳೆದುಕೊಂಡು ಶೋಷಣೆಗೆ ಒಳಗಾದವರ, ನೊಂದವರ ಹಾಡುಗಳಿವೆ. "ಕುಡುಗೋಲು' ಒಂದು ಕ್ರಾಂತಿಯ ಸಂಕೇತವಾಗಿದೆ. ಇಂದಿರಾಜಿ, ಲೆನಿನ್, ಮೊದಲಾದವರ ವ್ಯಕ್ತಿತ್ವವನ್ನು ಕವನರೂಪದಿ ಸೆರೆಹಿಡಿದ್ದಾರೆ. ಕವನಗಳಲ್ಲಿ ವಿಚಾರಧಾರೆಗಳು ಓತಪ್ರೋತವಾಗಿ ತುಂಬಿಕೊಂಡಿರುವವು.

**ಸ್ವತಂತ್ರವ್ವ (೧೯೭೭) -** ಇದು ಕಟ್ಟೀಮನಿ ಅವರ ದ್ವಿತೀಯ ಸಂಕಲನ, ಗೀತರೂಪದಲ್ಲಿ ರಚಿಸಲಾಗಿದೆ. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕು ಹಲವಾರು ವರ್ಷಗತಿಸಿದರು ದೇಶದ ಪರಿಸ್ಥಿತಿ ಮಾತ್ರ ಯಥಾ ಸ್ಥಿತಿ, ಬಡವರು ಅತೀ ಬಡವರಾಗಿ, ಶ್ರೀಮಂತರು ಆಗರ್ಭ ಶ್ರೀಮಂತರಾಗಿ ಮೆರೆಯುವುದು, ಉಳ್ಳವರು ಗತಿ ಹೀನರನ್ನು ಹರಿದು ತಿನ್ನುವುದು ಇಂದಿನ ವಾಸ್ತವಿಕ ಚಿತ್ರಣ.

ಮಹಾತ್ಮಾಗಾಂಧೀಜಿಯವರ ಜೊತೆಗೆ ಮೆಚ್ಚಿನಶಿಷ್ಯರಾಗಿ, ದಂಡಿಯಾತ್ರೆ ಮಾಡಿ, ಜೈಲುಶಿಕ್ಷೆ ಅನುಭವಿಸಿ ಚಲೇಜಾವ್ ಚಳುವಳಿಯಲ್ಲಿ ಭಾಗವಹಿಸಿದ ಹುಚ್ಚಪ್ಪ, ಹರಿಜನ ಕೃತಿಯಲ್ಲಿದ್ದು ಅವರಂತಾಗಿ ಕೊನೆಗೆ

ಪಾರ್ಶ್ವವಾಯುವಿಗೆ ತುತ್ತಾಗುತ್ತಾನೆ. ಹುಚ್ಚಪ್ಪ, ಆತ ಮಾತ್ರ ಆದರ್ಶವಾದಿ, ಇಂದಿನ ಜನತೆಯ ಮುಂದೆ ಹೆಸರಿಗೆ ತಕ್ಕಂತೆ ಹುಚ್ಚಪ್ಪ, ಹುಚ್ಚನಾಗಿ ಕಾಣುತ್ತಾನೆ. ಆತನ "ದಯಾಮಾಡಯ್ಯ ಜವರಾಯಾ'ವೆಂಬ ದೀನತೆಯ ಕೂಗು ಕರುಳನ್ನು ಹಿಂಡಿದಂತಾಗುತ್ತದೆ.

ದಲಿತಕವಿ ಡಾ॥ ಸಿದ್ಧಲಿಂಗಯ್ಯನವರ 'ಹೊಲೆಮಾದಿಗರ ಹಾಡು' ನೆನಪಿಗೆ ಬರದಿರದು. "ಯಾರಿಗೆ ಬಂತು? ಎಲ್ಲಿಗೆ ಬಂತು ೪೭ರ ಸ್ವಾತಂತ್ರ್ಯ?" ವೆಂಬ ಕವನವು ಕಿವಿಯಲ್ಲಿ ಪ್ರತಿಧ್ವನಿಸುತ್ತದೆ.

ಇಂದಿರಾಜಿ ಸರ್ವಾಧಿಕಾರಿಯಾಗಿದ್ದರೂ ಪ್ರಿಯದರ್ಶಿನಿಯಾಗಿ ಕವಿ ಮನಸ್ಸಿನಲ್ಲಿದ್ದಾಳೆ, ಭಗತ್‌ಸಿಂಗ್ ತಾನು ಬಯಸಿದ ರಾಮರಾಜ್ಯ ಬರಲಿಲ್ಲೆಂದು ವೇದನೆ ಪಡುತ್ತಾನೆ. ನೋಟು, ಹೆಂಡ, ಹೆಣ್ಣು ಕೊಟ್ಟು ಓಟುಪಡೆದು ರಾಜಕಾರಣ ಮಾಡುವ, ಮೆರೆಯುವ ಪ್ರಜಾಪ್ರತಿನಿಧಿಗಳ ಬಗೆಗೆ ಮಾರ್ಮಿಕವಾಗಿ ಚಿತ್ರಿತವಾಗಿದೆ. ಕಾದಂಬರಿಗಳಲ್ಲಿ ಪ್ರಸ್ತುತಪಡಿಸಿದ ಹಾಗೆ ಕವನ ಮತ್ತು ರೂಪಕಗಳಲ್ಲೂ ಕ್ರಾಂತಿಯ ಭಾವನೆಯನ್ನು ತೋರಿದ್ದಾರೆ. ಬಂಡಾಯಗಾರರಾದ ಬಸವರಾಜ ಕಟ್ಟೀಮನಿಯವರ ಮನೋದೃಷ್ಟಿಯೇ ಅಂತಹದು.

**ಅನುವಾದ ಸಾಹಿತ್ಯ:** ಬೈಲೊ ರಶಿಯನ್ ಕಥೆಗಳನ್ನು ಕನ್ನಡ ಭಾಷೆಗೆ ತರ್ಜುಮೆಗೈದಿದ್ದಾರೆ. ಬಿಡಿ ಬಿಡಿಯಾದ ಕಥೆಗಳನ್ನು ನಾಡಿನ ವಿವಿಧ ಪತ್ರಿಕೆಗೆ ಕಳಿಸಿ ನಂತರ ಪ್ರಕಟಗೊಂಡ ನಂತರ ಅವುಗಳನ್ನು ಸಂಗ್ರಹಿಸಿದ ಕೃತಿ. 'ಕಾಡಿನ ಹಾಡು' ೧೯೭೭ ರಲ್ಲಿ ಸಾರಸ್ವತಲೋಕಕ್ಕೆ ಅರ್ಪಿಸಿದ್ದಾರೆ. ಮೂಲಭಾಷೆಯ ಸೊಗಡು ಯಥಾವತ್ತಾಗಿ ಅನುವಾದದಲ್ಲೂ ಪ್ರಕಟಗೊಂಡಿದೆ.

**ನಾಟಕ ಸಾಹಿತ್ಯ:** ಕಾದಂಬರಿಕಾರ ಬಸವರಾಜ ಕಟ್ಟೀಮನಿಯವರು ನಾಟಕ ರಚನೆಯಲ್ಲೂ ಮೇಲ್ಮೆ ಹೊಂದಿದ್ದಾರೆ. ರಚಿಸಿದ್ದು ಒಂದೇ ನಾಲ್ಕು ಅಂಶಗಳಿಂದ ಕೂಡಿರುವ ಒಂದು ಸಾಮಾಜಿಕ ನಾಟಕ (೧೯೫೮) ಪಟ್ಟಣದ ಹುಡುಗಿ ತಾನು ನಿರ್ಲಕ್ಷಿಸಿದ ಹಳ್ಳಿಯನ್ನೇ ಪುನಃ ಪರಿಸ್ಥಿತಿಯ ಪ್ರಭಾವಕ್ಕೆ ಒಳಗಾಗಿ ಸೇರುತ್ತಾಳೆ. ಅದರ ಒಳಗಿನಲ್ಲಿರುವ ನಾಟಕ ಸಾರಾಂಶ.

ಸರೋಜ ಪೇಟೆಯ ಹುಡುಗಿ, ಹಳ್ಳಿ ಮತ್ತು ಹಳ್ಳಿಯ ಜನರೆಂದರೆ ಅಲರ್ಜಿ. ಹಳ್ಳಿಯ ಸದಾಶಿವನೊಂದಿಗೆ ಸಂಬಂಧ ಹೊಂದಿರುತ್ತಾಳೆ. ಅವರೆಲ್ಲ ಹಳ್ಳಿಯ ಜೀವನಕ್ಕೆ ಒಗ್ಗಿದವರು ಸರೋಜಳ ಕೊಂಕು ನುಡಿ, ಆಕೆಯ ರೀತಿ, ಆತ್ಮ ಪ್ರಶಂಸೆ ಯಾರಿಗೂ ಪ್ರಸಂದವಾಗುತ್ತಿರಲಿಲ್ಲ. ಅತ್ತೆ ಪಾರ್ವತಿಯೊಡನೆ ಸದಾ ಜಗಳ ಕಾಯುವುದು ಆಕೆಯ ಪ್ರವೃತ್ತಿಯು ಆದರು ಪಾರ್ವತಿಯು ಸರೋಜಳನ್ನು ಪ್ರೀತಿ, ವಿಶ್ವಾಸದಿಂದ ನೋಡಿಕೊಳ್ಳುತ್ತಿದ್ದಳು. ಕೊನೆ ಕೊನೆಗೆ ಹಳ್ಳಿಯ ಜೀವನ ಸುಖಮಯವೆಂಬ ವಿಚಾರಕ್ಕೆ ಸರೋಜಳು ಅಪ್ಪಿಕೊಂಡು ಎಲ್ಲರೂ ಒಪ್ಪುವಂತೆ, ಮೆಚ್ಚುವಂತೆ ಬಾಳುತ್ತಾಳೆ. ಈ ನಾಟಕದಲ್ಲಿ ಬರುವ ಪಾತ್ರಗಳಾದ ಚಂಪಾವತಿ, ಮಹಾಲಿಂಗಪ್ಪ ಶಂಕರಪ್ಪ, ಗೌಣವಾಗಿ ಕಾಣುವರು. ಸರೋಜ ಮತ್ತು ಸದಾಶಿವ ಇವರ ಪಾತ್ರಕ್ಕೆ ಇನ್ನುಳಿದ ಪಾತ್ರಧಾರಿಗಳು ಪೂರಕವಾಗಿದ್ದಾರೆ. ಈ

ನಾಟಕದಲ್ಲಿ ಎಂಟು ಪಾತ್ರಗಳಿಗೆ, ಕಟ್ಟೀಮನಿಯವರು ಒಂದೇ ನಾಟಕವನ್ನು ರಚಿಸಿದರೂ ಅದು ಅಮೂಲ್ಯ ಮುತ್ತೇ ಸರಿ!

## ಕಟೀಮನಿಯವರ ಕಾದಂಬರಿ ಕುರಿತು

## ಅಭಿಪ್ರಾಯಗಳು

'ಮೋಹದ ಬಲೆಯಲ್ಲಿ' ಹಾಗೂ 'ಜರತಾರಿ ಜಗದ್ಗುರು' ಎರಡು ಕಾದಂಬರಿಗಳು ಅವಳಿ ಜವಳಿ ಕಾದಂಬರಿಗಳು ಆದರೂ ಎರಡೂ ಪ್ರತ್ಯೇಕ ಕೃತಿಗಳೇ. ಈ ಎರಡು ಕಾದಂಬರಿಗಳು ವೀರಶೈವ ಸಮಾಜದ ಮಠ ಹಾಗು ಜಗದ್ಗುರುಗಳ ಸುತ್ತಲೇ ಹೆಣೆಯಲ್ಪಟ್ಟಿವೆ. ಜಗದ್ಗುರುಗಳನ್ನೇ ಮುಂದಿಟ್ಟುಕೊಂಡು ಮುಖಂಡರು ನಡೆಸುವ ಭ್ರಷ್ಟರಾಜಕೀಯ, ಸ್ವಾರ್ಥ ಇವುಗಳ ಜ್ವಲಂತ ಚಿತ್ರವನ್ನು ಕೊಡುತ್ತದೆ. ಗಮನಾರ್ಹವಲ್ಲದಿದ್ದರೂ ಲೇಖಕರ ಸಮಾಜವಾದಿ ಸಾಮಾಜಿಕ ಪ್ರಜ್ಞೆಯ ಹಿನ್ನೆಲೆ ಇಲ್ಲದ ಚಿಂತನ ದ್ರವ್ಯವಾಗಿರುವುದು ಕೃತಿಯ ಹೆಚ್ಚಳ.

**ಆರ್.ವ್ಹಿ, ಭಂಡಾರಿ.**

"ಪೌರುಷ ಪರೀಕ್ಷೆ" ಕಾದಂಬರಿಯಲ್ಲಿನ ನಿರೂಪಣೆ ಪಾತ್ರಗಳ ಮುಖಾಂತರ ಸಾಗುವುದು ಒಂದು ವಿಶೇಷಣ. ಆದರೆ ಪಾತ್ರಗಳೇ ಉತ್ತಮ ಪುರುಷರಲ್ಲಿ ಘಟನೆಗಳನ್ನು ಅನುಭವಗಳನ್ನು ನಿರೂಪಿಸುವಲ್ಲಿ ಎಲ್ಲ ಪಾತ್ರಗಳಲ್ಲಿ ಒಂದೇ ನಿರೂಪಣೆ ಇದೆ. ಪಾತ್ರಗಳ ಸ್ವಭಾವದಂತೆ ಕಥನ ಕ್ರಿಯೆ ನಡೆದಿಲ್ಲ. ಇನ್ನೊಂದು ವಿಶೇಷ ಅಂದರೆ ಕಥನ ಕ್ರಿಯೆ ನಡೆಯುವುದು ರಾಜ್ಯದ ಸಾಮಾನ್ಯ ಪ್ರಜೆಗಳ ಮಧ್ಯೆ ಕಥೆ, ರಾಜಮನೆತನದ್ದಾಗಿದ್ದರೂ ಆಳುವ ಮತ್ತು ಆಳಿಸಿಕೊಳ್ಳುವವರ ನಡುವಿನ ಅಂತರಗಳು ಸ್ಪಷ್ಟವಾಗಿ ಕಾದಂಬರಿಯಲ್ಲಿ ಭಾಗ ಪಡೆದಿವೆ. ಇದು ಕಟ್ಟೀಮನಿ ಅವರ ಬರವಣಿಗೆಯ ವೈಶಿಷ್ಟ್ಯತೆಯಲ್ಲೊಂದು.

**-ಡಾ || ವೀರೇಶ ಬಡಿಗೇರ**

"......ಮೂರು ಕಾದಂಬರಿಗಳಲ್ಲಿ ವಸಾಹತುಶಾಹಿ ವಿರುದ್ಧದ ಪ್ರಭುತ್ವ ಶಾಹಿ ಮತ್ತು ವಸಾಹತು ಶಾಹಿ ವಿರುದ್ದ ಪ್ರಜಾಸತ್ತೆ ನಡೆಸಿದ ಹೋರಾಟಗಳ ಚಿತ್ರಣ ಕಂಡು ಬರುತ್ತದೆ. ಒಂದೆಡೆ ವಸಾಹತು ಶಾಹಿಯನ್ನು ವಿರೋಧಿಸುವ ಚಿತ್ರಣ ಇದ್ದರೆ ಟಿಪ್ಪುವಿಗೆ ವಿರುದ್ಧವಾಗಿ ಬ್ರಿಟಿಷರ ನೆರವನ್ನು ಸ್ವಾಗತಿಸುವುದನ್ನು ಇನ್ನೊಂದೆಡೆ ಕಾಣುತ್ತೇವೆ"

**-ಪ್ರೊ. ಎಮ್.ಎಚ್. ಕೃಷ್ಣಯ್ಯ**

ಧರ್ಮದ ಹೆಸರಿನಲ್ಲಿ ಅಧರ್ಮ, ಸಂಸ್ಕತಿ ಹೆಸರಿನಲ್ಲಿ ಬರ್ಬರತೆ ನಿಯಮ ನೀತಿಗಳ ಹೆಸರಿನಲ್ಲಿ ವಿಷಮತೆ ಸ್ವಾತಂತ್ರ್ಯದ ಹೆಸರಿನಲ್ಲಿ ಪಾರತಂತ್ರ್ಯ ನಮ್ಮ ಸುತ್ತಮುತ್ತ ವಿಜೃಂಭಿಸುತ್ತಿದೆ. ಒಂದು ಕಡೆ ಭೋಗ, ವೈಭೋಗಗಳ ಕಟ್ಟಾಟ್ಟಹಾಸ ಮತ್ತೊಂದು ಕಡೆ ಉಪವಾಸ, ವನವಾಸ, ರೋಗರುಜಿನಗಳ ಆರ್ತರವ, ಇದು ನಿಸರ್ಗದ ನಿಯಮ

ಪ್ರಭಾವ ಅಲ್ಲ ಮಾನವ ಮೃಗ ಪ್ರಭುತ್ವದ ಪ್ರಭಾವ, ಎಲ್ಲೆಲ್ಲೂ ಒಳಿತಿಗಾಗಿ ಬಯಸುವ, ಆದರ್ಶವಾದಿಯಾದ, ಸಮಾಜದ ಪ್ರತಿವಾದ, ಕನ್ನಡ ಲೇಖಕ, ಈ ಡಂಭಾಚಾರ, ಈ ಶೋಷಣೆ, ಈ ಸೋಗಲಾಡಿತನ, ಈ ವಂಚನೆ, ಈ ಜಾತಿ ಮತ್ಸರ, ಈ ಹುಳುಕು ನಾರುವ ಅಂತರಂಗ, ಈ ದರ್ಪಗಳನ್ನು ಕಂಡು ಅಸ್ವಸ್ತ ಮನಸ್ಕನಾಗಿ ರೊಚ್ಚಿಗೇಳುವುದು ಸಹಜ. ತನ್ನ ಬರವಣಿಗೆಯ ಮೂಲಕವಾದರೂ ಸಮಾಜ ಶರೀರದ ರೋಗಗಳನ್ನು ಖಂಡಿಸಿ ಅವುಗಳ ಅನಾಚಾರವನ್ನು ಬಯಲಿಗೆಳೆದು ನಿರ್ಲಕ್ಷಕ್ಕೀಡಾದ ದಲಿತ ವರ್ಗದ ಉದ್ದಾರಕ್ಕೆ ಶ್ರಮಿಸುವುದು ತನ್ನ ಧ್ಯೇಯಕ್ಕೆ ಲೇಖಕರ ಎಲ್ಲೆಲ್ಲೂ ಸೌಂದರ್ಯವನ್ನೆ ಸಂಸ್ಕೃತಿಯನ್ನು, ಕೋಮಲತೆಯನ್ನೇ ಕಾಣುವ ಸಮಸ್ಯೆ ಇದ್ದರೂ ಸರಳಗೊಳಿಸಿ ನಯವಾಗಿ, ನವಿರಾಗಿ ಚಿತ್ರಿಸುವ ಸಂಪ್ರದಾಯ ಅವನಿಗೆ ಸರಿದೋರಲಿಲ್ಲ. ಹೀಗೆ ತೀವ್ರ ಪ್ರತಿಕ್ರಿಯಾಶೀಲ ಸಾಹಿತ್ಯ, ಈ ಬಗೆಯ ಉದ್ದೇಶದಿಂದ ಕನ್ನಡ ಸಣ್ಣಕತೆಗೆ ಹೊಸ ಪ್ರಾಣ, ಹೊಸ ತ್ರಾಣ, ಹೊಸಮುಖ ಪ್ರಾಪ್ತವಾಯಿತು. ಈ ಪಂಥದ ಪ್ರಮುಖ ಲೇಖಕರಲ್ಲಿ ಕಟ್ಟೀಮನಿ ಅವರೂ ಒಬ್ಬರು ಅವರ ಮೂಲ ಧರ್ಮವೇ ಕ್ರಾಂತಿಕಾರವಾದುದು. ಅನ್ಯಾಯ ಅನಾಚಾರಗಳನ್ನು ಕಂಡು ಸಿಡಿದೇಳುವ ಸೌಮ್ಯರೂಪದ ಸಿಡಿಗುಂಡು.

**-ಡಾ|| ಎಚ್.ಜೆ. ಲಕ್ಕಪ್ಪಗೌಡರು**

"........ಈ ವಿಚಾರಗಳ ಹಿನ್ನೆಲೆಯಲ್ಲಿ ಮತ್ತು ಕೃತಿಯ ಆಶಯದ ನೆಲೆಯಲ್ಲಿ ಆಲೋಚಿಸಿದಾಗ ಪ್ರಸ್ತುತ ಕಾದಂಬರಿಯಲ್ಲಿ ಕಟ್ಟೀಮನಿ ಅವರ ಕಮ್ಯುನಿಸ್ಟ್ ಧೋರಣೆಗಳ ಬಗೆಗಿನ ಅಸ್ಪಷ್ಟ ನಿಲುವುಗಳು ಗೋಚರವಾಗುತ್ತದೆ."

**-ಅಶೋಕ್ ಶೆಟ್ಟರ್**

"ನಲವತ್ತೆರಡರ ಚಳುವಳಿಯ ತೀಕ್ಷತೆ, ತೀವ್ರತೆ, ಆವೇಶ, ತ್ಯಾಗಗಳ ಪರಿಪೂರ್ಣ ಚಿತ್ರ ಮೂಡಿದೆ. ಆದರೆ ಈ ಚಳುವಳಿಯ ವೈಶಾಲ್ಯದ ಕಲ್ಪನೆ ತಕ್ಕಷ್ಟು ಬರುವುದಿಲ್ಲ. ಅದರ ಸಾರ್ವತ್ರಿಕತೆ, ಸಾಮೂಹಿಕತೆಯ ಚಿತ್ರ ಸ್ಪಷ್ಟವಾಗಿ ಮೂಡಿಲ್ಲ."

**-ಗೋಪಾಲಕೃಷ್ಣ ಅಡಿಗ**

"ಕಟ್ಟೀಮನಿ ಅವರ ಕಾದಂಬರಿಗಳಲ್ಲಿ "ಮಾಡಿ ಮಡಿದವರು"ಗೆ ವಿಶಿಷ್ಟ ಸ್ಥಾನವಿದೆ. ೧೯೪೨ ರ' ಭಾರತ ಬಿಟ್ಟು ತೊಲಗಿ" ಚಳುವಳಿಯ ಹೋರಾಟವನ್ನು ಆಧರಿಸಿರುವ ಈ ಕಥೆ ಸ್ವಾತಂತ್ಯಸಂಗ್ರಾಮದಲ್ಲಿ ಗ್ರಾಮೀಣ ಯುವಕರು ವಿದ್ಯಾರ್ಥಿಗಳು, ಹಿರಿಯರು, ಹೆಂಗಸರು, ರೈತರು ತೊಡಗಿಕೊಂಡ ಒಂದು ವೀರಗಾಥೆ ಆಗಿದೆ. ಅದರೊಟ್ಟಿಗೆ ರೈತರ ರಾಜಕೀಯ ಪ್ರಜ್ಞೆ ಗಂಭೀರವಾಗದ ಮಿತಿ. ಕಾಂಗ್ರೆಸ್ಸಿಗರ ಸೋಗಲಾಡಿತನ ಇವೆಲ್ಲವನ್ನು

ಒಪ್ಪವಾಗಿ ಚಿತ್ರಿಸುತ್ತವೆ. ಮುಖ್ಯವಾಗಿ ಕಟ್ಟೀಮನಿ ಅವರ ಇತರ ಕೃತಿಗಳಲ್ಲಿ ಸಂಘಟಿಸಿದ ಎಲ್ಲಿಲ್ಲದ ಕಲಾತ್ಮಕ ಪ್ರಮಾಣ ಬದ್ಧತೆ ಈ ಕಾದಂಬರಿಯಲ್ಲಿ ಸಂಬಂಧಿಸಿದೆ."

**-ಆರ್.ವ್ಹಿ. ಭಂಡಾರಿ**

"ಕಾದಂಬರಿಯಲ್ಲಿ ಬಹುಮುಖ್ಯವಾಗಿ ಗಮನಿಸಬೇಕಾದ ಅಂಶ ಎಂದರೆ ಗಾಂಧಿವಾದ ಮತ್ತು ಸಮತಾವಾದದ ತಾಕಲಾಟಗಳು ಮಾರ್ಕ್ಸವಾದದ ಪ್ರಭಾವ ಪ್ರೇರಣೆಗಳು ಕುರಿತು ಆಕ್ರೋಶ ವ್ಯಕ್ತಪಡಿಸುವ ಕಟ್ಟೀಮನಿ ಅವರು ಸಮಕಾಲೀನ ಸಂದರ್ಭದ ಸಾಮಾಜಿಕ ಬದುಕಿನ ಗಾಢ ಚಿತ್ರಣವನ್ನು ಇದರಲ್ಲಿ ಚಿತ್ರಿಸುತ್ತಾರೆ. ಪೂರ್ಣ ಬದುಕಿಗಾಗಿ ತಹತಹಿಸುವ ಇಲ್ಲಿನ ಪಾತ್ರಗಳು ಶೋಷಕ ಶೋಷಿತ ನಡುವಿನ ಕಂದಕಗಳಾಗಿವೆ. ನೋವು ನಲಿವುಗಳ ಸೈದ್ಧಾಂತಿಕ ಬದ್ಧತೆಯನ್ನು ವೈಜ್ಞಾನಿಕವಾಗಿ ಒಪ್ಪಿಕೊಳ್ಳುವಲ್ಲಿ ಸೋಲುತ್ತವೆ. ಇಂತಹ ನೋವಿನ ಕಾರಣಗಳನ್ನು ವೈಜ್ಞಾನಿಕ ಅರಿವಿನ ಮೂಲಕ ಪಡೆದುಕೊಂಡು ಸಾರ್ಥಕವಾಗುವ ಪಾತ್ರಗಳನ್ನು ನಿರಂತರ "ಚಿರಸ್ಮರಣೆ"ಯಲ್ಲಿ ಕಾಣುತ್ತೇವೆ ಕಟ್ಟೀಮನಿ ಕ್ರಾತಿಕಾರಿ ಹೋರಾಟಗಳ ಸಂಪರ್ಕ ಹೊಂದಿದ್ದರೂ ನಿರಂಜನರಷ್ಟು ತಾತ್ವಿಕ ಬದ್ಧತೆ ಸೈದ್ಧಾಂತಿಕ ಚೌಕಟ್ಟನ್ನು ಪಡೆದುಕೊಳ್ಳುವುದರಲ್ಲೇ ಎಲ್ಲೋ ಒಂದು ಕಡೆ ಕೊರತೆ ಕಾಣುತ್ತದೆ"

**-ಡಾ|| ವೀರೇಶ ಬಡಿಗೇರ**

"ಜ್ವಾಲಾಮುಖಿಯ ಮೇಲೆ......" ವರ್ಗದ ಸಂಘರ್ಷದ ಹಿನ್ನೆಲೆಯಲ್ಲಿ ಗಮನಿಸಬೇಕಾದ ಈ ಕಾದಂಬರಿಗೆ ಹೆಗಲೆಣೆಯಾಗುವ ಕೃತಿ ಪ್ರಗತಿಶೀಲರಲ್ಲಿ ವಿರಳವಾಗಿದೆ. ಕಾರ್ಮಿಕರ ಶೋಷಣೆ ಮತ್ತು ಪ್ರತಿಭಟನೆಯ ಹಿನ್ನೆಲೆಯಲ್ಲಿ ಪರಿಣಾಮಾತ್ಮಕ ಬೆಳವಣಿಗೆಗೆ ಸಂಘರ್ಷದ ಕ್ರಿಯಾರೂಪವನ್ನು ವಿವಿಧ ವಿನ್ಯಾಸದಲ್ಲಿ ಸೆರೆ ಹಿಡಿದಿದ್ದಾರೆ. ಆದರೆ ಇವೆಲ್ಲಾ ಒಂದು ಸಂಕೀರ್ಣ ಸ್ವರೂಪದಲ್ಲಿ ಒಂದರೊಳಗೊಂದು ಅರಳುತ್ತಾ ಬೆಳೆಯುತ್ತಾ ಹೋಗುತ್ತವೆ. ಗಾಂಧಿವಾದಿ ಆಗಿದ್ದ ಕಾಂಗ್ರೆಸ್ಸಿಗೆ ಚಂದ್ರಣ್ಣ ಸೌಮ್ಯವಾದಿಯಾಗಿ ಪರಿವರ್ತನೆಯಾಗುವವರೆಗಿನ ಬೆಳವಣಿಗೆ, ವರ್ಗ ಸಂಘರ್ಷ ಬೆಳವಣಿಗೆಗೆ ಆಗುತ್ತದೆ. ಹಾಗಂತ ನಾವು ಇಡೀ ಕಾದಂಬರಿಯನ್ನು ಚಂದ್ರಣ್ಣನ ಬೆಳವಣಿಗೆಯ ಹೆಜ್ಜೆ ಗುರುತಿಗಾಗೇ ಗಮನಿಸಬೇಕಾಗಿಲ್ಲ. ಯಾಕೆಂದರೆ ಇಲ್ಲಿ ನಮಗೆ ಕೃತಿಯ ಆಲೋಚನಾ ಸಂಗತಿ ಮುಖ್ಯ. ಆದ್ದರಿಂದ ಕಾದಂಬರಿಯ ಅಂತಃಸತ್ಯವೆಂದರೆ ವರ್ಗ ಸಂಘರ್ಷದ ಚಾರಿತ್ರಿಕ ತಾತ್ವಿಕ ದರ್ಶನವೇನೆಂದರೆ ವರ್ಗ ಸಂಘರ್ಷ ಚಾರಿತ್ರಿಕ ತಾತ್ವಿಕ ದರ್ಶನವೇ ಆಗಿದೆ."

**-ಆರ್.ವಿ. ಭಂಡಾರಿ**

## ಸಾಹಿತಿಗಳೊಂದಿಗೆ ಪತ್ರ

ನೀವು ಕೃಪೆಯಿಟ್ಟು ಕಳಿಸಿದ ಆತ್ಮಕಥೆ ಕಾದಂಬರಿಕಾರನ ಕಥೆಯೂ ನಿಮ್ಮ ಕಾಗದವೂ ತಲುಪಿದವು ಅದನ್ನು ದಿನವೂ ಸ್ವಲ್ಪ ಸ್ವಲ್ಪವಾಗಿ ಓದುತ್ತಿದ್ದು ನಿನ್ನೆ (೧೫-೪-೧೯೮೨) ತಾನೇ ಪೂರೈಸಿದೆ ಕಾದಂಬರಿಯಂತೆಯೇ ಕಾದಂಬರಿಕಾರನ ಕಥೆಯೂ ಓದಿಸಿಕೊಂಡು ಹೋಗುತ್ತವೆ. ಒಂದು ಪಂಕ್ತಿಯನ್ನು ಬಿಡದಂತೆ

ಅಮೂಲಾಗ್ರವಾಗಿ ಓದಿದ್ದೇನೆ. ಒಂದೆರಡು ಕಡೆ ಭಿರ್ತ್ಸನೆಯನ್ನು ಮಾಡಿದ್ದೇನೆ! ನೀವು ಆನಂದ, ಶ್ರೀದೇವಿ, ಸೀತಾರಾಮ್, ವಿಚಾರವಾಗಿ ಬರೆದುದು ನನಗೆ ತುಂಬ ಆತ್ಮೀಯವಾಗಿ ಆನಂದವಾಯಿತು. ರಾಜಕಾರಣಿಗಳ ನೈಜ ಸ್ವರೂಪವನ್ನು ಬಯಲಿಗೆಳೆದಿದ್ದೀರಿ. ಸಾಹಿತಿಗಳ ಅಸೂಯಾಪರತೆಯನ್ನು ಮುಚ್ಚಿಟ್ಟಿಲ್ಲ! ಆದರೆ ದರ್ಪದ ಸದೃಶವಾದ ಒಂದು ಕಟ್ಟು ರೀತಿಯ ನಿಮ್ಮ ಬರವಣಿಗೆ ವಾಸ್ತವವಾಗಿ ನಿಮ್ಮ ಹೃದಯದ ನೈಜ ಮೃದುತ್ವವನ್ನು ರಕ್ಷಿಸಿಕೊಳ್ಳಲು ನಿಮ್ಮ ವ್ಯಕ್ತಿತ್ವ ಆರೋಪಿಸಿಕೊಂಡಿರುವ ಬರಿಯ ರಕ್ಷಾ ಕೋಟೆ ಎಂದು ಭಾವಿಸುತ್ತೇನೆ.

ನೀವೂ ನಿಮ್ಮ ಮನೆಯವರು ಮಕ್ಕಳೂ ಎಲ್ಲ ಕ್ಷೇಮವೆಂದು ಹಾರೈಸುತ್ತೇನೆ,

ದಿ: ೧೬-೦೪-೧೯೮೨ ಇಂತಿ ವಿಶ್ವಾಸ ಪೂರ್ಣ

- ಕುವೆಂಪು

ನಮ್ಮ ಕೈಗೆ ಒಳ್ಳೆಯ ಗೆಲುವಿನ ಪುಸ್ತಕ ಕೊಟ್ಟು ಹೋದಿರಿ ಅದನ್ನು ಕೈಯಿಂದ ಕೆಳಗಿಸಲೇ ಆಗುವುದಿಲ್ಲ. ರಾತ್ರಿ ಹೊತ್ತು ನನ್ನ ಕಣ್ಣು ಅಬಲ ನನ್ನ ಹೆಂಡತಿ ಪುಟ ತಿರುವುತ್ತಾ 'ಕರಿಗಡುಬು' ಎಂಬಲ್ಲಿ ಬಂದಳು, ಓದಿದಷ್ಟು ತುಂಬ ಸ್ವಾರಸ್ಯಕರವಾದ ಪ್ರಸಂಗ ನಮಗೆ ನಕ್ಕು ನಕ್ಕು ಹೊಟ್ಟೆ ಹುಣ್ಣಾಯಿತು, ತಾವು ನಿಷ್ಕಪಟ ಪ್ರೇಮಶಾಲಿ ಹಾಸ್ಯಪ್ರಿಯರು, ನಿಮ್ಮನ್ನು ನೀವೆ ನೋಡಿ ನಗುವ ದಿಟ್ಟಿಸಿಕೊಳ್ಳುವ ಹಾಗೂ ತಿದ್ದಿಕೊಳ್ಳುವ ಪ್ರವೃತ್ತಿ ಮನೋಹರವಾಗಿದೆ. ವ್ಯಕ್ತಿಗಳ ಚಿತ್ರಣ ಹಾಗೂ ಟೀಕೆಗಳು ತುಂಬಾ ಸ್ವಾರಸ್ಯಕರವಾಗಿಯೂ ಇವೆ. ನಿಮ್ಮ ಮದುವೆಯ ಪ್ರಸಂಗ ಹಾಗೂ ಸಹಧರ್ಮಿಣಿಯವರಿಂದ ನಿಮ್ಮ ಬರಹವನ್ನು ಪ್ರತಿಮಾಡಿಸುವ ಸಾಹಸ ಎಲ್ಲ ಹಿತವಾಗಿ ಮೂಡಿ ಬಂದಿದೆ ಇದು ಅಕಾಡೆಮಿ ಬಹುಮಾನ ಗಳಿಸುವ ಪುಸ್ತಕ, ನಮ್ಮ ಓದುಗರು ರಸಿಕರಾದರೆ ಪ್ರಾಮಾಣಿಕ ಅನಿಸಿಕೆಗಳಿಗೆ ಬೆಳೆ ಕೊಡುವವರಾದರೆ ಪ್ರಾಮಾಣಿಕರಾದರೆ ಎನಿಸುತ್ತದೆ.

ತಮಗೆ ನನ್ನ ಹಾರ್ಧಿಕ ಅಭಿನಂದನೆಗಳು ಮೇಲು ನೋಟಕ್ಕೆ ಅಷ್ಟು ಆಕರ್ಷಕವಾಗಿದೆಯಲ್ಲ. ಪೂರ್ತಿ ಓದಿದ ಮೇಲೆ ಇನ್ನಷ್ಟು ಸತ್ವ ಹಾಗೂ ಚೆಲುವಿನ ಸೊಬಗನ್ನು ಪಡೆಯುವಂತಾಗಿರುವನೋ ನಾನು! ಎನಿಸುತ್ತದೆ. ನಿಮ್ಮ ಪ್ರೀತಿಯ ಮಾತುಗಳು ನನ್ನನು ನವೀಕರಿಸುವಂತಿವೆ. ಇದನ್ನೆಲ್ಲ ಮುಖತಃ ಹೇಳಲು ಬರುವುದಿಲ್ಲ ಬರೆದು ಬಿಟ್ಟೆ.

...ಈಗಾಗಲೇ ಮೊದಲಿನಿಂದ ಮುಕ್ಕಾಲು ಭಾಗ ಓದು ಪೂರೈಸಿದ್ದೇನೆ. ಓದು ಕಣ್ಣು ನೋವಾದಾಗ ಮಾತ್ರ ಸ್ವಲ್ಪ ಕಾಲ ಕೆಳಗಿಡುತ್ತೇನೆ. ಬಹು ಆಕರ್ಷಕವಾದ ಪುಸ್ತಕ, ಸುಂದರ ಹಾಗು ಅನನ್ಯವಾದ ಬರವಣಿಗೆ ನಿಮ್ಮ ಗದ್ಯ ತುಂಬ ಸೊಗಸು ಕನ್ನಡಕ್ಕೊಂದು ಕೋಡು.

ಮೈಸೂರು ಇಂತಿ ಪ್ರೀತಿಯ

೧-೧೨-೧೯೮೧ **ಪು.ತಿ. ನರಸಿಂಹಾಚಾರ**

ತಮ್ಮ 'ಕಾದಂಬರಿಕಾರನ ಕಥೆ', 'ಪುಸ್ತಕ ನಿನ್ನೆ ಬಂದಿತು' 'ಅಕ್ಕರೆಯ ಕೊಡುಗೆಗಾಗಿ ವಂದನೆ' ಇಂಥ ವಿಷಯದಲ್ಲಿ ನಿಮ್ಮ ದೃಷ್ಟಿ ಬೇರೆ ತರಹವು ನೀವು ಹೇಳಿರುವ ಹಲವು ಸಂಗತಿ ಹೇಳಲೇಬೇಕಾಗಿದ್ದವನಲ್ಲ. ಹೇಳಿದರೂ ಹೀಗೆ ಹೇಳಬೇಕಾಗಿರಲಿಲ್ಲ ಎಂದು ನನಗೆ ಎನಿಸುವುದು ಸಹಜ. ಈ ಮಾತಿನಿಂದ ನಿಮಗೆ ಬೇಸರವಾಗುವುದು ಬೇಡ.

ಶ್ರೀ ಅಡಿಗರ ಪತ್ರಗಳು ಓದಲು ಚೆನ್ನಾಗಿವೆ ಆದರೂ ಅವು ಪಡೆದಿರುವ ಪುಟಗಳ ಸಂಖ್ಯೆ ಹೆಚ್ಚಾಯಿತೆನ್ನುವಂತಿದೆ ನಾನು ಗೋಕಾಕ, ಬೇಂದ್ರೆ ನಿಮಗೆ ಸಾಹಿತ್ಯ ಅಕಾಡೆಮಿ ಪುರಸ್ಕಾರ ದೊರೆಯದಕ್ಕೆ ಕಾರಣ ಎಂದು ಹೇಳಿದ್ದೀರಿ. ಇದು ದಿಟ ಅಲ್ಲ. ನಾನು ಕನ್ನಡ ಡಿಸ್ಕವರಿ ಬೋರ್ಡಿನಲ್ಲಿದ್ದೆ ಗೋಕಾಕ ಇದ್ದರು ಬೇಂದೆ. ಇದ್ದರೆಂದು ನೆನಪಿಲ್ಲ ನಿಮ್ಮ ಗ್ರಂಥದ ಮಾತು ಬೋರ್ಡ್ ಸಭೆಗಳಲ್ಲಿ ಎಂದೂ ಬರಲಿಲ್ಲ ನಾನು ಬೇಂದ್ರೆ ಸಹ ಎಂದೇ ಆಗಲಿ ಇವರ ಮಾತನ್ನಾಡಿದುದಿಲ್ಲ.

ಅಕಾಡೆಮಿಯ ಪುರಸ್ಕಾರ ನಿರ್ಧಾರದ ಕ್ರಮವೇ ತಪ್ಪಾಗಿತ್ತು ಎಂದು ನಾನು ಅನೇಕ ಬಾರಿ ಅಕಾಡೆಮಿಗೆ ತಿಳಿಸಿದೆ. ಕೊನೆಗೆ ಕನ್ನಡದಲ್ಲಿ ಪುರಸ್ಕಾರಕ್ಕೆ ತಕ್ಕ ಪುಸ್ತಕ ಇರಲಿಲ್ಲ ಎಂದು ಒಂದು ಬಾರಿ ಸಂಸ್ಥೆ ನಿರ್ಧರಿಸಿದಾಗ ಬೇಸತ್ತು ಅಷ್ಟರಲ್ಲಿ 'ಚೆನ್ನಬಸವನಾಯಕ' ಗೊಂದಲದ ಸಂದರ್ಭದಲ್ಲಿ ಅಕಾಡೆಮಿಯಿಂದ ತೀರಾ ಬಿಡಿಸಿಕೊಂಡೆ.

ನಾನು ನಿಮಗೆ ಎಂದೂ ಅನ್ಯಾಯ ಮಾಡಿಲ್ಲ ನಿಮಗೆ ಎನ್ನಲೇಕೆ? ಯಾರಿಗೂ ಮಾಡಿಲ್ಲ ಎಂದೇ ಹೇಳಬಲ್ಲೇ.

೮-೧-೧೯೮೨ **ಮಾಸ್ತಿ ವೆಂಕಟೇಶ ಅಯ್ಯಂಗಾರ**

ನೀವು ಪ್ರೀತಿ ಪೂರ್ವಕ ಕೊಟ್ಟಿರುವ ನಿಮ್ಮ ಆತ್ಮ ಕಥೆ ಓದಿದೆ. ತುಂಬಾ ಸಂತೊಷವಾಯಿತು. ಬಹುಕಾಲದ ಒಬ್ಬ ಸನ್ಮಿತ್ರನ ಬದುಕು ರೂಪುಗೊಡ ಬಗೆಯ ಇನ್ನಷ್ಟು ಹತ್ತಿರದಿಂದ ತಿಳಿಯಲು ಸಾಧ್ಯವಾಯಿತು. ಆತ ಕಥೆಯ ಬರವಣಿಗೆಗೆ ಇರಬೇಕಾದ ಋಜುತ್ವ, ಸ್ಪಷ್ಟನೆ, ನಿರ್ವಚನೆ, ಧೈರ್ಯ, ಇದರಲ್ಲಿ ಪುಟ ಪುಟದಲ್ಲಿ ಕಂಡೆ ಮೆಚ್ಚಿದೆ ಇಲ್ಲಿನ ಕಥನ ರೀತಿ ನಿಮ್ಮದೆ ಆದ ವಿನೂತನ ಶೈಲಿಯಲ್ಲಿ ಬಂದಿರುದು ನಿಮ್ಮದೇ ಆದ ಕೃತಿಗೆ ಹೊಸ ಮೆರುಗನ್ನು ನೀಡಿದೆ. ಕನ್ನಡ ಭಾಷೆಯಲ್ಲಿ ಮಾತ್ರವಲ್ಲ. ನಾನು ತಿಳಿದ ಇತರ ಯಾವುದೇ ಭಾಷೆಯಲ್ಲೂ ಈ ತೆರನ ಶೈಲಿ ಆತ್ಮಚರಿತ್ರೆಗೆ ಯಾರೂ ಅಳವಡಿಸಿಕೊಂಡದ್ದು ನಾನೇ ಓದಲಿಲ್ಲ. ನಿಮ್ಮ ಕಥೆ ಕಾದಂಬರಿಗಳಲ್ಲಿ ಎಂತೋ ಅಂತೆ ಇಲ್ಲಿಯೂ ಕಟ್ಟೀಮನಿಯವರ ಶೈಲಿ ಕಟ್ಟೀಮನಿಯವರದೇ ಎಂಬಂತೆ ಆಗಿದೆ. ನಿಮ್ಮ ಬಾಲ್ಯಜೀವನ ಕಾದಂಬರಿಕಾರರೆನಿಸಿ ಬರೆದುದನ್ನು ಓದಿ ಮನಸ್ಸು ಕಲಕಿದೆ. ಎಂಥಾ ಕಷ್ಟದ ಕುಲುಮೆಯಲ್ಲಿ ಈ ಪುತ್ಥಳಿ ಬಂಗಾರ ಸ್ಫುಟಗೊಂಡಿದೆ ಎಂದು ಸಂಕಟದೊಂದಿಗೆ ಸಂತೋಷ ಆಗಿದೆ. ನಿಮ್ಮ ಸಾಧನೆಗೆ ತಕ್ಕ ಮನ್ನಣೆ ಇನ್ನೂ ಕೂಡಾ ದೊರಕಲಿಲ್ಲ ಎಂದು ಮನಃಪೂರಕವಾಗಿ ಹಾರೈಸುತ್ತೇನೆ.

ಪೆರಡಾಲ (ಕೇರಳ) **ಕಯ್ಯಾರ ಕಿಯ್ಯಣ್ಣರೈ**

ನೀವು ವಿಶ್ವಾಸದಿಂದ ಕಳಿಸಿದ ನಿಮ್ಮ ಆತ್ಮ ಕಥೆ ಬಂದು ತಲುಪಿದೆ ಇನ್ನೂ ಪೂರ್ತಿ ಓದಿ ಮುಗಿಸಲಾಗಲಿಲ್ಲ. ಅದರಲ್ಲೂ ನೀವು ಮಠಗಳ ಜಗದ್ಗುರುಗಳ ಇವರ ಬಗ್ಗೆ ಬರೆದಿರುವ ಭಾಗ ಓದಿದೆ. ಈ ರೀತಿ ಕಳ್ಳ ಜಗದ್ಗುರುಗಳ ಕಂದಾಚಾರದ ಮಠಗಳ ಬಗ್ಗೆ ಹೋರಾಟದವರನ್ನು ಇಂದಿಗೂ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಒಬ್ಬರನ್ನು ನಾನು ಕಂಡಿಲ್ಲ. ಈ ಕಂದಾಚಾರ ಸಂಪ್ರದಾಯಗಳ ವಿರುದ್ದ ನೀವು ಲೇಖನಿಯ ಮೂಲಕ ನಡೆಸಿದ ಹೋರಾಟ ನನಗಂತೂ ಅವಿಸ್ಮರಣೀಯ ದಾರಿದೀಪ. ಪ್ರಗತಿಶೀಲದಲ್ಲಿ ಅನೇಕ ಸಾಹಿತಿಗಳು ಇದಕ್ಕಾಗಿ ನಿಮ್ಮನ್ನು

ಹೊಗಳಿದರು. ಅವರು ಹೊಗಳಿದ ಲಿಂಗಾಯತ ಮಠಗಳನ್ನು ನೀವು ಟೀಕಿಸಿದ್ದಕ್ಕೆ ಮಾತ್ರವೇ ಅವರಾರೂ ತಮ್ಮ ಜಾತಿಯ ಮಠಗಳ ಜಗದ್ಗುರುಗಳು ತಂಟೆಗೆ ಹೋಗಲಿಲ್ಲ. ಅದರ ಬದಲು ಒಳಗಿಂದೊಳಗೆ ಅವರೊಡನೆ ಶಾಮೀಲಾದವರೇ (ಅಡಿಗ ಅನಂತಮೂರ್ತಿ ಸಹ) ನೀವು ಇಳಿವಯಸ್ಸಿಂದೇ ಆಗ ಈ ಕೆಲಸ ನಿಲ್ಲಸಲೇ ಕೂಡದು. ಈ ಜಾತ್ಯಾಂಧರಿಗೂ ಮತ ಮೂಢರಿಗೂ ನಿಮ್ಮ ಹೆಸರೆಂದರೆ ಸಿಂಹಸ್ವಪ್ನವಾಗಿದೆ. ಈ ದಿಕ್ಕಿನಲ್ಲಿ ತರುಣರಿಗೆ ಸ್ಫೂರ್ತಿದಾಯಕವಾಗುವಂತೆ ನೀವು ಏನಾದರು ಆಗಿಂದ್ದಾಗ್ಗೆ ಮಾಡಲೇಬೇಕು.

ಮೂಡಿಗೆರೆ **- ಕೆ.ಪಿ. ಪೂರ್ಣಚಂದ್ರ ತೇಜಸ್ವಿ.**

## ಕಟ್ಟೀಮನಿ ಕುರಿತು ಅನಿಸಿಕೆ

ಕಟ್ಟೀಮನಿ ಬದುಕಿನ ಶೈಲಿಯೇ ಕಾದಂಬರಿ ಶೈಲಿಯಾಗಿ ಪರಿಣಮಿಸಿದೆ. ಅಕ್ಷಯ ನಿಧಿಯಾದ ಅವರ ಬತ್ತಳಿಕೆಯಲ್ಲಿ ವಜ್ರಾಸ್ತ್ರ, ಆಗ್ನೇಯಾಸ್ತ್ರಗಳಿವೆಯೇ ಹೊರತು ಕುಸುಮ ಬಾಣಗಳು ಅಷ್ಟಿಲ್ಲ.

**- ದೇ. ಜವರೇಗೌಡ.**

ಕಟ್ಟೀಮನಿ ಬಡವರು ನಿಜ. ಆದರೆ ಅತ್ಯಂತ ಆತ್ಮಾಭಿಮಾನಿಗಳಿದ್ದರು. ಅವರ ಅಭಿಮಾನಕ್ಕೆ ಚ್ಯುತಿ ಬರುವ ಒಂದೇ ಒಂದು ನುಡಿಯನ್ನು ಅವರು ಸಹಿಸುತ್ತಿರಲಿಲ್ಲ.

**–ಕೋ. ಚೆನ್ನಬಸಪ್ಪ**

ಭೂಜಾತ ಸಾಹಿತಿ **– ಸಿದ್ಧಯ್ಯ ಪುರಾಣಿಕ**

ಬಸವರಾಜ ಕಟ್ಟೀಮನಿ ಕೇಳಿದ್ದಕ್ಕಿಂತಲೂ ಕಂಡಿದ್ದ ಹೆಚ್ಚು **- ಡಾ|| ಎಮ್.ಎಸ್. ಸುಂಕಾಪುರ**

ಕಟ್ಟೀಮನಿ ಎದೆಗಾರಿಕೆಯ ಲೇಖಕ. **- ಡಾ|| ಎಸ್.ಎಂ. ವೃಷಭೇಂದ್ರಸ್ವಾಮಿ**

ಕಟ್ಟೀಮನಿಯವರು ನಿರ್ಭಿಡೆಯ ಸ್ವಭಾವ ಅನುಚಿತವಾದ ಘಟನೆ ತಮ್ಮ ಗಮನಕ್ಕೆ ಬಂದರಾಯಿತು ಅದನ್ನು ಮುಖದೆದುರಿಗೇ ಖಂಡಿಸದೇ ಬಿಡರು.

**- ಎಂ. ಅಕಬರ ಅಲಿ.**

### ಕವಿಗಳು ಕಂಡಂತೆ ಬಸವರಾಜ ಕಟ್ಟೀಮನಿ

**ಬಸವರಾಜ ಕಟ್ಟೀಮನಿ : ವ್ಯಕ್ತಿ**

ಅರೆಗಳಿಗೆ ಅನ್ಯಾಯ ಸಹಿಸದಲಗಿನ ಏಱು
ನಿನ್ನ ಐವತ್ತಕ್ಕೆ ನೀನೇ-
ರಿ ನಿಂತ ಆಕಾಶ ಎಷ್ಟು?
ಉಪವಾಸದೆಲೆ ಮೇಲೆ ವ್ಯಥೆಯ ಕಡುಬನ್ನುಂಡು
ಪವನ ಮಂಚದ ಮೇಲೆ ಪವಡಿಸಿದವ
ಮಣ್ಣು ವಾಸನೆಯಲ್ಲಿ ಅಗ್ನಿ- ಲೇಖನಿಯದ್ದಿ
ಕಣ್ಣಾಲಿ- ಮಿಂಚ
ಮನಸು- ಹಾಳೆಯ ಮೇಲೆ ಮೂಡಿಸಿದವ
ಯೋಚನೆಯ ಒರೆಯಿಂದ
ಖಚಿತ ನಿರ್ಣಯದ
ನಿಶಿತ ಖಡ್ಗವ ಹಿರಿದು
ಅನ್ಯಾಯಕೆದುರಾಗಿ
ಜಾಲಾಡಿ ಭ್ರಷ್ಟ-ಕಂಟಕ-ಪಶುನೆತ್ತರ
ನಕ್ಕವ ಅನಿಸಿದರೆ
ಗಕ್ಕನೇ ನಿಂತೊಮ್ಮೆ ಹೊರಳಿ
ಸಿಂಹ ನೋಟವ ಬೀರಿ
ಸರಳ ರೇಖೆಯಗುಂಟ ನಡೆಯಲೆಂದು ಒದ್ದವ
ಸೋತರೂ ಸೋತಿಲ್ಲ ಅತ್ತರು ಅತ್ತಿಲ್ಲ
ಕೇಳಿಯೂ ಕೇಳಿಲ್ಲ ಅಭಾಸ-
ದಂಗಳದಲ್ಲಿ ಮಂಗಳದ ಗುರಿಯಿಂದ
ಕೈದೊಣ್ಣೆ ಬೀಸಿದ ಹೋ---
ಎಂದು ನಕ್ಕು ಅಳಸಿದವ
ನೀನೆ ಗೀಚಿದ್ದ ಪಾಟಿ ಮೇಲಿನ ಚಿತ್ರ
ಸಣ್ಣತನದಭಿರಾಮ ಹಿರಿತನದ ಶ್ರೀಮಂತ ದೊಡ್ಡವರ
ದೊಡ್ಡ ಹೆಸರಿನ ಪಟ್ಟಿ ನನ್ನ ಬಳಿಯಲೊಂದುಂಟು
ಇದರಲ್ಲಿ ನೀನೊಬ್ಬ ಬಹಳ ಕಡಿಮೆಯೆ ಬರುವಿ

**-ಸಿದ್ಧಲಿಂಗ ಪಟ್ಟಣಶೆಟ್ಟಿ**

**ವಾಸ್ತವವಾದಿ**

ಬೆಂಕಿಯ ಕಾರುತಲಿರುವ ಸಮಾಜದಿ
ನಿಮ್ಮಂಥವರೇ ಬೇಕಲ್ಲ.

ನಮ್ಮ ಸಮಾಜವ ಬಯಸಿದ ಜನತೆಗೆ
ವೇಷಧಾರಿಗಳು ಬೇಕಿಲ್ಲ!

ಸಮಾಜ ಹಿಂಡುತೆ ಮದದಿಂ ಮೆರೆಯುತೆ
ನರ್ತನ ನಡದಿದೆ ಸೋಗಿಗಳ:
ಜನಮನ ಹಿಂಡುವ ಮಾನವರಯ್ಯೊ
ಶಾಂತಿಯ ದೀಕ್ಷಿತರಾಗಿಹರು!.
ಧರ್ಮದ ಹೆಸರಲಿ ಪಾತಕ ಗೈಯುತ-
ಲಿರುವರು ದೇಶ ದ್ರೋಹಿಗಳು:
ನವೀನಯುಗದೊಳು ಬಡವರ ಕೊರಳಲಿ
ಕುಣಿಯುತಲಿರುವವು ಹಗ್ಗಗಳು!
ವಾಸ್ತವಿಕತೆಯಲಿ ಜೀವನ ಕಂಡು
ನೀವು ಬರೆದಿರಿ, ಕತೆ - ಕಾದಂಬರಿ:
ನಿಷ್ಠುರ ನುಡಿಯಲಿ ಜನಮನ ತಿದ್ದಿ
ಬೆಳೆದು, ಬೆಳೆಸೆದಿರಿ ಸಾಹಿತ್ಯ ಸಿರಿ!

ನಿಮ್ಮ ಖಡ್ಡ ಸಮ ಲೇಖನಿಯಿಂದಲೆ
ಚೇತನಗೊಂಡಿದೆ ಕರುನಾಡು
ನಿಮ್ಮ ಪ್ರತಿಭೆಗೆ ಪಟ್ಟವ ಕಟ್ಟಿ
ಗೌರವ ಗೊಂಡಿತು ನಲುನಾಡು!

**-ಬಾಳೇಶ ಲಕ್ಷೆಟ್ಟಿ**

## ಚುಟುಕು

ಕೆಚ್ಚು-ಕಲಿತನದಮತಿ
ಬಿಚ್ಚುಮಗ್ಗಿ ಮಾತುಕಥಿ
ಸಾಧುವಿಗೆ
ಸಾಧಬಗೆ
ಭಾಧಿಪಗೆ ಬಿಚ್ಚು ಗತ್ತಿ!

**-ಎಂ. ಅಕಬರ ಅಲಿ**

## ಪರಿಮಳಿಸುವ ಪುಷ್ಪ

ನಾಡಿನ ಹಿತ ಚಿಂತನೆಯಲಿ
ಮುಳುಗಿಹ ಆ ದೃಷ್ಟಿ
ತುಟಿಯಂಚಿನ ಒಳಗಡೆಯಲಿ
ನಗೆ- ತುಂತುರ ವೃಷ್ಟಿ

ನಸುವೆತ್ತರ ಆಕೃತಿಗೋ-
ಪ್ಪುವ ವಿಸ್ತ್ರತ ನೊಸಲ
ನುಡಿದೇವಿಯ ಸೇವೆಗೆ ಇವ
ಕೊಟ್ಟಿರುವನು ಹೆಗಲ

ಉಟ್ಟಿರುವದು ತೊಟ್ಟಿರುವದು
ಖಾದಿಯ ಸಿರಿಯುಡಿಗೆ
ಸಾಹಿತ್ಯ ಸತ್ತಥದಲಿ
ಗಾಂಭೀರ್ಯದ ನಡಿಗೆ

ಕಥೆ -ನಾಟಕ-ಕಾದಂಬರಿ
ಏನೆಲ್ಲವ ಬರೆದ
ರಶಿಯದ ಹೊಸ ನೆಲದಲ್ಲಿಯು
ಹೆಸರಾಗಿಯೆ ಮೆರೆದ

ಎದೆಯೊಳಗಡೆ ತುಳುಕಾಡಿದೆ
ಕರುನಾಡಿನ ಕೆಚ್ಚು
ಇವ ನುಡಿದರೆ ಜೇನ್ ಸುರಿವುದು
ಇಲ್ಲವೊ 'ಮರೆ -ಮುಚ್ಚು'

ಬಡತನವನ್ನು ಅರಿತವನಿವ
ಬಡವರ ಕೈವಾರಿ
ದುಡಿವವರಿಗೆ ದಯೆಗರೆದವ
ತೋರಿದ ಸರಿದಾರಿ

ಪದವಿ ಪ್ರಶಸ್ತಿಗಳಿಗೆ ಮನ
ಸೋಲದ ಗಂಭೀರ
ಪಾಂಡಿತ್ಯದ ಭಂಡಾರವೆ
ತಾನಾಗಿಹ ಧೀರ

ಲೇಖನಿವ ಶಾಸಕನಿವ

ಇವಕಿರುಕತೆಗಾರ
ರಾಷ್ಟ್ರೀಯತೆ - ಮೆರೆಸಿದ ಶ್ರೀ
ಕಾದಂಬರಿಕಾರ
ನುಡಿದೇವಿಯ ಗುಡಿಯೊಳಗಿನ
ಬೆಳ ಬೆಳಗುವ ದೀಪ
ವರ ಸರಸತಿ ಸಿರಿಮುಡಿಯಲಿ
ಪರಿಮಳಿಸುವ ಪುಷ್ಪ

**-'ಉಳುವೀಶ' ಹುಲೆಪ್ಪನವರ ಮಠ**

---

**ಬಸವರಾಜ ಕತ್ತಿ ಮೊನೆ**

ಕನ್ನಡದ ಕನಸು ನನಸಾಗಿಸಿದವ
ಕುಂದರ ನಾಡಿನ ಹಸುರಿನ ಕಂದನವ
ಭೂ ಪ್ರದಕ್ಷಿಣೆ ಮಾಡಿದ ತನ್ನನುಭವ
ಕನ್ನಡಕಾದಂಬರಿಕಾರ ಮಹಾನುಭಾವ
ಬೀಸಿದೆ ಅನ್ಯಾಯಳಿವ ಸಾಹಿತ್ಯ ಕತ್ತಿಯನು

ಧೋತಿ ನಿಲುವಂಗಿ ಆಗಾಗ ತೊಟ್ಟ ಕೋಟು
ಕಣ್ಣಿನ ಹೊರಚಲುವಿಕೆಯ ಕತ್ತು ನೋಟು
ಒಳಗಣ್ಣಿಗೆ ಕಾಣಿಸುವ ಕೆಂಪು ಜ್ವಾಲೆ
ಚೀಲಲಿ ತುಂಬಿಕೊಂಡ ಸಾಹಿತ್ಯ ಮಾಲೆ
ರಚಿತ ಕೃತಿಗಳು ಉಳಿಯ ಮೊನೆಯಿಂದ

ಸಮಾಜ ರಚನೆಗೆ ಹಲವು ಹಂಚಿಕೆ
ಓದಿದ್ದೇ ಓದಿದ್ದು ಸಾಹಿತ್ಯ ಸಂಚಿಕೆ
ನಿತ್ಯ ನಿಯಮಗಳ ಸಾವಿರಾರು ಸರಕು
ಸತ್ಯ ಕಂಡದ್ದನ್ನು ಎದೆತುಂಬಿಕೊಂಡು
ಜೀವನದುದ್ದಕ್ಕೂ ತೋರಿದ ಕರುಣೆಯನು

ಕಷ್ಟದಲಿ ಕಲಿಯಾಗಿ ಹೋರಾಟ
ಕಟ್ಟುವ ಸಾಹಿತ್ಯ ಸಿರಿಗಾಗಿ ಓಡಾಟ
ಮೈಮನಗಳ ಎಚ್ಚರಿಕೆಯ ಹೊಯ್ದಾಟ
ಜ್ವಾಲಾಮುಖಿಯಿಂದೆದ್ದ ಸಮಾಜ ಸರಿಕಾಟ
ಬತ್ತಲೆತನದ ನೈಜ ಕಾಣುವ ನೋಟ

ತನ್ನ ತನದರಿವಿನೊಂದಿಗೆ ಎತ್ತಿದವ
ಕೈಯಲಿ ಲೇಖನಿಯ ಖಡ್ಗವ
ಕಬ್ಬಿಣ ಕಲ್ಲುಗಳ ಎದೆ ಬೀರುವ
ತಾಯಿ ಕುಟ್ಟಿದ ಒನಕೆಯ ಪೆಟ್ಟು
ನಾಗರಹಾವು ಚೂರುಚೂರಾದಂತೆ
ಅವರಿವರೆನ್ನದೆ ಮಾನವೀಯ ಮೌಲ್ಯಕೆ
ಹತ್ತಿಯೇ ಹತ್ತಿದ ಎತ್ತರದ ನಿಚ್ಚಣಿಕೆ
ಕಂಡನವ ವಿಶಾಲ ದೃಷಿಯ ಕ್ಷಿತಿಜ
ಕಥೆಮಾಡಿ ಹೇಳಿದ ಸಾವಿರ ಬಲಭುಜ
ಕಟ್ಟೀಮನಿಯಲ್ಲವ ಬಸವರಾಜ ಕತ್ತಿಮೊನೆ

**-ನಿಂಗಣ್ಣ ಸಣ್ಣಕ್ಕಿ**

## ಸಾಹಿತ್ಯ ಸಮ್ಮೇಳನಾಧ್ಯಕ್ಷತೆಯ ಪಟ್ಟ

೧೯೮೦ ರಲ್ಲಿ ಬೆಳಗಾವಿಯಲ್ಲಿ ನಡೆದ ೫೨ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷತೆ ಕಾದಂಬರಿಕಾರರಾದ ಬಸವರಾಜ ಕಟ್ಟೀಮನಿ ಅವರು ಪಡೆದ ಸಾರ್ವಜನಿಕ ಗೌರವವಾಯಿತು. ಆ ಮನ್ನಣೆಯನ್ನು ಅವರು ಸ್ವೀಕರಿಸುತ್ತಾ ತಮ್ಮ ಸಹಜ ವಿನಯವನ್ನು ಹೀಗೆ ತೋರ್ಪಡಿಸಿಕೊಂಡಿದ್ದಾರೆ.

“ಈ ಸಮ್ಮೇಳನಾಧ್ಯಕ್ಷತೆಯ ಗುರುತರವಾದ ಭಾರವು ನನ್ನ ಮೇಲೆ ಬಿದ್ದಿದೆ. ಈ ಹೊಣೆಯನ್ನು ನನಗಿಂತಲೂ ಹೆಚ್ಚು ಸಮರ್ಥರಾದವರು ನಿರ್ವಹಿಸಿದ್ದರೆ ನೆಟ್ಟಗಾಗುತಿತ್ತು. ನಾಡಿನ ಕರೆಗೆ ಓಗೊಡುವುದು ನನ್ನ ಕರ್ತವ್ಯವೆಂದು ಭಾವಿಸಿ, ಕನ್ನಡ ತಾಯಿಯ ಅಡಿಗೆ ನಮಸ್ಕರಿಸಿ ಈ ಅಧ್ಯಕ್ಷ ಸ್ಥಾನವನ್ನು ಸ್ವೀಕರಿಸಿದ್ದೇನೆ”.

ಆ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನದಿಂದ ಬಸವರಾಜ ಕಟ್ಟೀಮನಿಯವರು ಮಾಡಿದ ಭಾಷಣವು ಕನ್ನಡ ಸಾಹಿತ್ಯದ ಸ್ಥಿತಿ-ಗತಿಗಳ ಖಚಿತಾಭಿಪ್ರಾಯಗಳನ್ನೊಳಗೊಂಡಿದೆ. ಅಲ್ಲಿನ ಕೆಲವು ವಾಕ್ಯ ಮಾಣಿಕ್ಯಗಳನ್ನು ಇಲ್ಲಿ ಉಲ್ಲೇಖಿಸಬಹುದು.

- ಸಣ್ಣ ಕಥೆಗಾರರು ಕಥೆಗಳನ್ನು ಬರೆದೂ ಚಿಂತೆಯಿಲ್ಲ ಮೂರನೆಯ ತರಗತಿಗಳ ಈ ಕಾದಂಬರಿಗಳನ್ನು ಬರೆಯುವುದು ಸರಿಯಲ್ಲ.
- ಇಂದು ಹುಟ್ಟಿ ನಾಳೆ ಸಾಯುವ ಸಮಾಜ ವಿಘಾತಕಾರಿ ಕೃತಿಯ ರಚನೆಯನ್ನು ನಿಲ್ಲಿಸಿ.

- ಪ್ರಶಸ್ತಿಗಳು ಕಡಿಮೆಯಾಗಿ ನಿಜವಾದ ವಿಮರ್ಶೆಗಳು ಬೆಳಕಿಗೆ ಬಂದರೆ ನಮ್ಮ ಸಾಹಿತ್ಯದ ನೈಜ ಬೆಲೆ ಗೊತ್ತಾಗುತ್ತದೆ.
- ಕಟ್ಟೀಮನಿಯವರು ತನ್ನ ದಿಟ್ಟತನದ, ಕೆಚ್ಚಿನ ದನಿಯಲ್ಲಿ ಸಭೆಯನ್ನು ಉದ್ದೇಶಿಸಿ ಮಾಡಿದ ಭಾಷಣ ಅಮೂಲ್ಯವಾದುದು.

## ಕೊನೆಯ ದಿನಗಳಲ್ಲಿ

ಬಸವರಾಜ ಕಟ್ಟೀಮನಿಯವರು ಯಾರಹಂಗಿನಲ್ಲಿಯೂ ಬದುಕು ಸಾಗಿಸಲಿಲ್ಲ. ತಮ್ಮದಾದ ವ್ಯಕ್ತಿತ್ವದೊಂದಿಗೆ ಬಾಳಿದವರು, ಬಡತನವೆಂಬ ಸಾಗರದಲ್ಲಿ ಕಷ್ಟ ನಷ್ಟ, ನೋವು ಅವಮಾನಗಳೆಂಬ ತೆರೆಗಳನ್ನೇ ದಿಟ್ಟತನದಿ ದಾಟಿ ಸಾರ್ಥಕ ಜೀವನ ನಡೆಸಿದ ಧೀಮಂತರು. ಪ್ರತಿಕೂಲವಲ್ಲದ ಪರಿಸ್ಥಿತಿಯಲ್ಲಿ ಹೋರಾಟ!! ಹೋರಾಟ !! ಹೋರಾಟ!! ವೆಂಬ ಮಂತ್ರವನ್ನೇ ಜಪಿಸಿದವರು.

ಯಾರಿಗೂ ನನ್ನಿಂದ ಭಾರವಾಗದಿರಲೆಂದು ತಮ್ಮ ಅಂತಿಮ ಸಂಸ್ಕಾರಕ್ಕೆ ಎರಡು ಸಾವಿರ ರೂಪಾಯಿಗಳನ್ನು ತೆಗೆದಿಟ್ಟವರು. ಎಂಥಹ ದೂರದೃಷ್ಟಿ ಅವರದು. ಸ್ವಾಭಿಮಾನಕ್ಕೆ ಈ ಪ್ರಸಂಗ ಜ್ವಲಂತ ಸಾಕ್ಷಿ!

೧೯೮೯ ಅಕ್ಟೋಬರ ೨೩ ರಂದು ಅವರ ಭೌತಿಕ ದೇಹದಿಂದ ಪ್ರಾಣಪಕ್ಷಿ ಹಾರಿ ಹೋಯಿತು. ನಿಧನದಿಂದ ಒಬ್ಬ ಮಹಾನ್ ಛಲವಂತ, ಕ್ರಾಂತಿಕಾರಿ ಬರಹಗಾರರನನ್ನು ಸಾರಸ್ವತ ಕಳೆದುಕೊಂಡಂತಾಯಿತು. ಹುಲಿಯಂತೆ ಬಾಳುತ್ತ ಹುಲಿಯಾಗಿಯೇ ಪ್ರಾಣ ತೊರೆದರು ಕಟ್ಟೀಮನಿಯವರು.

ಕಾದಂಬರಿ, ಕವನ, ನಾಟಕ, ಪ್ರವಾಸಕಥನ, ಜೀವನ ಚರಿತ್ರೆ, ಮಕ್ಕಳ ಸಾಹಿತ್ಯ..... ಮೊದಲಾದ ಕೃತಿಗಳನ್ನು ಕನ್ನಡ ಸಾಹಿತ್ಯಕ್ಕೆ ನೀಡಿ, ಹೋರಾಟ ಮಾಡುತ್ತ ಕೈಯಲ್ಲಿ ಬರೆಯುವ ಶಕ್ತಿ ಇರುವವರೆಗೂ ಬರೆದರು ಬರೆದು ಬದುಕಿದರು. ಕನ್ನಡ ಸಾಹಿತ್ಯ ಪ್ರಪಂಚ ಇವರನ್ನು ಎಂದಿಗೂ ಮರೆಯಲಾಗದು. ಆರ್ಥಿಕ ದಾರಿದ್ರವಿದ್ದರೂ ಹೃದಯ ಶ್ರೀಮಂತಿಕೆಯ ದಾರಿದ್ರವಿರಲಿಲ್ಲ. ತಮ್ಮ ಸುತ್ತಲೂ ಯಾವ ಮಠವನ್ನು ಕಟ್ಟಿಕೊಂಡಿರಲಿಲ್ಲ. ಅಪರೂಪದ ವ್ಯಕ್ತಿಯಾಗಿದ್ದವರು ಕಟ್ಟೀಮನಿಯವರು.

ಸಾಮಾಜಿಕ ಜೀವನದಲ್ಲಿ ಕಕ್ಕುಲತೆ ಗುಣಗಳನ್ನು ಹೊಂದಿದ್ದ ಕಟ್ಟೀಮನಿ ಹೆಸರಿಗೆ ತಕ್ಕಂತೆ ಬಾಳಿ ನಮ್ಮನ್ನು ಅಗಲಿದರು. ಅವರ ಸಾಹಿತ್ಯ ನಮಗೆಲ್ಲ ಸ್ಫೂರ್ತಿದಾಯಕ ಅವರ ಸ್ಮರಣೆ ಸದಾ ಹಸಿರು, ಸದಾ ಉಸಿರು.

" ಕೊಡಲಿ ಕುಡುಗೋಲೆತ್ತಿ
ಕಾಡುಮಿಕಗಳನಟ್ಟಿ
ಮೆಟ್ಟಿ, ಹೂಂ-

ತರಿಸಕುಂ-

ದರ ನಾಡಿನಾಜಟ್ಟಿ!"

**-ಎಂ. ಅಕಬರ ಅಲಿ**

## ಅನುಬಂಧ - ೧

ಅಖಿಲಭಾರತ ೫೨ ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಬೆಳಗಾವಿ

ಗಂಗಾಧರ ಮಡಿವಾಳೇಶ್ವರ ತುರಮರಿ ಮಂಟಪದಲ್ಲಿ ೮-೨-೧೯೮೦ರಂದು

ಸಮ್ಮೇಳನಾಧ್ಯಕ್ಷರಾದ ಶ್ರೀ ಬಸವರಾಜ ಕಟ್ಟೀಮನಿ

ಅವರು ಮಾಡಿದ ಅಧ್ಯಕ್ಷ ಭಾಷಣ

ಜಯ ಭಾರತ ಜನನಿಯ ತನುಜಾತೆ

ಜಯಹೇ ಕರ್ನಾಟಕ ಮಾತೆ

ಜಯ ಸುಂದರ ನದಿವನಗಳ ನಾಡೇ

ಜಯಹೇ ರಸಋಷಿಗಳ ಬೀಡೇ |

ನಲವತ್ತೆಂಟು ವರ್ಷಗಳ ಹಿಂದಿನ ಮಾತು: ಹನ್ನೊಂದು ಹನ್ನೆರಡರ ಬಾಲಕನೊಬ್ಬ ಈ ನಾಡಗೀತೆ ಗುಣು ಗುಣಿಸುತ್ತ ಬೆಳಗಾವಿಯ ಕೋಟೆಯಲ್ಲಿ ಕತ್ತಲಾಗುವವರೆಗೂ ಅಲೆಯುತ್ತಿದ್ದ, ಆತ ಪೋಲೀಸ್ ಸನ್ನಿಧಿಕೇಂದ್ರದಿಂದ ಶೆಟ್ಟರ ಬೀದಿಯ ಕನ್ನಡ ಶಾಲೆಗೆ ಬಂದು ಹೋಗುತ್ತಿದ್ದ.

**ಬೆಳಗಾವಿಯ ಬಾಲಕ**

ಮತ್ತೆ ಕೆಲವು ವರ್ಷಗಳ ತರುವಾಯ

ಶೆಟ್ಟರ ಬೀದಿಯ ಕನ್ನಡ ಶಾಲೆ:

ಪ್ರಸಿದ್ಧ ಭಾಷಾತಜ್ಞ ಶ್ರೀ ಪ್ರ.ಗೋ.ಕುಲಕರಣಿಯವರು

ಆಗ ಅಲ್ಲಿ ಮುಖ್ಯಾಧ್ಯಾಪಕರು

ಏಳನೆಯ ತರಗತಿಗೆ ಪಾಠ ಹೇಳುತ್ತಿದ್ದವರು

ಅವರೇ ಆ ಬಾಲಕ ಅವರ ವಿದ್ಯಾರ್ಥಿ

ಆ ವಯಸ್ಸಿನಲ್ಲಾಗಲೇ ಆತ ಕಥೆಗಳನ್ನು ಕವಿತೆಗಳನ್ನು ಬರೆಯುತ್ತಿದ್ದ ವಿದ್ಯಾರ್ಥಿ' ಎಂಬ ಕೈಬರಹದ ಪತ್ರಿಕೆಯ ಸಂಪಾದಕನೂ ಆಗಿದ್ದ, ಶ್ರೀ ಪ್ರ. ಗೋ. ಕುಲಕರಣಿಯವರೂ ಶ್ರೀ ಕೃಷ್ಣ ಪಾಟೀಲ ಮತ್ತು ಶ್ರೀ ಕೇದನೂರ ಗುರುಗಳೂ ಆ ಹುಡುಗನ ಬರವಣಿಗೆ ಕಂಡು, ಮೆಚ್ಚಿ ಪ್ರೋತ್ಸಾಹಿಸುತ್ತಿದ್ದರು ಮಾರ್ಗದರ್ಶನ ಮಾಡುತ್ತಿದ್ದರು.

ಅನಂತರ, ಗಿಲಗಂಚಿ ಅರಟಾಳ ಹೈಸ್ಕೂಲಿಗೆ ಸೇರಿಕೊಂಡು ಅಲ್ಲೂ ಸಾಹಿತ್ಯದ ಗೀಳು ಅಂಟಿಸಿಕೊಂಡು ಗಣಪತಿ ಬೀದಿಯ ಸಾರ್ವಜನಿಕ ವಾಚನಾಲಯ, ಕರ್ನಾಟಕ ಸಂಘದ ವಾಚನಾಲಯ ಪ್ರೌಢಶಾಲೆಯ ಗ್ರಂಥಾಲಯಗಳಲ್ಲಿದ್ದ ಕನ್ನಡ ಪುಸ್ತಕಗಳನ್ನು ಓದಿ ಮುಗಿಸಿದ, ಅಂದು ಬೆಳಗಾವಿಯಲ್ಲಿ ಅಸ್ತಿತ್ವದಲ್ಲಿದ್ದ "ನಾಡ ನರಿಗಳ ಸಂಘದ" "ಕಿರುನರಿಯಾಗಿ" ಕರ್ನಾಟಕ ಸಂಘದ ವಾಚನಾಲಯದ ಕೆಲಸಗಾರನಾಗಿ ದುಡಿದ, ವಿಠ್ಠಲಕುಲಕರ್ಣಿ. ಆರ್.ಹೆಚ್. ಕುಲಕರ್ಣಿ, ಮಾಧವ ಮಹಿಷಿ, ತುರಮರಿ, ರಾಘವೇಂದ್ರ ಮೊದಲಾದ ಗೆಳೆಯರೊಡನೆ ಸಾಹಿತ್ಯಕ ಚಟುವಟಿಕೆಗಳಲ್ಲಿ ನಿರತನಾದ.

**ಬೆಡಗಿನ ಬೆಳಗಾವಿ**

ಹದಿನೈದು ವರ್ಷ ಅಲ್ಲಿ ಇಲ್ಲಿ ಅಲೆದು ೧೯೫೦ಂಕ್ಕೆ ಕುಂದರ ನಾಡಿನ ಮಲಾಮರಡಿಗೆ ಬಂದ, ವಾರಕೊಮ್ಮೆ ಬೆಳಗಾವಿಗೆ ಪಯಣ, 'ಜನಜೀವಾಳ'ದ ಬ.ಮ. ಏಳುಕೋಟಿಯವರ ಗೆಳೆತನ, ಅಂಗಡಿ ದಂಪತಿ, ಅಣ್ಣ ಗುರೂಜಿ ಚನ್ನಪ್ಪವಾಲಿ ಅಡಿವೆಪ್ಪನಾವಲಗಟ್ಟಿ, ಮೊದಲಾದ ಕಾರ್ಯಕರ್ತರ ಒಡನಾಟ ರಾಜಕೀಯರಂಗದ ನಿಕಟಪರಿಚಯ. ಆ ಅನುಭವ ಉಪಯೋಗಿಸಿಕೊಂಡು ಕಥೆ ಕಾದಂಬರಿಗಳ ರಚನೆ.

ಬೆಳಗಾವಿಯ ಪುಟ್ಟ ಪುಟ್ಟ ಓಣಿಗಳು ಟಿಳಕವಾಡಿಯ ವ್ಯವಸ್ಥಿತ ಬಂಗಲೆಗಳು, ಹಸಿರು ಸೂಸುವ ಮಾವಿನ ಮರಗಳು, ಕೈ ಬೀಸಿ ಕರೆಯುವ ರೇಸ್ ಕೋರ್ಸ್ ರಸ್ತೆ, ಮೋಜಿನ ಕೇಂದ್ರ ಮಿಲಿಟರಿ ಮಹಾದೇವ್, ರಸಿಕತೆಯ ರಾಮದೇವಬೀದಿ, ಭವ್ಯವಾಗಿ ತಲೆಯೆತ್ತಿನಿಂತ ಲಿಂಗರಾಜ ಕಾಲೇಜು, ರಾಣಿಪಾರ್ವತಿ ಕಾಲೇಜು, ಅಶ್ವಾರೋಹಿಣಿ ಚೆನ್ನಮ್ಮ ರಾಣಿ ಪ್ರತಿಮೆ, ಕತ್ತಿ ಹಿಡಿದು ನಿಂತ ರಾಯಣ್ಣನಮೂರ್ತಿ.

ಕನ್ನಡ ತಾಯಿಯ ಸುಂದರ ಮುಖದಂತಿರುವ ಚೆಂದದ ನಗರ ಬೆಳಗಾವಿ. ಅದನ್ನು ಪ್ರೀತಿಸುವ ಈ ಲೇಖಕ ಬೆಳಗಾವಿಯ ಅನ್ನ- ನೀರು ಸೇವಿಸಿ ಬೆಳೆದು ಇಲ್ಲಿಯ ಸೃಷ್ಟಿ ಸೌಂದರ್ಯದಿಂದ ಸ್ಫೂರ್ತಿ ಪಡೆದು ಕಥೆ-ಕಾದಂಬರಿ ರಚಿಸಿದ ಈತನನ್ನು ಇಂದು ಮಮತೆಯಿಂದ ಬರಮಾಡಿಕೊಂಡು ಸಾಹಿತ್ಯಸಮ್ಮೇಳನದ ಅಧ್ಯಕ್ಷ ಪೀಠದಲ್ಲಿ ಕೂಡಿಸಿ ಹರಸುತ್ತಿರುವ ಬೆಳಗಾವಿ.

**ಬೆಳಗಾವಿನಾಡು!**

ಬಾಲಕನಾಗಿದ್ದಾಗ ಈ ಲೇಖಕ ಬರೆದಹಾಡು !

ಬೆಳಗಾವಿನಾಡು, ನಮ್ಮ ಬೆಳಗಾವಿನಾಡು!

ಸುಂದರನಾಡು, ನಮ್ಮ ಕುಂದರನಾಡು!

ಬಳ್ಳಾರಿ ಹಳ್ಳದ ಆರ್ಭಟ ನೋಡು

ಮಲಪ್ರಭ, ಘಟಪ್ರಭ ವಿರಾಟನೋಡು

ಕಬ್ಬಿನಚವರಿಯ ಹಾರಾಟನೋಡು

ಜೋಳದ ಪಯಿರಿನ ತೂರಾಟನೋಡು
ನವಣೆಯ ಸಾವಿಯ ಕುಲುಕಾಟನೋಡು
ಮಾವಿನಹಣ್ಣಿನ ಸಿಂಗಾರನೋಡು
ಬಂಗಾರನಾಡು! ನಮ್ಮ ಬೆಳಗಾವಿನಾಡು!
ಬಂಗಾರ ನಾಡು! ನಮ್ಮ ಬೆಳಗಾವಿನಾಡು !
ಸುತ್ತ ಕಡೆಗೂ ಬೆಟ್ಟದ ನೋಟ
ಹಸುರಿನ ಕುಸುರಿನ ಚೆಲುವಿನ ತೋಟ
ಕೆಚ್ಚಿನ ಮೆಚ್ಚಿನ ಜೋಳದ ರೊಟ್ಟಿ
ಗುರೆಳ್ಳ ಹಿಂಡಿ, ಶೇಂಗಾ ಚಟ್ನಿ, ಮೆಣಸಿನ ಕಾಯಿ
ಹುಳ್ಳನ ನುಚ್ಚು, ಕೆನೆ ಕೆನೆಮೊಸರು, ಬದನೆಕಾಯಿ
ಕಾಳಮ್ಮೆ ಹಯನು, ಕಾಡಿನ ಜೇನು
ಹಾಲಿನ ಹೊಳೆಯು ತುಪದ ಗಿರಿಯು
ಸಮೃದ್ಧ ನಾಡು ! ನಮ್ಮ ಬೆಳಗಾವಿ ನಾಡು !

ಅಂಕಲಗಿ - ಕುಂದರಗಿ - ಹುದಲಿಯ ನಾಡು
ಮಲ್ಲಮ್ಮ ದೇವಿಯ ಬೆಳವಡಿ ನಾಡು
ಚೆನ್ನಮ್ಮ ರಾಣಿಯ ಕಿತ್ತೂರ ನಾಡು
ಅಣ್ಣ ರಾಯಣ್ಣನ ಸಂಗೊಳ್ಳಿ ನಾಡು
ಸ್ವಾತಂತ್ರ್ಯ ಯೋಧರ ತ್ಯಾಗದ ಬೀಡು
ಥಳ ಥಳಿಸುವ ಕುಡುಗೋಲನು ನೋಡು
ಬೆಳಗಾವಿ ನಾಡು ನಮ್ಮ ಬೆಳಗಾವಿ ನಾಡು.

**ಬೆಳಗಾವಿಯ ರಾಜಕೀಯ**

ಬೆಳಗಾವಿ ನಗರದ ಸಂಸ್ಕೃತಿಗೆ ಅದರದೇ ಆದ ಒಂದು ವೈಶಿಷ್ಟ್ಯವಿದೆ. ಕನ್ನಡ-ಮರಾಠಿ-ಉರ್ದು ಹಾಗೂ ಇನ್ನಿತರ ಭಾಷೆಗಳ ಸುಂದರ ಸಂಗಮ ಇಲ್ಲಿದೆ. ಈ ವಿಚಾರದಲ್ಲಿ ಬೆಳಗಾವಿಗೂ ಬೆಂಗಳೂರಿಗೂ ಸಾಮ್ಯವಿದೆ. ಬೆಂಗಳೂರಿನಲ್ಲಿ ಕನ್ನಡದ ಜೊತೆಗೆ ತಮಿಳು - ತೆಲುಗು ಭಾಷೆಗಳೂ ಬಳಕೆಯಲ್ಲಿವೆ. ಆದರೆ ಅದರಿಂದಾಗಿ ಬೆಂಗಳೂರೇನೂ ತಮಿಳರ ಅಥವಾ ತೆಲುಗರ ನಗರವೇನೂ ಎನಿಸಿಕೊಂಡಿಲ್ಲದು ನಮ್ಮ ಕರ್ನಾಟಕದ ರಾಜಧಾನಿಯೇ ಆಗಿದೆ. ಆರ್ಥಿಕ ಕಾರಣಗಳಿಗಾಗಿ ಮಹಾನಗರಗಳಿಗೆ ಸುತ್ತಲಿನ ಸೀಮೆಗಳ ಜನರು ವಲಸೆ ಬರುವುದು ಸಹಜ. ಮರಾಠರ ಮತ್ತು ಪೇಶ್ವೆಗಳ ಆಡಳಿತ ಕಾಲಕ್ಕೆ ಬೆಳಗಾವಿಯಲ್ಲಿ ಮರಾಠಿ ಭಾಷಿಕರನೇಕರು

ನೆಲೆಸಿದರು. ಸನಿಹದಲ್ಲಿಯೇ ಇರುವ ಮರಾಠಿ ಸೀಮೆಯಿಂದ ಸಾವಿರಾರು ಕುಟುಂಬಗಳು ಬಂದು ಸೇರಿದವು. ಇಲ್ಲಿಯೇ ಹೊಲ, ಮನೆ ಕೊಂಡು ಕೊಂಡವು. ನೌಕರಿ ಚಾಕರಿಗಳಲ್ಲಿ ತೊಡಗಿಕೊಂಡವು ಆನಂತರ ಅವರ ಪರಿವಾರ ಬೆಳೆಯಿತು.

ನಾನು ಚಿಕ್ಕವನಿದ್ದಾಗ ಇಲ್ಲಿ ಕನ್ನಡ ಮರಾಠಿ ಜಗಳವಿರಲಿಲ್ಲ. ಸ್ವಾತಂತ್ರ್ಯ ಪೂರ್ವದ ದಿನಗಳಲ್ಲಿ ಕನ್ನಡಿಗರೂ ಮರಾಠಿಗರೂ ಸೋದರರಂತೆ ಜೀವಿಸುತ್ತಿದ್ದರು. ಸ್ವಾತಂತ್ರ್ಯೋತ್ತರ ಕಾಲದಲ್ಲಿ ಎಲ್ಲ ಕ್ಷೇತ್ರಗಳಲ್ಲಿ ಅಧಿಕಾರದ ರಾಜಕೀಯ ಪ್ರವೇಶಿಸದಂತೆ ಭಾಷಾ ಕ್ಷೇತ್ರದಲ್ಲೂ ಪ್ರವೇಶಿಸಿತು. ಬೆಳಗಾವಿ - ಕಾರವಾರ - ನಿಪ್ಪಾಣಿಗಳಿಗಾಗಿ ಮರಾಠಿಗರ ಚಳುವಳಿ ಆರಂಭವಾಯಿತು. ಕೇಂದ್ರ ಸರಕಾರ ನೇಮಿಸಿದ ಎಲ್ಲ ಆಯೋಗಗಳೂ ಮರಾಠಿಗರ ಈ ಬೇಡಿಕೆಯನ್ನು ತಿರಸ್ಕರಿಸಿದವು. ಆಗ್ರಹದಿಂದಲೇ ಅದು ನೇಮಕವಾಯಿತು. ನ್ಯಾಯಮೂರ್ತಿ ಮಹಾಜನರು ಈ ಸೀಮೆಯಲ್ಲೆಲ್ಲ ಸಂಚರಿಸಿ ಈ ಸಮಸ್ಯೆಯ ಎಲ್ಲ ಮುಖಗಳನ್ನೂ ಪರಿಶೀಲಿಸಿ ಬೆಳಗಾವಿ ಕರ್ನಾಟಕದ್ದು ಎಂದು ತೀರ್ಪು ಕೊಟ್ಟರು. ತಾವೇ ನೇಮಿಸಿಕೊಂಡ ಈ ಮಹಾಜನ ಆಯೋಗದ ತೀರ್ಪಿಗೂ ಮರಾಠಿಗರು ಬದ್ಧರಾಗಲಿಲ್ಲ. ಈಗಲೂ ಸಹ ಬೆಳಗಾವಿ ಕಾರವಾರಗಳಿಗಾಗಿ ಅವರ ಆಂದೋಲನ ನಡೆದೇ ಇದೆ. ಕೇವಲ ರಾಜಕೀಯ ಕಾರಣಗಳಿಗಾಗಿ ನಡೆದಿರುವ ಆಂದೋಲನವಿದು.

### ಕನ್ನಡಿಗರ ಬೆಳಗಾವಿ

ಇತಿಹಾಸ, ಪರಂಪರೆ, ಸತ್ಯ, ನ್ಯಾಯಗಳ ದೃಷ್ಟಿಯಿಂದ ಬೆಳಗಾವಿ ಎಂದೆಂದೂ - ಹಿಂದು - ಇಂದು - ಮುಂದೆಯೂ ಸಹ ಕನ್ನಡಿಗರ ನಗರ ಸೂರ್ಯ ಚಂದ್ರರಿರುವವರಿಗೆ ಮಲಪ್ರಭಾ ಘಟಪ್ರಭಾ ಇರುವವರೆಗೆ, ಕರ್ನಾಟಕವಿರುವವರೆಗೆ ಬೆಳಗಾವಿಯೂ ಕನ್ನಡಿಗರ ನಗರವಾಗಿಯೇ ಉಳಿಯುವುದು. ನಮ್ಮದಲ್ಲದುದನ್ನು ನಾವು ಬಯಸುವವರಲ್ಲ. ನಮ್ಮದಾದುದುನ್ನು ಬಿಟ್ಟುಕೊಡುವವರಲ್ಲ ಬೆಳಗಾವಿಯು ನಮ್ಮ ಕುಡುಗೋಲಿದ್ದಂತೆ, ಕತ್ತಿಗಿಂತಲೂ ಹರಿತವಾದ ಕುಡುಗೋಲು ಇದನ್ನು ನುಂಗಬೇಕೆನ್ನುವವರೇ ಜೋಕೆ!

### ಕನ್ನಡಿಗರಲ್ಲಿ ಒಗ್ಗಟ್ಟು

ಕರ್ನಾಟಕದ ವಿಧಾನ ಮಂಡಲವೂ ಮಂತ್ರಿಮಂಡಲವೂ ಈ ಬಗೆಗೆ ಧೀರ ನಿಲುಮೆ ತಳೆದಿದೆ. ಮಹಾಜನ ಆಯೋಗದ ವರದಿಗೇ ಅಂಟಿಕೊಂಡಿವೆ. ಬೆಳಗಾವಿ ಕರ್ನಾಟಕದ್ದು, ಅದು ಎಂದಿಗೂ ಬೇರೆ ರಾಜ್ಯಕ್ಕೆ ಹೋಗದು" ಎಂದು ನಮ್ಮ ರಾಜ್ಯದ ಮುಖ್ಯಮಂತ್ರಿಗಳೂ ಹಲವಾರು ಬಾರಿ ಘೋಷಿಸಿದ್ದಾರೆ. ಆದುದರಿಂದ ಬೆಳಗಾವಿಯ ಬಗೆಗೆ ಕನ್ನಡಿಗರಿಗೆ ಚಿಂತೆ ಅನವಶ್ಯಕ.

ಆದರೆ ಜಾತಿ ಮತ ವೈಯಕ್ತಿಕ ಆಸೆ ಆಕಾಂಕ್ಷೆ ಇತ್ಯಾದಿ ಸಣ್ಣ ವಿಚಾರಗಳನ್ನು ಮರೆತು, ಬೆಳಗಾವಿ ಜಿಲ್ಲೆಯ ಕನ್ನಡಿಗರೆಲ್ಲ ಒಂದಾಗಿ ಸಂಘಟಿತರಾಗಬೇಕಾದದ್ದು ಇಂದಿನ ಸಂದರ್ಭದಲ್ಲಿ ಅಗತ್ಯ. ಮರಾಠಿಗರ ಒಗ್ಗಟ್ಟಿದೆ, ಸಮಿತಿಯ ನೇತೃತ್ವದಲ್ಲಿ ಅವರೆಲ್ಲರೂ ಒಂದುಗೂಡಿದ್ದಾರೆ. "ಝುಲಾಚ ಪಾಹಿಜೆ" ಯ ಪ್ರಶ್ನೆ ಬಂದಾಗ ಅವರು ಜಾತಿ

ಮತಗಳನ್ನೆಲ್ಲ ಕಡೆಗಣಿಸಿ ಒಂದಾಗುತ್ತಾರೆ. ಕನ್ನಡಿಗರು ಮಾತ್ರ ಬ್ರಾಹ್ಮಣ - ಲಿಂಗಾಯಿತ - ಬಣಜಿಗ- ಜಂಗಮ - ಕುರುಬ - ರೆಡ್ಡಿ ಇನ್ನಿತರ ಜಾತಿಗಳ ಸಂಕುಚಿತ ಹಿತಾಸಕ್ತಿಗಳನ್ನೇ ಗಮನಿಸುತ್ತಾರೆ. ಕನ್ನಡಕ್ಕೆ ಸಂಬಂಧಪಟ್ಟ ಸಮಸ್ಯೆ ಬಂದಾಗಲೂ ಸಹ ಜಾತೀಯ ಭಾವನೆ ಒಳಗೊಳಗೇ ಕೆಲಸ ಮಾಡುತ್ತದೆ. ಬೆಳಗಾವಿಯಿಂದ ಚುನಾವಣೆ ನಿಂತ ಕನ್ನಡ ಅಭ್ಯರ್ಥಿಗೆ ಕನ್ನಡಿಗರಲ್ಲಿಯೇ ಕೆಲವು ಜಾತಿಗಳವರ ಮತ ಸಿಕ್ಕುವುದಿಲ್ಲ ಆತ ಸೋತು ಹೋಗುತ್ತಾನೆ. ನಿರಾಶನಾಗುತ್ತಾನೆ ಹಣದಾಸೆಯಿಂದಾಗಿ, ಜಾತಿಯ ಮೋಹದಿಂದಾಗಿ ಮರಾಠಿಗರ ಪಕ್ಷ ವಹಿಸುವವರೂ ಇಲ್ಲದಿಲ್ಲ. ಇಂಥವರಿಗಾಗಿ ಇಲ್ಲಿ ಕನ್ನಡಿಗರ ಶಕ್ತಿ ಕ್ಷೀಣವಾಗಿದೆ, ಮರಾಠಿಗರಲ್ಲಿ ಮಾತ್ರ ಇಂಥ ದ್ರೋಹಿಗಳು ವಿರಳ.

ನಗರಕ್ಕಾಗಿ ನಡೆದಿರುವ ಈ ತಿಕ್ಕಾಟವೇನೇ ಇದ್ದರೂ ಇಲ್ಲಿನ ಕನ್ನಡಿಗರೂ ಮರಾಠಿಗರೂ ಸೌಹಾರ್ದದಿಂದಲೇ ಬಾಳುತ್ತಿದ್ದಾರೆ. ಕನ್ನಡಿಗರಿಗೆ ಮರಾಠಿಯೂ ಮರಾಠಿಗರಿಗೆ ಕನ್ನಡವೂ ಅರ್ಥವಾಗುತ್ತದೆ. ಮರಾಠಿಗರು ಕನ್ನಡ ಮಾತನಾಡುವುದು ಕಡಿಮೆ. ಕನ್ನಡಿಗರಿಗೆ ಮಾತ್ರ ಮರಾಠಿ ಮಾತನಾಡಲು ಬಲು ಹುರುಪು! ಶ್ರೀಮತಿ ಇಂದಿರಾ ಸಂತ, ಎಸ್.ಡಿ. ಇಂಚಲರಂಥ ಕವಿಗಳು, ದಿ, ಬಾಬುರಾವ್ ಠಾಕೂರ್ ಅಣ್ಣು ಗುರೂಜಿ ಅನಂತರಾವ್ ಚಿಕ್ಕೋಡಿ, ಬ. ಮ. ಏಕೋಟಿ, ಪರುಳೇಕರರಂತ ಹೋರಾಟಗಾರರು ಪತ್ರಕರ್ತರು, ಈ ನಗರದ ಸಾಂಸ್ಕೃತಿಕ ಜೀವನವನ್ನು ಶ್ರೀಮಂತಗೊಳಿಸಿದ್ದಾರೆ. “ಸ್ವಾಮಿ”ಯಂಥ ಶ್ರೇಷ್ಠ ಕಾದಂಬರಿ ಬರೆದ ಮರಾಠಿಯ ಖ್ಯಾತ ಕಾದಂಬರಿಕಾರ ಶ್ರೀ ರಣಜಿತ ದೇಸಾಯಿಯವರೂ ಬೆಳಗಾವಿಯ ಸಮೀಪದಲ್ಲಿಯೇ ಇರುವವರೆಂದು ಕೇಳಿದ್ದೇನೆ.

ಸಾವಿರಾರು ವರ್ಷಗಳ ಹಿಂದೆ ಕರ್ನಾಟಕ ಮಹಾರಾಷ್ಟಗಳೆರಡೂ ಒಂದೇ ರಾಷ್ಟ್ರವಾಗಿದ್ದುವೆಂಬ ಸತ್ಯಾಂಶವನ್ನು ಇತಿಹಾಸ ಹೇಳುತ್ತದೆ. ಅನಂತರ ಅವೆರಡೂ ಬೇರೆ ಬೇರೆಯಾಗಿ ವಿಶಿಷ್ಟ ವ್ಯಕ್ತಿತ್ವ ಪಡೆದುವು ಆದರೆ ನೆರೆಹೊರೆಯ ಸೋದರ ರಾಜ್ಯಗಳಾದುದರಿಂದ ಪರಸ್ಪರ ಪ್ರೀತಿಯಿಂದಲೂ ಸೌಹಾರ್ದದಿಂದಲೂ ವರ್ತಿಸುವುದು ಅವಶ್ಯ.

ನಾನು ಒಂದೆರಡು ವರ್ಷ ಪುಣೆಯಲ್ಲಿ ಇದ್ದು ಆಚಾರ್ಯ ಅತ್ರೆಯವರ ಪ್ರೌಢಶಾಲೆಯಲ್ಲಿ ಓದಿದವನು. ಅಲ್ಲಿಯೇ ಮರಾಠಿ ಕಲಿತುಕೊಂಡು ಖಾಂಡೇಕರ - ಫಡಕೆ - ಮಾಡಖೋಲಕರರ ಕೃತಿಗಳನ್ನೋದಿದವನು ಖಾಂಡೇಕರರಂತೆಯೇ ನನ್ನದೂ ಸಮಾಜವಾದೀ ವಾಸ್ತವತೆಯ ನಿಲುಮೆ ಕಲೆ ಕಲೆಗಾಗಿ, ಎಂಬುದು ಸಲ್ಲ. ಎಲ್ಲ ಕಲೆಗಳೂ ಇರುವುದು ಜೀವನಕ್ಕಾಗಿಯೇ ಎಂದು ದೃಢವಾಗಿ ನಂಬಿದವರು ಖಾಂಡೇಕರ್, ಅವರ “ಉಲ್ಕಾ” “ಕಾಂಚನಮೃಗ” “ದೋನ ಧ್ರುವಗಳನ್ನೋದಿ ನಾನು ಪ್ರಭಾವಿತನಾದದ್ದು ನಿಜ. ಕನ್ನಡದಲ್ಲಿ ಕುವೆಂಪು ಮತ್ತು ಕಾರಂತರಿಗಿರುವ ಸ್ಥಾನ ಮರಾಠಿಯಲ್ಲಿ ಖಾಂಡೇಕರರಿಗಿದೆ.

ಇತ್ತೀಚೆಗೆ ಕರ್ನಾಟಕದಲ್ಲಿ ಸಂಚರಿಸಿ ಹೋದ ಶ್ರೀಮತಿ ದುರ್ಗಾ ಭಾಗವತರು ಕನ್ನಡ ಮರಾಠಿ ಬಾಂಧವ್ಯದ ಬಗೆಗೆ ಅನೇಕ ಒಳ್ಳೆಯ ಮಾತು ಆಡಿದ್ದಾರೆ. ಭಾರತೀಯ ಸಂಸ್ಕೃತಿಯ ಮೂಲದಲ್ಲಿ ಒಂದೇ, ಭಾಷೆಗಳು ಬೇರೆ ಬೇರೆಯಾಗಿದ್ದರೂ ಅವುಗಳ ಮೂಲ ಸ್ತೋತ್ರದಲ್ಲಿ ಒಂದೇ ಭಾಷೆಯ ಹೆಸರಿನಲ್ಲಿ ನಾವು

ಬಡಿದಾಡಬಾರದು. ಪರಸ್ಪರರ ಭಾಷೆಗಳನ್ನು ಕಲಿತು ಪರಸ್ಪರರನ್ನು ಗೌರವಿಸಬೇಕು. ಶ್ರೀಮತಿ ದುರ್ಗಾಭಾಗವತರ ಈ ಸ್ತುತ್ಯ ನಿಲುಮೆಗಾಗಿ ನಾನು ಅವರನ್ನು ವಂದಿಸುತ್ತೇನೆ.

ಸಾಹಿತ್ಯಕ ಸಾಂಸ್ಕೃತಿಕ ಮಟ್ಟದಲ್ಲಿ ಕನ್ನಡ - ಮರಾಠಿ ಬಾಂಧವ್ಯ ಇದ್ದೇ ಇದೆ. ಪುಣೆಯ "ಅಂತರ ಭಾರತಿ" ಯವರೂ ಹಲವಾರು ವರ್ಷಗಳಿಂದ ಇವೇ ಕಾರ್ಯದಲ್ಲಿ ತೊಡಗಿದ್ದಾರೆ.

ಕಿತ್ತೂರ ಚೆನ್ನಮ್ಮ, ಬೆಳವಡಿ ಮಲ್ಲಮ್ಮ, ಸಂಗೊಳ್ಳಿ ರಾಯಣ್ಣ, ಟಿಪ್ಪೂ ಸುಲ್ತಾನರಿಂದ ನಾವುಸ್ಫೂರ್ತಿ ಪಡೆದಂತೆಯೇ ಶಿವಾಜಿ ಮಹಾರಾಜ, ತಾನಾಜಿ ಮಾಲಸುರೆ, ಬಾಪೂಗೋಖಲೆ, ತಾರಾರಾಣಿಯವರಿಂದಲೂ ಪ್ರಭಾವಿತರಾಗಿದ್ದೇವೆ. ಪ್ರಬಲರಾದ ಮೊಗಲರನ್ನು ಎದುರಿಸಿ ನಿಂತು, ರಾಜಾರಾಮ ಮಹಾರಾಜ ಮತ್ತು ತಾರಾರಾಣಿಯವರಿಗೆ ನಮ್ಮ ಕೆಳದಿಯ ವೀರ ರಾಣಿ ಚೆನ್ನಮ್ಮ.

**ಕರ್ನಾಟಕದಲ್ಲಿ ಮರಾಠಿಗರು**

ಆದರೆ, ಅದೇ ತಾರಾ ರಾಣಿಯ ರಾಜಧಾನಿ ಕೊಲ್ಹಾಪುರದಲ್ಲಿ ಕೆಲವರ್ಷಗಳ ಹಿಂದೆ ಕನ್ನಡಿಗರ ವಿರುದ್ಧ ದೊಂಬಿಯಾದ್ದು ದುಡಿದುತಿನ್ನುವ ಕನ್ನಡ ಶ್ರಮಜೀವಿಗಳನ್ನು ಬಡಿದು ಓಡಿಸಲಾದದ್ದೂ ದುಃಖದ ವಿಚಾರವಲ್ಲವೇ? ಕರ್ನಾಟಕದ ನಗರಗಳಲ್ಲಿ ಲಕ್ಷಾಂತರ ಮರಾಠಿಗರು ನೆಲೆಸಿದ್ದಾರೆ. 'ಕಿರ್ಲೋಸ್ಕರ್' ದಂಥ ದೊಡ್ಡ ಸಂಸ್ಥೆ ಬೆಂಗಳೂರು, ಹರಿಹರ, ಹುಬ್ಬಳ್ಳಿಗಳಲ್ಲಿ ಕಾರಖಾನೆಗಳನ್ನು ಸ್ಥಾಪಿಸಿದೆ, ಸಾವಿರಾರು ಮರಾಠಿಗರು, ಹುಬ್ಬಳ್ಳಿ-ಗದಗ-ಹರಿಹರ-ದಾವಣಗೆರೆ-ರಾಣಿಬೆನ್ನೂರು-ಹಾವೇರಿ-ಬೆಂಗಳೂರುಗಳಲ್ಲೂ ಮರಾಠಿಗರು ವ್ಯಾಪಾರವ್ಯವಹಾರ-ನೌಕರಿ ಮಾಡಿಕೊಂಡು ಹಾಯಾಗಿದ್ದಾರೆ. ಅವರು ಕನ್ನಡ ಕಲಿತು ಕನ್ನಡಿಗರೊಡನೆ ಬೆರೆತಿದ್ದಾರೆ. ಅವರು ಮರಾಠಿಗರೆಂಬ ಕಾರಣಕ್ಕಾಗಿ ಕರ್ನಾಟಕದಲ್ಲಿ ಅವರಿಗೆ ಯಾವ ತೊಂದರೆಯೂ ಇಲ್ಲ. ಕೊಲ್ಹಾಪುರ ಬೆಳಗಾವಿಗಳಲ್ಲಿ ಕನ್ನಡಿಗರ ಮೇಲೆ ದಾಳಿ ನಡೆದಾಗ ಮಾತ್ರ ಧಾರವಾಡದ ಕೆಲವು ಕಿಡಿಗೇಡಿಗಳು ಅಲ್ಲಿಯ ಮರಾಠಿ ಮಂಡಲಿಯ ಕಟ್ಟಡಕ್ಕೆ ಬೆಂಕಿಹಚ್ಚಿದ್ದರು. ಇಂಥ ಹಿಂಸಾ ಕೃತ್ಯಗಳನ್ನು ಕನ್ನಡಿಗರು ಸಹಿಸುವುದಿಲ್ಲ. ಈಚೆಗೆ ಈ ಮರಾಠಿ ಮಂಡಲಿಯ ನೂತನ ಕಟ್ಟಡ ಎದ್ದು ನಿಂತಿದೆ. ನಮ್ಮ ಅಂದಿನ ಮುಖ್ಯ ಮಂತ್ರಿಗಳೇ ಅದರ ಅಡಿಗಲ್ಲು ಇರಿಸಿದರಲ್ಲದೆ, ಸರಕಾರದಿಂದ ಸಾಕಷ್ಟು ಹಣವನ್ನು ಸಲ್ಲಿಸಿದ್ದಾರೆ. ಕರ್ನಾಟಕದಲ್ಲಿ ಮರಾಠಿಯ ವ್ಯಾಸಂಗಕ್ಕೆ ಯಾವ ವಿಧವಾದ ತೊಂದರೆಯೂ ಇಲ್ಲ. ಕೆಲವು ಜನ ಮರಾಠಿ ಪತ್ರಕರ್ತರಿಗೂ ಸಹ ನಮ್ಮ ಸರಕಾರದವರು ಮಾಸಿಕ ಗೌರವಧನ ಸಲ್ಲಿಸುತ್ತಿದ್ದಾರೆ. !

ಪುಣೆ - ಮುಂಬಯಿಗಳಲ್ಲಿ ಕರ್ನಾಟಕ ಸಂಘಗಳಿವೆ ಮುಂಬಯಿಯಲ್ಲಿ ಲಕ್ಷಾಂತರ ಕನ್ನಡಿಗರಿದ್ದಾರೆ. ಆದರೆ ಅವರು ಮರಾಠಿ ಕಲಿತು ಅಲ್ಲಿಯ ಜನರೊಡನೆ ಸಮರಸರಾಗಿರುತ್ತಾರೆ. ನಾವು ಯಾವುದೇ ರಾಜ್ಯದಲ್ಲಿದ್ದರೂ ಅಲ್ಲಿಯ ಪ್ರಾದೇಶಿಕ ಭಾಷೆಯನ್ನು ಕಲಿಯಲೇಬೇಕಾಗುತ್ತದೆ. ಮದ್ರಾಸಿನಲ್ಲಿ ನೆಲೆಸಿದ ಪರ ರಾಜ್ಯಗಳ ಜನರು ತಮಿಳು ಕಲಿಯದಿದ್ದರೆ ಫಜೀತಿ ಪಟ್ಟುಕೊಂಡು ಹಿಂತಿರುಗಿ ಬರಬೇಕಾಗುತ್ತದೆ. ಆದರೆ ಅಂಥ ಉಗ್ರಭಾಷಾಭಿಮಾನ

ಕರ್ನಾಟಕದಲ್ಲಿಲ್ಲ. ಬೆಳಗಾವಿಯಲ್ಲಿರುವ ಮರಾಠಿ ಬಾಂಧವರೆಲ್ಲರೂ ಕನ್ನಡ ಕಲಿತುಕೊಂಡು ಕನ್ನಡಿಗರೊಡನೆ ಪ್ರೀತಿಯಿಂದ ವರ್ತಿಸುವರೆಂದು ಆಶಿಸುತ್ತೇನೆ.

**ಕಾಸರಗೋಡು- ಕನ್ನಡ ನಾಡು**

ಕರ್ನಾಟಕಕ್ಕೆ ಸೇರಿಕೊಳ್ಳಬೇಕಾದ ಕಾಸರಗೋಡು ಕಳೆದ ೨೩ ವರ್ಷಗಳಿಂದ ಕೇರಳದಲ್ಲಿ ಉಳಿದುಕೊಂಡಿರುವುದು ದುಃಖದ ವಿಚಾರ. ನಮ್ಮ ಹಿರಿಯ ಕವಿ ಗೋವಿಂದ ಪೈಗಳೂ ಶಾಸಕರೂ, ಹೋರಾಟಗಾರರೂ ಆಗಿದ್ದ ಮಹಾಬಲ ಭಂಡಾರಿಯವರೂ ಇದಕ್ಕಾಗಿ ದುಃಖಿಸುತ್ತಲೇ ತೀರಿಕೊಂಡರು. ಕ್ರಾಂತಿಕಾರ ಕಯ್ಯಾರ ಕಿಯ್ಯಣ್ಣರೈಯವರು ಅವರ ಸಂಗಡಿಗರೂ ಕಾಸರಗೋಡನ್ನು ಕರ್ನಾಟಕಕ್ಕೆ ಸೇರಿಸಲು ಹಟ ಹಿಡಿದು ದುಡಿಯುತ್ತಿದ್ದಾರೆ. ನಮ್ಮ ಸರಕಾರವೇನೋ ಅದಕ್ಕೆ ತಯಾರಾಗಿಯೇ ಇದೆ. ಕೇರಳ ಸರಕಾರ ಒಪ್ಪಿಕೊಳ್ಳಬೇಕು. ಕೇಂದ್ರ ಸರಕಾರ ಮನಸ್ಸು ಮಾಡಿದರೆ ಈ ಸಮಸ್ಯೆ ಸುಲಭವಾಗಿ ಪರಿಹಾರವಾಗುವುದು. ಕರ್ನಾಟಕದ ಸಂಸತ್ ಸದಸ್ಯರು ಕಾಸರಗೋಡಿನ ಬಗೆಗೆ ಕೇಂದ್ರ ಸರಕಾರದ ಮೇಲೆ ಒತ್ತಡ ತರಬೇಕೆಂದು ಅವರನ್ನು ಕೇಳಿಕೊಳ್ಳುತ್ತೇನೆ.

“ಸೊಲ್ಲಾಪುರ, ಅಕ್ಕಲಕೋಟೆ, ಜತ್ತ, ತಾಳವಾಡಿ, ಮೊದಲಾದ ನಮ್ಮ ಪ್ರದೇಶಗಳನ್ನು ಪಡೆಯಲೂ ನಮ್ಮ ಸಂಸತ್ ಸದಸ್ಯರು ಪ್ರಯತ್ನಿಸಬೇಕು. ಮಹಾಜನ ವರದಿ ಕೂಡಲೇ ಜಾರಿಗೆ ಬರಬೇಕೆಂದು ನಾವೆಲ್ಲರೂ ಆಗ್ರಹಪಡಿಸಬೇಕು.” ಮಹಾಜನ ವರದಿ ಮರಾಠಿಗರಿಗೆ ಬೇಡವಾದರೆ ನಮಗೂ ಬೇಡ” ಎಂದು ಯಾರೂ ಹೇಳಬಾರದು. ಆ ವರದಿ ಜಾರಿಗೆಬಂದರೆ ನಮ್ಮ ಕಾಸರಗೋಡು ನಮಗೆ ಬರುತ್ತದೆ. ರಾಜ್ಯ ಭಾಷೆ ಕನ್ನಡ - ೧೯೩೯ರ ನವೆಂಬರ್ ೧ ರೊಳಗಾಗಿ ಕನ್ನಡವು ಈ ರಾಜ್ಯದ ಆಡಳಿತ ಭಾಷೆಯಾಗಲೇಬೇಕೆಂದು ಧರ್ಮಸ್ಥಳದಲ್ಲಿ ಪರಿಷತ್ತಿನ ಅಧ್ಯಕ್ಷ ಶ್ರೀ ಹಂಪ ನಾಗರಾಜಯ್ಯ ನವರು ಘೋಷಿಸಿದ್ದರು. ಸಮಸ್ತ ಕನ್ನಡಿಗರ ಈ ಕೋರಿಕೆಗೆ ಮನ್ನಣೆಯಿತ್ತು ನಮ್ಮ ಸರಕಾರದವರು ಕಳೆದ ನವೆಂಬರ್ ೧ ರಿಂದಲೇ ಕನ್ನಡವನ್ನು ರಾಜ್ಯಭಾಷೆಯ ಪೀಠಕ್ಕೇರಿಸಿದ್ದಾರೆ. ಕನ್ನಡಿಗರ ಅನೇಕ ವರ್ಷಗಳ ಈ ಕೋರಿಕೆಯನ್ನು ಈಡೇರಿಸಿಕೊಟ್ಟುದುದಕ್ಕಾಗಿ ನಮ್ಮ ಸರಕಾರಕ್ಕೆ ಹೃತ್ಪೂರ್ವಕ ವಂದನೆಗಳು.

ನಮ್ಮ ಮಂತ್ರಿಮಂಡಲದ ಸಭೆಗಳೂ ಸಹ ಕನ್ನಡದಲ್ಲಿಯೇ ಕಾರ್ಯಕಲಾಪ ನಡೆಸುತ್ತಿವೆ. ಸರಕಾರದ ಮುಖ್ಯ ಕಾರ್ಯದರ್ಶಿಗಳಾಗಿಯಾಗಿ ಎಲ್ಲ ಅಧಿಕಾರಿಗಳೂ ಕನ್ನಡದಲ್ಲಿಯೇ ವ್ಯವಹರಿಸುತ್ತಿದ್ದಾರೆ.

ವ್ಯಾವಹಾರಿಕವಾಗಿ ಕನ್ನಡವು ಆಡಳಿತ ಭಾಷೆಯಾಗುವಲ್ಲಿ ಕನ್ನಡ ಬೆರಳಚ್ಚುಯಂತ್ರಗಳ ಕೊರತೆ ಮುಖ್ಯ ಕಾರಣ ಇನ್ನು ಮುಂದೆ ಸರಕಾರೀ ಕಚೇರಿಗಳಿಗೆ ಇಂಗ್ಲಿಷ್ ಬೆರಳಚ್ಚು ಯಂತ್ರಗಳ ಬದಲು ಕನ್ನಡ ಯಂತ್ರಗಳನ್ನೇ ಪೂರೈಸಲು ಸರಕಾರ ನಿರ್ಧರಿಸಿದೆ ಇಂಗ್ಲಿಷ್ ಬೆರಳಚ್ಚುಗಳು ಕನ್ನಡ ಬೆರಳಚ್ಚು ಕಲಿಯುವುದು ತೀರಾ ಸುಲಭ ಅಲ್ಲದೆ ಸಾವಿರಾರುಮಂದಿ ಕನ್ನಡ ಬೆರಳಚ್ಚುಗರು ಕೆಲಸವಿಲ್ಲದೆ ನಿರುದ್ಯೋಗಿಗಳಾಗಿ ಅಲೆಯುತ್ತಿದ್ದಾರೆ.

ಕಚೇರಿಗಳಿಗೆ ಕನ್ನಡ ಬೆರಳಚ್ಚು ಯಂತ್ರಗಳನ್ನೊದಗಿಸಿ ಕನ್ನಡ ಬೆರಳಚ್ಚು ಕಲಿತ ಅರ್ಹರನ್ನು ಕೆಲಸಕ್ಕೆ ಸೇರಿಸಿಕೊಂಡರೆ ಈ ಸಮಸ್ಯೆಗೆ ಪರಿಹಾರ ಲಭಿಸುತ್ತದೆ.

ಆದರೆ ಕನ್ನಡ ಬೆರಳಚ್ಚು ಕಲಿಯಲು ಸರಕಾರಿ ನೌಕರ ಬೆರಳಚ್ಚು ಕಲಿಯಲು ಸರಕಾರಿ ನೌಕರರಿಗೆ ತರಬೇತಿ ನೀಡುವುದಕ್ಕಾಗಿ ೫,೨೦೦ ರೂ.ಗಳನ್ನು ಕನ್ನಡ ಬೆರಳಚ್ಚು ಮತ್ತು ಶೀಘ್ರಲಿಪಿ ಪರೀಕ್ಷೆಗಳಿಗೆ ಕಟ್ಟುವವರಿಗೆ ೮೦,೦೦೦ ರೂ.ಗಳನ್ನು ಖರ್ಚುಮಾಡುವುದಕ್ಕಾಗಿ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಘೋಷಿಸಿದೆ.

ಈ ಖರ್ಚು ಅನವಶ್ಯಕತೆವೆಂದೇ ನನ್ನ ಸ್ಪಷ್ಟ ಅಭಿಪ್ರಾಯ ನೌಕರಿ ಬೇಕಿದ್ದವರು ಕನ್ನಡ ಶೀಘ್ರಲಿಪಿಯನ್ನು ಬೆರಳಚ್ಚನ್ನು ಕಲಿತೇ ಕಲಿಯುತ್ತಾರೆ. ಅವರಿಗೆ ಈ ರೀತಿಯಾಗಿ ಹಣ ಸುರಿಯಬೇಕಾಗಿಲ್ಲ. ಪಿಯುಸಿ ತರಗತಿಗಳಲ್ಲಿಯೇ ಈ ಶಿಕ್ಷಣ ಕೊಡಬಹುದಾಗಿದೆ. ಈ ಪರೀಕ್ಷೆ ಮುಗಿಸಿ ಹೊರಬಂದವರು ನೌಕರಿ ಪಡೆಯಬಹುದು.

## ಕನ್ನಡ ಉದ್ಧಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇನ್ನು ಹಲವು ವಿಭಾಗಗಳಲ್ಲಿ ಹಣ ಪೋಲು ಮಾಡುತ್ತಿದೆ. ತಮ್ಮ ನಿತ್ಯದ ವ್ಯವಹಾರದಲ್ಲಿ ಕನ್ನಡ ಬಳಸುವ ಅಧಿಕಾರಿಗಳಿಗೂ ನ್ಯಾಯಾಧೀಶರಿಗೂ ವಕೀಲರಿಗೂ ಪ್ರೋತ್ಸಾಹ ನೀಡಲು ೬೧೦೦೦ ರೂಪಾಯಿ ಬಹುಮಾನಗಳನ್ನು ಹಂಚುತ್ತಿದೆ.

ಕನ್ನಡ ರಾಜ್ಯದಲ್ಲಿ ಕನ್ನಡದಲ್ಲಿಯೇ ವ್ಯವಹರಿಸಬೇಕಾದುದು ಈ ಅಧಿಕಾರಿಗಳ ಆದ್ಯ ಕರ್ತವ್ಯವಲ್ಲವೇ? ಅದಕ್ಕಾಗಿ ಅವರು ಸಂಬಳವನ್ನು ಪಡೆಯುತ್ತಿರುವಾಗ ಮತ್ತೆ ಈ 'ಪ್ರೋತ್ಸಾಹಕರ ಬಹುಮಾನ'ಗಳ ಅಗತ್ಯವಾದರೂ ಏನಿದೆ? ಕನ್ನಡದ ಅಭಿವೃದ್ಧಿಗಾಗಿ ಸರಕಾರ ಮೀಸಲಾಗಿಡುವ ಹಣವನ್ನು ಈ ರೀತಿಯಾಗಿ ಅಧಿಕಾರಿಗಳೇ ನುಂಗುತ್ತಿರುವುದನ್ನು ನಮ್ಮ ಮುಖ್ಯ ಮಂತ್ರಿಗಳು ದಯವಿಟ್ಟು ಗಮನಿಸಬೇಕು. ಈ ಇಲಾಖೆಯ ಹುಚ್ಚುಚ್ಚಾರಕ್ಕೆ ಬರೆ ಹಾಕಬೇಕು.

ರಾಜ್ಯದಲ್ಲಿ ಸಂಸ್ಕೃತಿ ಇಲಾಖೆ ಪ್ರಾರಂಭಿಸಿದ ಕೀರ್ತಿ ಕನ್ನಡದ ಕಟ್ಟಾಭಿಮಾನಿ ಶ್ರೀ ಕೆಂಗಲ್ ಹನುಮಂತಯ್ಯನವರಿಗೆ ಸಲ್ಲುತ್ತದೆ. ಅವರ ತರುವಾಯ ಬಂದ ಮುಖ್ಯಮಂತ್ರಿಗಳೂ ಸಹ ಈ ಇಲಾಖೆಯನ್ನು ಬಲಪಡಿಸುತ್ತಲೆ ಬಂದಿದ್ದಾರೆ. ಕನ್ನಡ ಅಭಿವೃದ್ಧಿ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೆಲ್ಲವನ್ನೂ ಒಂದೆಡೆ ಸೇರಿಸಿ ವ್ಯವಸ್ಥೆಗೊಳಿಸಲು ಇದೀಗ ಈ "ಕನ್ನಡ ಮತ್ತು ಸಂಸ್ಕೃತಿ ಇಲಾಖೆ" ರೂಪುಗೊಂಡಿರುವಂತೆ ತೋರುತ್ತದೆ. ಪ್ರತಿಯೊಂದು ಜಿಲ್ಲಾ ಸ್ಥಳದಲ್ಲೂ ಈ ಇಲಾಖೆಯ ಅಧಿಕಾರಿಗಳಿರುವರೆಂದು ಹೇಳಲಾಗುತ್ತದೆ. ಸಾರ್ವಜನಿಕರಿಗೆ ಮಾತ್ರ ಇವರ ದರ್ಶನವೂ ಅಲಭ್ಯ ಇವರು ಮಾಡುತ್ತಿರುವ ಕೆಲಸವೇನೆಂಬುದೂ ತಿಳಿಯದು. ಕನ್ನಡಕ್ಕಾಗಿ ಸರಕಾರ ಕೊಡುವ ಹಣದಲ್ಲಿ ಬಹುಭಾಗ ಈ ಇಲಾಖೆಯ ನೌಕರರ ಸಂಬಳ - ಗಿಂಬಳಗಳಿಗೂ ಅಧಿಕಾರಿಗಳ ಬಹುಮಾನಗಳಿಗೂ ವ್ಯಯವಾಗಿ ಹೋಗುತ್ತಿದೆ. ಇಂಥ ಲೂಟಿ ಬೇರಾವ ರಾಜ್ಯದಲ್ಲೂ ನಡೆಯುತ್ತಿಲ್ಲ.

## ಸಾಂಸ್ಕೃತಿಕ ಪರಿಷತ್ತು

೧೯೧೫ರಲ್ಲಿ ಜನಿಸಿದ ಕನ್ನಡ ಸಾಹಿತ್ಯ ಪರಿಷತ್ತು ಈ ೭೫ ವರ್ಷಗಳಲ್ಲಿ ಪ್ರಪಂಚ ಆಲದ ಮರದಂತೆ ಬೆಳೆದು ಕರ್ನಾಟಕದುದ್ದಕ್ಕೂ ಹರಡಿಕೊಂಡಿದೆ. ಶ್ರೀ ಜಿ. ನಾರಾಯಣರು ಅಧ್ಯಕ್ಷರಾಗಿದ್ದಾಗ ಜಿಲ್ಲಾ ಸಮಿತಿಗಳ ಸ್ಥಾಪನೆಯಾಯಿತು. ಅವುಗಳ ಮೂಲಕ ಪರಿಷತ್ತಿನ ಕಾರ್ಯಕ್ರಮಗಳು ನಿಯಮಿತವಾಗಿ ವ್ಯವಸ್ಥಿತವಾಗಿ ನಡೆಯುತ್ತಿವೆ. ಸರಕಾರದಿಂದ ಪರಿಷತ್ತಿಗೆ ೫ ಲಕ್ಷ ರೂ.ಗಳ ವಾರ್ಷಿಕ ಅನುದಾನ ಸಲ್ಲುತ್ತಿದೆ. ಅಲ್ಲದೆ ವಜ್ರಮಹೋತ್ಸವದ ಕಾಲಕ್ಕೆ ೧೫ ಲಕ್ಷ ೩೧ ಸಾವಿರ ಸಂದಿದೆ. ಪರಿಷತ್ತಿನ ಹಳೆಯ ಕಟ್ಟಡಕ್ಕೆ ಹೊಂದಿಕೊಂಡೇ ಭವ್ಯವಾದ ನೂತನ ಭವನ ಎದ್ದು ನಿಂತಿದೆ. ವಜ್ರ ಮಹೋತ್ಸವದ ನೆನಪಿಗಾಗಿ ಇನ್ನೊಂದು ಕಟ್ಟಡ ಏಳಲಿದೆ.

ಇದೆಲ್ಲ ಸಂತೋಷದ ವಿಚಾರ. ಆದರೆ ಇನ್ನು ಮುಂದೆ ಜಿಲ್ಲಾ ಸಮಿತಿಗಳನ್ನು ಬಲಪಡಿಸುವುದರತ್ತ ಪರಿಷತ್ತು ಗಮನವೀಯಬೇಕು. ಸ್ಥಳಾಭಾವದಿಂದಾಗಿ ಎಷ್ಟೋ ಜಿಲ್ಲೆಗಳಲ್ಲಿ ಜಿಲ್ಲಾ ಸಮಿತಿಗಳ ಚಟುವಟಿಕೆಗಳು ನಡೆಯದಂತಾಗಿದೆ. ಪ್ರತಿಯೊಂದು ಜಿಲ್ಲಾ ಸ್ಥಳದಲ್ಲೂ ಪರಿಷತ್ತನದೇ ಆದ ಒಂದು ಸಣ್ಣ ಕಟ್ಟಡ ನಿರ್ಮಿತವಾಗಬೇಕು. ಅದಕ್ಕೆ ೧ ಲಕ್ಷ ರೂ. ಸಾಕು. ಈ ಯೋಜನೆಗಾಗಿ ೨೦.ಲಕ್ಷರೂ ಕೇಳಿದರೆ ಸರಕಾರ ಕೊಟ್ಟೇ ಕೊಡುತ್ತದೆ. ಶ್ರೀ ಹಂಪ, ನಾಗರಾಜಯ್ಯನವರಂಥ ಹುರುಪಿನ ಅಧ್ಯಕ್ಷರ ಅಧಿಕಾರಾವಧಿಯಲ್ಲಿಯೇ ಈ ಮಹತ್ವದ ಕಾರ್ಯ ನಡೆಯಬೇಕಾಗಿದೆ.'

ಪರಿಷತ್ತು ಈಗ ಕೇವಲ ಸಾಹಿತ್ಯಕ ಸಂಸ್ಥೆಯಾಗಿ ಉಳಿದಿಲ್ಲ. ಅಖಿಲ ಕರ್ನಾಟಕ ಸ್ವರೂಪದ ಸಾಂಸ್ಕೃತಿಕ ಸಂಸ್ಥೆಯಾಗಿಯೂ ಅದು ರೂಪುಗೊಳ್ಳುತ್ತಿದೆ. ಸಾಹಿತ್ಯ ಮತ್ತು ಕಲೆಗಳ ಅಭಿವೃದ್ಧಿಗಾಗಿ, ಸಂರಕ್ಷಣೆಗಾಗಿ ಅದು ದುಡಿಯುತ್ತಿದೆ. ಕಳೆದ ೬ ವರ್ಷಗಳಿಂದ ಕನ್ನಡ ಬೆರಳಚ್ಚು ಮತ್ತು ಲಿಪಿ ತರಗತಿಗಳನ್ನು ನಡೆಸುತ್ತಿದೆ. ಪರಿಷತ್ತಿನ ಆಶ್ರಯದಲ್ಲಿ ಸಾಕ್ಷರತಾ ತರಗತಿಗಳೂ ನಡೆಯುತ್ತಿವೆಯೆಂದರೆ ಕೆಲವರಿಗೆ ಅಚ್ಚರಿಯೆನಿಸಬಹುದು. ಸಾಹಿತ್ಯಕ ಸಂಸ್ಥೆಗೆ ಈ ಉಪದ್ಯಾಪವೇಕೆ? ಎಂದು ಪ್ರಶ್ನಿಸುವ ದಡ್ಡರು ಇದ್ದಾರೆ. ಓದುವವರೇ ಇರದಿದ್ದರೆ ಇವರ ಸಾಹಿತ್ಯವನ್ನಾರು ಕೇಳುತ್ತಾರೆ? ಎಂದು ಇವರಿಗೆ ಉತ್ತರ ಕೊಡಬೇಕಾಗುತ್ತದೆ. ದತ್ತಿ ಉಪನ್ಯಾಸಗಳು, ಗಮಕ ತರಗತಿಗಳು, ಕನ್ನಡಪರೀಕ್ಷೆಗಳು, ಕೀರ್ತನ ಮಹೋತ್ಸವಗಳು, ಸಾಹಿತ್ಯ ಪ್ರದರ್ಶನಗಳು, ಅಂತರರಾಷ್ಟ್ರೀಯ ಪುಸ್ತಕವರ್ಷ, ಮಹಿಳಾ ವರ್ಷಗಳ ಆಚರಣೆ, ಕಳೆದ ಡಿಸೆಂಬರ್‌ನಲ್ಲಿ ನಡೆದ ಅಖಿಲ ಕರ್ನಾಟಕ ಮಕ್ಕಳ ಮೇಳ, ಅದಕ್ಕೂ, ಮೊದಲು ನಡೆದ 'ದಲಿತ ಮಕ್ಕಳು' ಎಂಬ ವಿಚಾರ ಸಂಕಿರಣ – ಹೀಗೆ ಸದಾ ಕಾಲವೂ ಚಟುವಟಿಕೆಗಳಲ್ಲಿ ನಿರತವಾಗಿರುವ ಪರಿಷತ್ತು ಸರಕಾರದ ಸಾಂಸ್ಕೃತಿಕ ವಿಭಾಗದಂತೆಯೇ ಕೆಲಸಮಾಡುತ್ತಿದೆಯೆಂದರೆ ಅತಿಶಯೋಕ್ತಿಯಾಗದು. ಸಾಹಿತ್ಯ ಪರಿಷತ್ತು ಇದನ್ನೆಲ್ಲ ಮಾಡಬಾರದೆಂದು ವಾದಿಸುವವರೂ ಇದ್ದಾರೆ. ಅದು ಅವರ ಅಭಿಪ್ರಾಯ ಕರ್ನಾಟಕದ ಮಟ್ಟದಲ್ಲಿ ವ್ಯಾಪಕವಾದ ರೀತಿಯಲ್ಲಿ ಸಾಹಿತ್ಯಕ ಸಾಂಸ್ಕೃತಿಕ ಸೇವೆಸಲ್ಲಿಸುತ್ತಿರುವ ಪರಿಷತ್ತಿನ ಕಾರ್ಯಕರ್ತರನ್ನು ನಾವು ಮೆಚ್ಚಿಕೊಳ್ಳಲೇಬೇಕಾಗುತ್ತದೆ.

## ಫ್ರೆಂಚ್ ಮಾದರಿ

ಕಳೆದ ವರ್ಷ ಧರ್ಮಸ್ಥಳದಲ್ಲಿ ನಡೆದ ಸಮ್ಮೇಳನದ ಅಧ್ಯಕ್ಷ ಪೀಠದಿಂದ ಮಾತನಾಡುತ್ತ ಶ್ರೀ ಗೋಪಾಲಕೃಷ್ಣ ಅಡಿಗರು-

"ನಾನಾ ಗ್ರಂಥಗಳು ಪ್ರಕಟವಾಗುತ್ತಿರುವ ಈ ಕಾಲದಲ್ಲಿ ಯಾವುದು ಸಾಹಿತ್ಯ, ಯಾವುದು ಸಾಹಿತ್ಯವಲ್ಲ ಕೇವಲ ವರದಿ, ಕೇವಲ ಕೃತಕ ಎಂಬುದಾಗಿ ವಿಂಗಡಿಸಲು ಮಾಡುವ ಪ್ರಯತ್ನವೇ ನಾವು ನಮ್ಮ ಭಾಷೆಗೂ ಜನಕ್ಕೂ ಸಲ್ಲಿಸಬೇಕಾದ ಸೇವೆ ಉಳಿದೆಲ್ಲ ದ್ರೋಹ, ಈ ಕೆಲಸ ಸಾಹಿತ್ಯ ಪರಿಷತ್ತಿನಿಂದ ನಿರಂತರವಾಗಿ ನಡೆಯುತ್ತಲೇ ಇರಬೇಕು. ಈ ರೀತಿಯಲ್ಲಿ ಈ ಸಂಸ್ಥೆ ಮಾರ್ಪಾಟಾಗಲು ತಕ್ಕ ಏರ್ಪಾಟು ಆಗಬೇಕೆಂದು ನನ್ನ ಕಳಕಳಿಯ ಪ್ರಾರ್ಥನೆ" ಎಂದು ಹೇಳಿದ್ದರು.

ಹನ್ನೊಂದು ತಿಂಗಳುಗಳ ಅಲ್ಪಾವಧಿಯಲ್ಲಿ ಇಂಥ ಮಾರ್ಪಾಟಾಗುವುದು ಶಕ್ಯವೇ ಇಲ್ಲದಿರುವುದು ಸ್ಪಷ್ಟವಿದೆ. ನೂತನವಾಗಿ ಸೃಷ್ಟಿಯಾಗುವ ಸಾಹಿತ್ಯದ ಮೌಲ್ಯ ಮಾಪನ ಕಾವ್ಯವನ್ನು ಪರಿಷತ್ತು ಮಾಡಬೇಕೆಂಬುದೆ ಶ್ರೀ ಅಡಿಗರ ಸೂಚನೆಯ ತಿರುಳು.

ಪರಿಷತ್ತು, ಪಂಡಿತರ, ವಿದ್ವಾಂಸರ, ವಿಮರ್ಶಕರ, ಶ್ರೇಷ್ಠ ಸಾಹಿತಿಗಳ ಅತ್ಯುಚ್ಚ ನ್ಯಾಯಪೀಠವಾಗಲೇಂಬುದು ಅವರ ಆಶಯ.

"ಸಾಹಿತ್ಯ ಕೃತಿಗಳಗೆ ಸಂಬಂಧ ಪಟ್ಟ ವಿಮರ್ಶ, ಮೌಲ್ಯ ನಿರ್ಣಯ ಮುಂತಾದವುಗಳಿಗಾಗಿಯೇ ಫ್ರೆಂಚ್ ಅಕಾಡೆಮಿಯ ರೀತಿಯ ಅತ್ಯುಚ್ಚ ಧೀಮಂತರ ಒಂದು ವಿಶಿಷ್ಟ ಸಂಸ್ಥೆಯನ್ನು ಸಾಹಿತ್ಯ ಪರಿಷತ್ತು ಸ್ಥಾಪಿಸಿ ಅದನ್ನು ಸ್ವತಂತ್ರವಾದ ಒಂದು ಸಣ್ಣ ಘಟಕವನ್ನಾಗಿ ನಡೆಸಿಕೊಂಡು ಬರುವುದು ಸಾಧ್ಯವಾದೀತೇ ಎಂದು ಪರೀಕ್ಷಿಸಿ ನೋಡಬೇಕು. ಇದು ತೀರ ದೊಡ್ಡ ಸಂಘವಾಗದೆ, ಇಡಿ ಕರ್ನಾಟಕದಲ್ಲಿ ಹತ್ತುಹದಿನೈದು ಮಂದಿ ನಿಷ್ಪಕ್ಷಪಾತ ವಿದ್ವಾಂಸರಿಗೆ ಆ ಕೆಲಸ ಒಪ್ಪಿಸಬಹುದು". ಎಂದು ಅವರ ಸೂಚಿಸಿದರು.

## "ನಿಷ್ಪಕ್ಷಪಾತಿಗಳು!"

ಸಾಹಿತ್ಯದ ಮೌಲ್ಯಮಾಪನ ಕಾವ್ಯವನ್ನು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರವು ಸಾಹಿತ್ಯ ವಾರ್ಷಿಕದ ಮೂಲಕವು ಬೇರೆ ಬೇರೆ ವಿಮರ್ಶಕರು ತಮ್ಮ ವಿಮರ್ಶೆಗಳ ಮೂಲಕವೂ ಮಾಡುತ್ತಲೇ ಇದ್ದಾರೆ. 'ಕನ್ನಡನುಡಿ'ಯಲ್ಲೂ ಆ ಕಾರ್ಯನಡೆಯುತ್ತಿದೆ. ಶ್ರೀ ಅಡಿಗರು ಸೂಚಿಸುವಂತೆ "ನಿಷ್ಪಕ್ಷಪಾತಿಗಳಾದ ವಿದ್ವಾಂಸರ ಅತ್ಯುಚ್ಚ ಸಂಸ್ಥೆ ಇಂದಿನ ಸಂದರ್ಭದಲ್ಲಿ ಅನವಶ್ಯಕ. ಇಂಥ "ನಿಷ್ಪಕ್ಷಪಾತಿ" ವಿದ್ವಾಂಸರೂ ಇಂದು ದುರ್ಲಭ. ನಮ್ಮಲ್ಲಿ ಇಂದು ನಡೆದಿರುವುದಾದರೂ ಏನು? ಒಬ್ಬೊಬ್ಬ ಹಿರಿಯ ಕವಿ-ಸಾಹಿತಿಯ ಸುತ್ತಲು ಆತನ ಶಿಷ್ಯರ ಅಥವಾ ಭಕ್ತರ ಒಂದು ಸಣ್ಣ ಗುಂಪು ಇದೆ. ತಾವು ಮಹಾ ವಿದ್ಯಾಂಸರೆಂದೂ ವಿಮರ್ಶಕರೆಂದು ಇವರು

ಸೋಗು ಹಾಕುತ್ತಾರೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಬಹುಮಾನಗಳನ್ನು ಹಂಚಲಾಗುತ್ತಿದೆ. ಅಲ್ಲಿ ಕೇವಲ ಸರಕಾರದ ಹಣದ ಲೂಟಿ ನಡೆಯುತ್ತಿದೆ ಎಂದು, ಆ ಆಕಾಡೆಮಿಯ ನಿವೃತ್ತ ಕಾರ್ಯದರ್ಶಿ ಡಾ|| ಪ್ರಭಾಕರ ಮಾಚವೇಯವರೇ ಈಚೆಗೆ ಬರೆದಿದ್ದಾರೆ.

ಕೇಂದ್ರ ಸಾಹಿತ್ಯ ಅಕಾಡೆಮಿಯ ನಿಯಮಗಳನ್ನು ಸರಿಯಾಗಿ ರೂಪಿಸುವುದು ಅಗತ್ಯ. ಎಷ್ಟೋ ಅತ್ಯುತ್ತಮ ಲೇಖಕರ ಉತ್ಕೃಷ್ಟ ಕೃತಿಗಳಿಗೆ ಬಹುಮಾನಗಳು ತಪ್ಪಿ ಹೋಗಿವೆ. ಶ್ರೇಷ್ಠ ಕೃತಿ ಯಾವ ವರ್ಷವೇ ಪ್ರಕಟವಾಗಿರಲಿ. ಅದಕ್ಕೆ ಬಹುಮಾನ ದೊರೆಯುವ ಏರ್ಪಾಡು ಆಗಬೇಕು.

ಕೇಂದ್ರ ಸಾಹಿತ್ಯ ಅಕಾಡೆಮಿ ಸ್ಥಾಪಿತವಾದಂದಿನಿಂದಲೂ ಅದರ ಗುತ್ತಿಗೆ ಹಿಡಿದಿದ್ದು ಕವಿ-ಪಂಡಿತರದೊಂದು ಸಣ್ಣ ಗುಂಪು. ಈ ಗುಂಪು ಮಾಡದಿರುವ ಅನ್ಯಾಯವೇ ಇಲ್ಲ. ಮೊದಲನೆಯದಾಗಿ ಅಕಾಡೆಮಿ ವಾರ್ಷಿಕ ಬಹುಮಾನಗಳನ್ನು ಇವರು ತಾವು ತಾವೇ ಸರದಿ ಪ್ರಕಾರ ಹಂಚಿಕೊಂಡರು. ಅಂತರ ರಾಷ್ಟ್ರೀಯ ಪ್ರಶಸ್ತಿಗಳಿಸಿದ ಪ್ರಗತಿ ಶೀಲ ಸಾಹಿತ್ಯ ಕೃತಿಗಳಿಗೂ ಇವರು ಬಹುಮಾನ ಕೊಡಲಿಲ್ಲ. ತಮ್ಮ ಗುಂಪಿನವರಲ್ಲದ ಬೆಟಗೇರಿ ಕೃಷ್ಣಶರ್ಮರಂಥ ಶ್ರೇಷ್ಠ ಸಾಹಿತಿಗಳಿಗೂ ಕೊಡಲಿಲ್ಲ ತಮ್ಮ ಗುಂಪಿನವರಿಗೂ ತಮ್ಮನ್ನು ಒಲೈಸುವವರಿಗೂ ಮಾತ್ರ ಅಕಾಡೆಮಿಯ ಅನುವಾದ ಕಾವ್ಯಗಳನ್ನೊಪ್ಪಿ ಸರಕಾರದ ಅನುದಾನದ ಹಣ ಕರಗಿಸುವುದರಲ್ಲಿ ಇವರು ಪರಿಣಿತರು. ಹಳಬರಿಗೂ ಹಿರಿಯರಿಗೂ ಮೊದಲು ಬಹುಮಾನ ಕೊಡಬೇಕೆಂದು ಹೇಳುತ್ತ ಅನರ್ಹ ಕೃತಿಗಳಿಗೂ ಇವರು ಬಹುಮಾನ ಹಂಚುತ್ತಿದ್ದಾರೆ. ಡಾ. ಅಡಿಗರು ಸೂಚಿಸುವ 'ಫ್ರೆಂಚ್ ಮಾದರಿಯ ಅಕಾಡೆಮಿ'ಯೂ ಇಂಥ ನಿಷ್ಪಕ್ಷಪಾತಿ ಪಂಡಿತ"ರ ಕಪಿಮುಷ್ಟಿಗೆ ಸಿಕ್ಕಿ ಬಿದ್ದು ಅವರೂ ಅವರ ಬಾಂಧವರು ಮೇಯಲು ಇನ್ನೊಂದು ಸಮೃದ್ಧ ತೋಟವೇ ಸಿಕ್ಕಿದಂತಾದೀತು. ಸರಕಾರದ ಹಣವನ್ನು ಗುಳಂಕೃತ ಮಾಡುವ ಇಂಥ ವಿದ್ವಾಂಸರ ವಿಮರ್ಶೆಗಳಿಗೆ ಸಾಮಾನ್ಯ ಜನರ ದೃಷ್ಟಿಯಲ್ಲಿ ಬೆಲೆಯೂ ಇಲ್ಲ. ಅರ್ಹತೆಯಿಲ್ಲದ ಸಾಹಿತ್ಯ ಕೃತಿಗಳನ್ನು ತಲೆಯ ಮೇಲೆ ಹೊತ್ತು ಕುಣಿಯುವ ಇವರ ಸ್ವಜನ ಪಕ್ಷ ಪಾತದ ಪ್ರಹಸನಗಳನ್ನು ನೋಡಿ ಜನರು ನಗುತ್ತಿದ್ದಾರೆ.

ನಮ್ಮ ರಾಜ್ಯದ ಸಾಹಿತ್ಯ ಅಕಾಡೆಮಿ ಮಾತ್ರ ಡಾ|| ಹಾ.ಮಾ. ನಾಯಕರ ನೇತೃತ್ವದಲ್ಲಿ ನಿಜಕ್ಕೂ ನಿಷ್ಪಕ್ಷಪಾತ ದೃಷ್ಟಿಯಿಂದ ಕೆಲಸ ನಡೆದಿದೆ. ಈ ಅಕಾಡೆಮಿಯ ಸದಸ್ಯರು ತಮ್ಮ ಸ್ವಂತ ಕೃತಿಗಳಿಗೆ ಬಹುಮಾನ ಪಡೆಯಕೂಡದೆಂಬ ನಿರ್ಬಂಧವಿರುವುದರಿಂದ ಕೇಂದ್ರ ಅಕಾಡೆಮಿಯಲ್ಲಿ ನಡೆಯುವ ಸ್ವಾರ್ಥದ ಅಟ್ಟಹಾಸ ಇಲ್ಲಿ ನಡೆಯುವುದಿಲ್ಲ.

## ಕನ್ನಡ ಅಧ್ಯಯನ ಕೇಂದ್ರಗಳು

ನಮ್ಮ ರಾಜ್ಯದ ವಿಶ್ವ ವಿದ್ಯಾಲಯಗಳ ಕನ್ನಡ ಅಧ್ಯಯನ ಕೇಂದ್ರಗಳೂ ಕನ್ನಡ ಭಾಷೆ, ಕನ್ನಡ ಸಾಹಿತ್ಯ ಕನ್ನಡ ಕಲೆಗಳ ಬೆಳವಣಿಗೆಗಾಗಿ ಶಕ್ತಿ ಮೀರಿ ದುಡಿಯುತ್ತಿವೆ. ಈ ವಿಷಯಗಳಿಗೆ ಸಂಬಂಧಪಟ್ಟ ನೂರಾರು ಗ್ರಂಥಗಳು ಈ ಕೇಂದ್ರಗಳಿಂದ ಪ್ರಕಟವಾಗುತ್ತಿದೆ; ವಿಶ್ವಕೋಶದಂಥ ಬೃಹತ್ ಪ್ರಮಾಣದ ಮಹಾಸಂಪುಟ

ರಚಿಸುವ ಕಾರ್ಯ ಮೈಸೂರು ವಿಶ್ವವಿದ್ಯಾನಿಲಯ 'ಸಾಹಿತ್ಯ ಚರಿತ್ರೆ' ಒದಗಿಸಿದೆಯಲ್ಲದೆ ಸಾಹಿತ್ಯ ವಿಮರ್ಶೆಗೆ ಸಂಬಂಧಪಟ್ಟ ಪುಸ್ತಕಗಳನ್ನು ನಿಯಮಿತವಾಗಿ ಪ್ರಕಟಿಸುತ್ತಿದೆ. ಕರ್ನಾಟಕ ವಿಶ್ವವಿದ್ಯಾನಿಲಯವು ವಚನ ಸಾಹಿತ್ಯ ಸಂಶೋಧನ ಪ್ರಕಟಣೆಯಲ್ಲಿ ಹೆಚ್ಚಿನ ಕೆಲಸಮಾಡಿದೆ. ಜಾನಪದ-ಕಾವ್ಯ-ನಾಟಕಗಳನ್ನು ಪ್ರಕಟಿಸಿದೆ. ರಜತ ಮಹೋತ್ಸವದ ವಿಶೇಷ ಪ್ರಕಟನೆಯಾಗಿ ಹೊರಬಂದಿರುವ ಈ ವಿಶ್ವವಿದ್ಯಾಲಯದ "ಆಧುನಿಕ ಕನ್ನಡ ಕಾವ್ಯ" ಎಂಬ ಕನ್ನಡಾಂಗ್ಲ ಸಂಕಲನ ಕಳೆದ ದಶಕದಲ್ಲಿ ಪ್ರಕಟವಾದ ಮಹತ್ವ ಗ್ರಂಥಗಳಲ್ಲೊಂದು ಕಳೆದ ಅರವತ್ತು ವರ್ಷಗಳ ಅವಧಿಯಲ್ಲಿ ಕಾವ್ಯ ರಚನೆಮಾಡಿದ ಎಲ್ಲ ಹಿರಿಯ ಕವಿಗಳಿಗೂ ಇಲ್ಲಿ ಸ್ಥಾನ ಲಭಿಸಿದೆ.

## ಗ್ರಂಥಾಲಯ ಇಲಾಖೆ

ಈ ಕನ್ನಡ ಅಧ್ಯಯನ ಪೀಠಗಳೂ, ಕನ್ನಡ ಸಾಹಿತ್ಯ ಪರಿಷತ್ತೂ, ಸಾಹಿತ್ಯ ಅಕಾಡೆಮಿಯೂ ಪ್ರಕಟಿಸುವ ಪುಸ್ತಕಗಳ ಮಾರಾಟವೂ ಒಂದು ಸಮಸ್ಯೆಯೇ. ನಮ್ಮಲ್ಲಿ ಕೊಂಡು ಓದುವವರು ಕಡಿಮೆ. ೫೦-೬೦ ರೂ. ಬೆಲೆಯ ಗ್ರಂಥಗಳನ್ನಂತೂ ಕೇವಲ ಗ್ರಂಥಾಲಯಗಳೇಕೊಳ್ಳಬೇಕು. ನಮ್ಮ ಸರಕಾರದ ಗ್ರಂಥಾಲಯ ಇಲಾಖೆ ಕಳೆದ ಹಲವು ವರ್ಷಗಳಿಂದ ಅತ್ಯಂತ ಸಮರ್ಥವಾದ ರೀತಿಯಲ್ಲಿ ಕೆಲಸ ಮಾಡುತ್ತಿದೆ.

ಪ್ರಕಟವಾದ ಪ್ರತಿಯೊಂದು ಉತ್ತಮ ಕನ್ನಡ ಪುಸ್ತಕದ ಮೊದಲ ಮುದ್ರಣದ ೫೦೦ ಪ್ರತಿಗಳನ್ನು ಅಥವಾ ಒಂದು ಮಿತಿಗೊಳಪಟ್ಟ ಬೆಲೆಯ ಪ್ರತಿಗಳನ್ನು ಗ್ರಂಥಾಲಯ ಇಲಾಖೆ ಖರೀದಿಸಿದರೆ ನಮ್ಮ ಪುಸ್ತಕ ಪ್ರಪಂಚಕ್ಕೆ ತುಂಬ ಸಹಾಯವಾದೀತು.

ಗ್ರಂಥಕರ್ತರೇ ಸ್ವತಃ ಪ್ರಕಟಿಸುವ ಗ್ರಂಥಗಳಿಂದ ಗ್ರಂಥಾಲಯ ಇಲಾಖೆ - ರಿಯಾಯತಿ ಬೇಡಬಾರದು.

ಸದ್ಯದ ನಿಯಮಗಳ ಪ್ರಕಾರ ಪುಸ್ತಕ ಪ್ರಕಾಶಕರೇ ಬೇರೆ ಬೇರೆ ಗ್ರಂಥಾಲಯಗಳಿಗೆ ಪ್ರತಿಗಳನ್ನು ಕಳುಹಿಸಿ ಅವರಿಂದಲೇ ಹಣ ಪಡೆಯಬೇಕಾಗುತ್ತದೆ. ಕೆಲವು ಗ್ರಂಥಾಲಯಗಳಿಂದ ಎರಡು ಮೂರು ವರ್ಷ ಕಳೆದರೂ ಹಣ ಬರುವುದಿಲ್ಲ. ಪ್ರಕಾಶಕರಿಗೆ ಇದೊಂದು ತಲೆನೋವಿನ ವಿಚಾರವಾಗಿದೆ.

ಗ್ರಂಥಕರ್ತರೇ ಪ್ರಕಟಿಸುವ ಉತ್ತಮ ಗ್ರಂಥಗಳನ್ನು ರಾಜ್ಯ ಗ್ರಂಥಾಲಯ ತಾನೇ ನೇರವಾಗಿ ತರಿಸಿಕೊಂಡು ಅವುಗಳ ಹಣವನ್ನು ತಕ್ಷಣ ಸಲ್ಲಿಸುವ ಒಂದು ನಿಯಮ ಜಾರಿಗೆ ಬರಬೇಕಾಗಿದೆ. ವಿಧಾನ ಮಂಡಲದ ಸಾಹಿತ್ಯ ಪ್ರಿಯ ಸದಸ್ಯರು ಈ ದಿಸೆಯಲ್ಲಿ ಕೆಲಸ ಮಾಡಬೇಕು. ಶಿಕ್ಷಣ ಸಚಿವರು ಮನಸ್ಸು ಮಾಡಿದರೆ ಇದು ನಾಳೆಯೇ ಜಾರಿಗೆ ಬಂದೀತು.

ಶಿಕ್ಷಣ ಇಲಾಖೆಯಲ್ಲಿಯೇ ಗ್ರಂಥಗಳ "ಸಗಟು ಖರೀದಿ"ಯ ಯೋಜನೆಯೊಂದು ಇತ್ತು. ಈಚೆಗೆ ಅದನ್ನು ಕೈಬಿಡಲಾಗಿದೆಯೆಂದು ಕೇಳಿದ್ದೇನೆ, ಕಾರಣವೇನೆಂಬುದು ತಿಳಿಯದು. ಸಾಹಿತಿಗಳಿಗೆ ಗೌರವಧನ ಶ್ರೀ ನಿಜಲಿಂಗಪ್ಪನವರು ಮುಖ್ಯ ಮಂತ್ರಿಯಾಗಿದ್ದಾಗ ಶ್ರೀ ಕುವೆಂಪು ಅವರನ್ನು 'ರಾಷ್ಟ್ರಕವಿ'ಯೆಂದು ಗೌರವಿಸಿ

ಅವರಿಗೆ ತಿಂಗಳಿಗೆ ೫೦೦ ರೂ.ಗಳ ಗೌರವ ಧನವನ್ನು ಸಲ್ಲಿಸುವ ಸ್ತುತ್ಯ ಯೋಜನೆ ಆರಂಭಿಸಿದರು. ಅನಂತರ ಡಾ॥ ಬೇಂದ್ರೆ, ಡಾ। ಗೊರೂರು, ಡಾ॥ ಬೆಟಗೇರಿ ಕೃಷ್ಣಶರ್ಮ, ಮೊದಲಾದವರಿಗೂ ಗೌರವ ಧನ ಸಲ್ಲಿಸಲಾಯಿತು. ಶ್ರೀ ಅರಸು ಅವರು ಮುಖ್ಯ ಮಂತ್ರಿಯಾದ ಮೇಲೆ ಅವರು ವಹಿಸಿದ ಆಸಕ್ತಿಯಿಂದಾಗಿ ಇನ್ನೂ ಅನೇಕ ಜನ ಶ್ರೇಷ್ಠ ಸಾಹಿತಿಗಳು ಗೌರವ ಧನ ಪಡೆಯ ತೊಡಗಿದರು.

ಇದೀಗ ೩೯೩ ಜನ ಸಾಹಿತಿಗಳು, ಕಲಾವಿದರು ಮತ್ತು ಸಂಸ್ಕೃತ ಪಂಡಿತರಿಗೆ ೫೦೦ ರೂ. ೩೬೯ ಜನಕಲಾವಿದರಿಗೆ ಮಾಸಿಕ ೧೦೦ ರೂ.ಗೌರವ ಧನ ನೀಡಲಾಗುತ್ತಿದೆ.

ಕನ್ನಡದಲ್ಲಿ ಸಾಕಷ್ಟು ಉತ್ತಮ ದರ್ಜೆಯ ಸಾಹಿತ್ಯ ರಚಿಸಿ ಕರ್ನಾಟಕಕ್ಕೆ ಕೀರ್ತಿ ತಂದು ಕೊಟ್ಟ ಹಿರಿಯ ಸಾಹಿತಿಗಳಿಗೆ ಮಾಸಿಕ ಗೌರವ ಧನ ನೀಡಿ ಗೌರವಿಸಬೇಕಾದದ್ದು ಸರಕಾರದ ಕರ್ತವ್ಯ. ಆದರೆ ಸಾಹಿತಿಗಳಿಗೆ ಉತ್ತೇಜನ ನೀಡಬೇಕೆಂಬ ಉತ್ಸಾಹದ ಭರದಲ್ಲಿ ಈಚೆಗೆ ನೂರಾರು ಜನ ಅನರ್ಹರಿಗೂ ಸಾಹಿತಿಗಳೇ ಅಲ್ಲದವರಿಗೂ, ಕನ್ನಡದಲ್ಲಿ ನಾಲ್ಕು ನಾಲ್ಕು ಸಾಲು ಬರೆಯಲೂ ಸಹ ಶಕ್ತರಲ್ಲದವರಿಗೂ ಸಹ ಈ ಮಾಸಿಕ ವೇತನ ನೀಡಲಾಗುತ್ತಿದೆ. ಈ ಅಭ್ಯಾಸವನ್ನು ನೋಡಿ ಜನರು ನಗುತ್ತಿದ್ದಾರೆ. ಅನರ್ಹರಿಗೆ ನೀಡುತ್ತಿರುವ ಮಾಸಾಶನ ನಿಲ್ಲಿಸಿ ಅರ್ಹರಾಗಿರುವವರಿಗೆ ನೀಡಬೇಕಾದುದು ಸರಕಾರದ ಕರ್ತವ್ಯ.

## ಡಾಕ್ಟರೇಟುಗಳ ಕಥೆ

ಸಾಹಿತ್ಯ ಮತ್ತು ಕಲೆಗಳ ಕ್ಷೇತ್ರಗಳಲ್ಲಿ ಸಾಧನೆ ಮಾಡಿ ಹೆಸರುಗಳಿಸಿದ ಪ್ರತಿಭಾವಂತರನ್ನು ಕರೆದು ಗೌರವ ಡಾಕ್ಟರೇಟು ನೀಡಿ ಸತ್ಕರಿಸುವದು ನಮ್ಮ ವಿಶ್ವವಿದ್ಯಾಲಯಗಳ ಒಂದು ಕರ್ತವ್ಯ. ಡಾ॥ ದೇಜಗೌ ಅವರು ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದಾಗ ಅನೇಕ ಜನ ಸಾಹಿತಿಗಳಿಗೆ ಡಿ.ಲಿಟ್. ಕೊಟ್ಟು ಗೌರವಿಸಿದರು. ಆದರೆ ಇನ್ನಿತರ ವಿಶ್ವವಿದ್ಯಾಲಯಗಳಲ್ಲಿ ಈ ಸ್ತುತ್ಯ ಕಾರ್ಯ ಸರಿಯಾದ ರೀತಿಯಲ್ಲಿ ನಡೆಯಲಿಲ್ಲ. ಡಿ.ಲಿಟ್. ಪದವಿ ಕೊಡುವುದರಲ್ಲೂ ರಾಜಕೀಯ ನಡೆಯುತ್ತಿರುವಂತೆ ಕಾಣುತ್ತದೆ. ಅನೇಕ ಅನರ್ಹ ವ್ಯಕ್ತಿಗಳಿಗೂ ಸಿಕ್ಕುವ ಈ ಗೌರವ ನಿಜವಾಗಿಯು ಅರ್ಹರಾದವರಿಗೆ ಸಿಕ್ಕಲಿಲ್ಲ. ಇದು ವ್ಯಸನಕರವಾದ ಅಂಶ. ನಮ್ಮ ಮೂರು ವಿಶ್ವವಿದ್ಯಾಲಯಗಳೂ ಪ್ರತಿವರ್ಷ ನೂರು ನೂರು ಜನ ಕವಿ-ಸಾಹಿತಿ-ಕಲಾವಿದರಿಗೆ ಗೌರವ ಡಿ.ಲಿಟ್. ಕೊಟ್ಟು ಗೌರವಿಸಬೇಕಾದುದು ಅವುಗಳ ಕರ್ತವ್ಯವಾಗಿದೆಂದು ಹೇಳಬಯಸುತ್ತೇನೆ.

## ಹಿಂದಿಯ ದಬ್ಬಾಳಿಕೆ

ಕನ್ನಡವನ್ನು ಇನ್ನಿತರ ದ್ರಾವಿಡ ಭಾಷೆಗಳನ್ನು ತುಳಿದು ಹತ್ತಿಕ್ಕಿ ಅಪಮಾನಗೊಳಿಸುತ್ತಿರುವ ಹಿಂದೀ ಸಾಮ್ರಾಜ್ಯವಾದಿಗಳನ್ನು ನಾವು ಖಂಡಿಸಲೇ ಬೇಕಾಗುತ್ತದೆ.

ಭಾರತವೆಲ್ಲ ಒಂದು ಭಾರತೀಯರೆಲ್ಲರೂ ಸೋದರರು-ಎಂಬುದೇನೋ ನಿಜ ಆದರೆ ಒಬ್ಬ ಸೋದರ ಇನ್ನಿತರ ಸೋದರರ ಮೇಲೆ ದಬ್ಬಾಳಿಕೆ ನಡೆಸತೊಡಗಿದರೆ ಅದನ್ನು ಸಹಿಸಿಕೊಂಡು ಸುಮ್ಮನಿರುವುದು ಹೇಡಿತನವಾದೀತು. ಹಿಂದಿಯು ರಾಷ್ಟ್ರಭಾಷೆಯಾಗಿದೆಂದೇ ನಂಬಿಕೊಂಡು ಅದನ್ನು ಭಾರತೀಯರೆಲ್ಲರ ಮೇಲೂ ಒತ್ತಾಯದಿಂದ ಹೇರುತ್ತಿದ್ದಾರೆ. ಹಿಂದಿ ಭಾಷಾಂತಕಾರರು, ಅಂಚೆತಂತಿ ಇಲಾಖೆ, ರೈಲ್ವೆಇಲಾಖೆಗಳ ಕಾಗದ ಪತ್ರಗಳ ಮೇಲೆ ಬ್ರಿಟಿಷರ ಕಾಲದಲ್ಲೂ ಇರುತ್ತಿದ್ದ ಕನ್ನಡ ಭಾಷೆ ಈಚೆಗೆ ಮಾಯವಾಗಿ ಅದರ ಸ್ಥಾನವನ್ನು ಹಿಂದಿ ಆಕ್ರಮಿಸಿದೆ. ರಾಷ್ಟ್ರೀಕೃತ ಬ್ಯಾಂಕುಗಳ ಕ್ಯಾಲೆಂಡರ್‌ಗಳ ಮೇಲೆ, ನಮೂನೆ ಪತ್ರಗಳ ಮೇಲೆ, ನಾಮ ಫಲಕಗಳ ಮೇಲೆ ಚೆಕ್ಕುಗಳ ಮೇಲೆ, ಕಾರುಗಳ ಮೇಲೂ ಸಹ ಹಿಂದೀ ರಾರಾಜಿಸುತ್ತಿದೆ. ಕನ್ನಡಿಗರ ಹಣದಿಂದ ಕೊಬ್ಬಿ ಬೆಳೆಯುವ ಈ ಬ್ಯಾಂಕುಗಳು ಕನ್ನಡಕ್ಕೆ ಸ್ಥಾನ ಕೊಡುವುದಿಲ್ಲೆಂದರೆ ಉದ್ದಟತನದ, ಅಕೃತಘ್ನತೆಯ ನಿದರ್ಶನವಲ್ಲವೆ? ಸ್ವಾಭಿಮಾನ ಜನರಾದ ಕನ್ನಡಿಗರು ಈ ಅನ್ಯಾಯದ ವಿರುದ್ಧ ಧ್ವನಿಯೆತುತ್ತಿಲ್ಲವೇಕೆ? ಕನ್ನಡ ತೀರ ತುಚ್ಚವಸ್ತುವಾಯಿತ್ತಲ್ಲ, ಈ ಹಿಂದಿ ಮತಾಂಧರ ದೃಷ್ಟಿಯಲ್ಲಿ? ನಮ್ಮ ಸಂಸತ್ ಸದಸ್ಯರು ಸಂಸತ್ತಿನಲ್ಲಿ ಈ ಹಿಂದಿ ಆತ್ಯಾಚಾರಿಗಳನ್ನು ಖಂಡಿಸಬೇಕು. ನಮ್ಮ ಹತ್ತು ಜನ ಸಂಸತ್ ಸದಸ್ಯರು ಪ್ರತಿಭಟಿಸಿದರೆ ಸಾಕು. ಹಿಂದಿ ದಬ್ಬಾಳಿಕೆಗಾರರು ಬಾಲ ಮುದುರಿಕೊಂಡು ಓಡುತ್ತಾರೆ.

ನನಗೆ ಹಿಂದಿಯ ಬಗೆಗೆ ದ್ವೇಷವಿಲ್ಲ. ಯಾವುದೇ ಭಾಷೆಯ ಬಗೆಗೂ ದ್ವೇಷವಿಲ್ಲ, ಹಿಂದೀ ಸಹ ಭಾರತೀಯ ಭಾಷೆಯೇ ಆದರೆ ಕನ್ನಡ-ತಮಿಳು-ತೆಲಗು-ಮಲೆಯಾಳೀ-ಮರಾಠಿ ಕಾವ್ಯ- ಸಾಹಿತ್ಯಗಳ ಶ್ರೀಮಂತಿಕೆ ಹಿಂದಿಗೆ ಇಲ್ಲ. ೧೦ನೆಯ ಶತಮಾನದಲ್ಲಿಯೇ ಪಂಪನಂಥ ಮಹಾಕವಿಯನ್ನು ಕೊಟ್ಟ ಕನ್ನಡವೆಲ್ಲಿ? “ಶ್ರೀ ರಾಮಾಯಣ ದರ್ಶನಂ” ದಂಥ ಮಹಾಕಾವ್ಯವಾಗಲಿ, “ಮಲೆಗಳಲ್ಲಿ ಮದುಮಗಳು” ದಂಥ ಮಹಾಕಾದಂಬರಿಯಾಗಲಿ ಹಿಂದಿಯಲ್ಲಿ ಬಂದೇ ಇಲ್ಲ. ಸಣ್ಣ ಕಥೆ, ಕಾದಂಬರಿ, ಕವಿತೆಗಳ ಕ್ಷೇತ್ರದಲ್ಲಿ ಕನ್ನಡವೂ ಮರಾಠಿಯೂ ಪಡೆದಿರುವ ಸಿದ್ಧಿ ಹಿಂದಿಗೆ ಲಭಿಸಿಲ್ಲ. “ರಾಷ್ಟ್ರ ಭಾಷೆ” ಎಂಬ ನೆವ ಹೇಳಿ ಹಿಂದಿ ಸಾಹಿತಿಗಳು ತಮ್ಮ ಮೂರನೆಯ ದರ್ಜೆಯ ಕಥೆ - ಕವಿತೆಗಳನ್ನು ಶಾಲಾ ಕಾಲೇಜುಗಳಲ್ಲಿ ಪಠ್ಯವಾಗಿಸಿಕೊಳ್ಳುತ್ತ ಹಣ ಲೂಟಿ ಮಾಡುತ್ತಿದ್ದಾರೆ. ಆ ಪಠ್ಯಗಳನ್ನು ಭಾರತದ ಎಲ್ಲ ವಿದ್ಯಾರ್ಥಿಗಳು ಓದಬೇಕಾಗಿದೆ, ಉತ್ತರ ಭಾರತ ಹಿಂದೀ ಪಠ್ಯಗಳಲ್ಲಿ ದಕ್ಷಿಣ ಭಾಷೆಗಳ ಸಾಹಿತಿಗಳಿಗೆ ಸ್ಥಾನವಿಲ್ಲ ಕನ್ನಡದ ಅತ್ಯುತ್ತಮ ಕಥೆ, ಕಾದಂಬರಿಗಳ ಹಿಂದೀ ಅನುವಾದ ಪ್ರಕಟಿಸಲು ಯಾವ ಹಿಂದೀ ಪ್ರಕಾಶಕನೂ ಮುಂದೆ ಬರುವುದಿಲ್ಲ. ಹಿಂದೀ ಪತ್ರಿಕೆಗಳಿಗೂ ಸಹ ದ್ರಾವಿಡ ಭಾಷೆಗಳ ಕಥೆ ಕಾದಂಬರಿಗಳ ಬಗೆಗೆ ತಾತ್ಸಾರವೇ ಇದೆ.

ಹಿಂದಿಯನ್ನು ನಾವು ಕಲಿಯೋಣ ಆದರೆ ಅದೊಂದೇ ಇಡೀ ಭಾರತದ “ರಾಷ್ಟ್ರ ಭಾಷೆ”, “ರಾಜ್ಯ ಭಾಷೆ” ಎಂಬ ದುರಹಂಕಾರವನ್ನು ಮೆಟ್ಟಿ ನಿಲ್ಲೋಣ. ನಮ್ಮ ಸಂವಿಧಾನದಲ್ಲಿ ಸೂಚಿತವಾಗಿರುವ ಎಲ್ಲ ಭಾಷೆಗಳೂ ರಾಷ್ಟ್ರ ಭಾಷೆಗಳೇ, ಅವೆಲ್ಲವುಗಳಿಗೂ ಏಕಪ್ರಕಾರದ ಗೌರವ ಸ್ಥಾನಮಾನ ಸಲ್ಲಬೇಕು. ಇವುಗಳನ್ನು ತುಳಿದು ಹಿಂದಿಯನ್ನು ಮಾತ್ರ ಮೆರೆಯಿಸಬಯಸುವ ಸ್ವಾರ್ಥ ಸಾಧಿಸಲೆತ್ನಿಸುವ ಧೂರ್ತರನ್ನು ನಾವು ಸದೆ ಬಡಿಯಬೇಕು.

## ನಾಮಕರಣಗಳು

ಹಿಂದೀ ಸಾಮ್ರಾಜ್ಯವಾದಿಗಳು ಇನ್ನೊಂದರ ವಿಷಯದಲ್ಲು ಅನ್ಯಾಯ ಮಾಡುತ್ತಿದ್ದಾರೆ. ಎರಡು ವರ್ಷಗಳಿಗೊಮ್ಮೆ ರಾಜ್ಯ ಸಭೆಯಲ್ಲಿ ಕವಿ ಸಾಹಿತಿಗಳಿಗೆ ನೀಡಲಾಗುವ ನಾಲ್ಕು ನಾಮಕರಣ ಸ್ಥಾನಗಳನ್ನು ಉತ್ತರದ ಹಿಂದೀ ಸಾಹಿತಿಗಳೇ ಕಬಳಿಸುತ್ತಿದ್ದಾರೆ. ದಕ್ಷಿಣದ ಸಾಹಿತಿಗಳಿಗೆ ಈ ಸ್ಥಾನಗಳು ದಕ್ಕುವಂತೆಯೇ ಇಲ್ಲ ಪ್ರಧಾನ ಮಂತ್ರಿ ಮೇಲೆ ನಾನಾ ರೀತಿಯ ಒತ್ತಡ ತಂದು ಉತ್ತರದ ಸಾಹಿತಿಗಳು ಇಂಥ ಸ್ವಾರ್ಥ ಸಾಧನೆಯಲ್ಲಿ ನಿರತರಾಗಿದ್ದಾರೆ ಇದು ಸಣ್ಣ ವಿಷಯವೆಂದು ಉಪೇಕ್ಷಿಸುವಂತಿಲ್ಲ. ರಾಜ್ಯಸಭೆಗೆ ನಾಮಕರಣಗೊಳ್ಳಬೇಕಾದುದು ದಕ್ಷಿಣ ಸಾಹಿತಿಗಳ ಹಕ್ಕೂ ಆಗಿದೆ. ನಮ್ಮ ನಾಲ್ಕು ಜನ ಲೋಕಸಭಾ ಸದಸ್ಯರು ಈ ಬಗೆಗೆ ಗಂಭೀರವಾಗಿ ತೀವ್ರವಾಗಿ ವಿಚಾರ ಮಾಡಿ, ಪ್ರಧಾನ ಮಂತ್ರಿಗಳಿಗೆ ತಿಳಿಸಿದರೆ ಕನ್ನಡ ಸಾಹಿತಿಗಳಿಗೆ ಸ್ಥಾನ ಲಭಿಸದಿರದು. ಕನ್ನಡ ಸಾಹಿತ್ಯದ ಅಭಿವೃದ್ಧಿಯ ಬಗೆಗೂ ಕರ್ನಾಟಕಕ್ಕೆ ಆಗಬೇಕಾದ ಕಾವ್ಯಗಳ ಬಗೆಗೆ ಈ ಸಾಹಿತಿಗಳೂ ರಾಜ್ಯಸಭೆಯಲ್ಲಿ ಪರಿಣಾಮಕಾರಿಯಾಗಿ ಮಾತನಾಡುತ್ತಿದ್ದರೆ ನಮ್ಮ ಸರ್ಕಾರಕ್ಕೂ ಲಾಭವಾಗದಿರದು.

ಇದೇ ಮಾತು ನಮ್ಮ ರಾಜ್ಯದ ವಿಧಾನ ಪರಿಷತ್ತಿಗೂ ಅನ್ವಯಿಸುತ್ತದೆ, ಇಲ್ಲೂ ಸಹ ಎರಡು ವರ್ಷಗಳಿಗೊಮ್ಮೆ ಮೂರು ಜನ ಸಾಹಿತಿ ಕಲಾವಿದರನ್ನು ನಾಮಕರಣ ಮಾಡಬೇಕಾಗುತ್ತದೆ. ಕೆಲ ವರ್ಷಗಳ ಹಿಂದೆ ಡಾ॥ ಗೊರೂರು ಆನಂತರ ನಾನೂ ನಾಮಕರಣಗೊಂಡ ಸದಸ್ಯರಾಗಿದ್ದೆವು. ನನಗೆ ಎರಡನೆಯ ಅವಧಿಗೆ ನಾಮಕರಣವಾಗುವುದರಲ್ಲಿದ್ದಾಗಲೇ ರಾಜಕಾರಣಿಗಳ ಕುತಂತ್ರದಿಂದ ಅದು ತಪ್ಪಿ ಹೋಯಿತು. ಆರು ವರ್ಷಗಳಿಂದ ನಮ್ಮ ವಿಧಾನ ಪರಿಷತ್ತಿನಲ್ಲಿ ಸಾಹಿತಿಗಳೂ ಕಲಾವಿದರೂ ಇಲ್ಲ. ಈ ವಿಚಾರದಲ್ಲಿ ತೆರೆಯ ಮರೆಯಯಲ್ಲಿ ಅತ್ಯಂತ ಕೀಳು ತರಗತಿಯ ರಾಜಕೀಯ ನಡೆಯುತ್ತದೆ. ಸಾಹಿತಿಗಳಿಗೆ ಸಲ್ಲಬೇಕಾದ ನಾಮಕರಣ ಸ್ಥಾನಗಳನ್ನು ಸಹ ನುಂಗಿ ಹಾಕುತ್ತಾರೆ. ಈ ಅನ್ಯಾಯ ಇನ್ನಾದರೂ ನಿಲ್ಲಬೇಕು, ಸಂವಿಧಾನಕ್ಕೆ ಮೋಸ ಮಾಡುವುದು ತಪ್ಪಬೇಕು.

## ನವ್ಯೋತ್ತರ ಸಾಹಿತ್ಯ

ಸಮ್ಮೇಳನಾಧ್ಯಕ್ಷನಾದವನು ಗಮನಿಸಬೇಕಾದ ಹಲವಾರು ಸಾಂಸ್ಕೃತಿಕ ಅಂಶಗಳನ್ನು ಪ್ರಸ್ತಾಪಿಸಿದುದಾಯಿತು ಇನ್ನು ಸಾಹಿತ್ಯ ಕ್ಷೇತ್ರದ ವಿಚಾರ.

ಈ ಕ್ಷೇತ್ರದಲ್ಲಿ ಸದ್ಯ ತುಂಬ ಗೊಂದಲವಿದೆ, ಅರಾಜಕತೆಯಿದೆ, ಸೃಜನ ಕಾರ್ಯವೇ ನಿಂತುಹೋಗಿದೆ. ಗಲಾಟೆ ಮಾಡುವವರಿಗೇ ಬೆಲೆಯಿದೆ - ಎಂದೆಲ್ಲ ಹೇಳಲಾಗುತ್ತಿದೆ.

## ನಿಜವಾದ ಪರಿಸ್ಥಿತಿಯೇನು?

ಸಾಹಿತ್ಯ ಕ್ಷೇತ್ರದಲ್ಲಿ ಹಿಂದೆಂದೂ ಇಲ್ಲದಿದ್ದಂಥ ಗೊಂದಲ ಇಂದು ಇದೆಯೆಂದು ನನಗಂತೂ ಹಳೆಯ ರೀತಿಯೊಂದರ ಬದಲು ಹೊಸ ರೀತಿಯೊಂದು ಬಳಕೆಗೆ ಬರುವಾಗಲೆಲ್ಲ ಒಂದು ಬಗೆಯ ಆರ್ಭಟ ಇದ್ದೇ ಇರುತ್ತದೆ. ಅರ್ಧ ತಾಸು ಅಡ್ಡ ಮಳೆ ಜಡಿದಾಗ ಕೆಂಪು ನೀರು ರಭಸದಿಂದ ನುಗ್ಗಿ ಬಂದು ಹಳ್ಳ ಹೊಳೆಗಳನ್ನು ತುಂಬಿಸಿ ಕಸ - ಕೊಳೆಗಳನ್ನೆಲ್ಲ ಕೊಚ್ಚಿಕೊಂಡು ಭೋರ್ಗರೆಯುತ್ತಾ ಹರಿಯುದಿಲ್ಲವೆ? ಸಾಹಿತ್ಯ ಕ್ಷೇತ್ರಕ್ಕೆ ಹೊಸ ನೀರು ಬಂದಾಗಲೂ ಹೀಗೆಯೇ ಆಗುವುದು ಸಹಜ. ನವೋದಯ ಕವಿಗಳು ಪ್ರಾಸ ತ್ಯಜಿಸಿ ಕವನ ರಚಿಸತೊಡಗಿದಾಗ ೪೦ರ ದಶಕದಲ್ಲಿ "ಪ್ರಗತಿ ಶೀಲರು" ಹಿರಿಯ ಸಾಹಿತಿಗಳನ್ನು ಟೀಕಿಸತೊಡಗಿದಾಗ ೫೦ರ ದಶಕದಲ್ಲಿ "ನವ್ಯ" ಅವತಾರವಾದಾಗ ನಡೆದಿದ್ದಂತ ವಾದ ವಿವಾದ ಘರ್ಷಣೆ "ನವ್ಯೋತ್ತರ"ದ ಈ ಸಂದರ್ಭದಲ್ಲಿ ನಡೆಯುತ್ತಿದೆ ಅಷ್ಟೇ ಇದೆಲ್ಲ ತಾತ್ಕಾಲಿಕ ಅಡ್ಡಮಳೆ ಯಾವಾಗಲೂ ಸುರಿಯುವುದಿಲ್ಲ. ಅನಂತರ ಜಡಿ ಮಳೆಗಾರಂಭವಾಗುತ್ತದೆ. ನೂತನತೆ - ರಭಸ - ಕಾವು ಇಳಿದ ಮೇಲೆ ಅದು ಸಹ ಸಾಹಿತ್ಯ ಸಾಗರದಲ್ಲಿ ಲೀನವಾಗುತ್ತದೆ.

## ಕ್ರಾಂತಿಕವಿ ಕುವೆಂಪು

೧೯೪೩ರಿಂದ ೧೯೪೯ರವರೆಗೆ ನಡೆದ ಪ್ರಗತಿಶೀಲ ಚಳುವಳಿಯಲ್ಲಿ ನಾನೂ ಮುಖ್ಯ ಪಾತ್ರ ವಹಿಸಿದವನು. ಸಮಾಜಕ್ಕಂಟಿಕೊಂಡ ಕೊಳೆಯನ್ನು ತೊಳೆಯಲು ಬರಹಗಳ ಮೂಲಕ ಪ್ರಯತ್ನಿಸಿದವನು. ಬಡವರನ್ನು, ಶೋಷಿತರನ್ನು, ರೈತರನ್ನು, ಕಾರ್ಮಿಕರನ್ನು, ದಲಿತರನ್ನು ಕುರಿತು ಕಥೆ ಕಾದಂಬರಿ ಬರೆದವನು, ೧೯೪೩-೪೫ ರ ಅವಧಿಯಲ್ಲಿ ಪ್ರಗತಿಶೀಲರೂ ಕೊಂಚ ಗಲಾಟೆ ಮಾಡಿದ್ದುದು ನಿಜ. ನಮ್ಮ ಧ್ಯೆಯಾದರ್ಶನಗಳನ್ನು ತಿಳಿಸಿ ಹೇಳಲು ಸ್ವಲ್ಪ ಕೂಗಿಕೊಳ್ಳಬೇಕಾದುದೂ ಅನಿವಾರ್ಯವಾಗುತ್ತದೆ. ಆದರೆ ೧೯೪೯ರ ತರುವಾಯ ಮಾತ್ರ ನಾವು ಮೌನವಾಗಿ - ಕೃತಿ ರಚನೆಯಲ್ಲಿ ತೊಡಗಿಕೊಂಡೆವು.

ಪ್ರಗತಿಶೀಲ ಚಳುವಳಿಯ ಪುನರಾವರ್ತನೆ ಇದೀಗ ಕಂಡು ಬರುತ್ತಿದೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪ್ರತಿಭಟನೆಯ ಯುಗ ಆರಂಭವಾದುದು ಶ್ರೀ ಕುವೆಂಪು ಅವರಿಂದ. ಆದರೆ ತಾವು ಪ್ರಗತಿಶೀಲ ಕವಿಯೆಂದು ಅವರು ಎಂದೂ ಹೇಳಿಕೊಳ್ಳಲಿಲ್ಲ. ಕವಿ ಯಾವಾಗಲೂ ತನ್ನ ಪರಿಸರದ ಅನುಭವವನ್ನು ಚಿತ್ರಿಸಬೇಕು ಕುವೆಂಪು ಕಾವ್ಯ ಈ ಕೆಲಸವನ್ನು ಯಶಸ್ವಿಯಾಗಿ ನೆರವೇರಿಸಿತು.

"ನಿಜವಾದ ಕಲಾವಿದನಿಗೆ ಸೌಂದರ್ಯದಂತೆ ರೌದ್ರವೂ ಆರಾಧನೆಯ ದೇವತೆಯೇ" ಎಂದರು ಕುವೆಂಪು.

ಕವಿಯ ಹೃದಯವೊಂದು ವೀಣೆ
ಲೋಕವದನು ಮಿಡಿವುದು
ವ್ಯಕ್ತಿತನವೆ ಕವಿಗೆ ಇಲ್ಲ,

ಎಂತೋ ನಾಡಿನೊಡಲನಾಡಿ
ಎಂತುಟಾಸೆಯಹುದೋ ನೋಡಿ
ಎಂತೋ ಜನದ ಮೂಕವಾಣೀ
ಅಂತೆ ತಂತಿ ಮಿಡಿವುದು ಎಂದರು ಕುವೆಂಪು

೧೯೩೦ ರ ದಶಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ ರಭಸದಿಂದ ನಡೆಯುತ್ತಿದ್ದಾಗ ಅದರಿಂದ ಪ್ರೇರಿತರಾದ ಕುವೆಂಪು ಹಲವು ಕ್ರಾಂತಿ ಗೀತೆಗಳನ್ನು ಬರೆದರು.

"ನೂರು ದೇವರನ್ನೆಲ್ಲ ನೂಕಾಚೆ ದೂರ
ಭಾರತಾಂಬೆಯ ದೇವಿ ನಮಗಿಂದು ಪೂಜಿಸು ಬಾರ"
ಎಂದು ಘೋಷಿಸಿದರು.

ಅದೇ ಕಾಲದಲ್ಲಿ ಅವರು ಬರೆದ "ಕಲ್ಕಿ" ಯಂಥ "ಸಮತಾವಾದೀ ಕವಿತೆ" ಯಂತೂ ಸಾವಿರಾರು ತರುಣರನ್ನು ಹೋರಾಟಕ್ಕೆ ತೊಡಗಿಸಿದ್ದು ನಿಜ ಅಂಥ "ಕೆಂಪು ಕವಿತೆ" ಯನ್ನು ಇದುವರೆಗೂ ಇನ್ನಾರೂ ಬರೆಯಲಿಲ್ಲವೆನ್ನುವುದು ನಿಜ.

"ಗುಡಿ ಚರ್ಚು ಮಸೀದಿಗಳ ಬಿಟ್ಟು ಹೊರಬನ್ನಿ
ಬಡತನವ ಬುಡ ಮುಟ್ಟ ಕೀಳಬನ್ನಿ
ಮೌಢ್ಯತೆಯ ಮಾರಿಯನು ಹೊರದೂಡಲೈತನ್ನಿ
ವಿಜ್ಞಾನ ದೀವಿಗೆಯ ಹಿಡಿದು ಬನ್ನಿ"
ಎಂಬ ಹಾಡನ್ನು

"ಸರ್ವರಿಗೆ ಸಮಬಾಳು, ಸರ್ವರಿಗೆ ಸಮಪಾಲು
ಎಂಬ ನವಯುಗವಾಣಿ ಘೋಷಿಸಿದೆ. ಕೇಳಿ
ಯುಗ ಯುಗದ ದಾರಿದ್ರ್ಯ ಭಾರದಿಂಬೆನ್ ಬಾಗಿ
ಗೋಳಿಡುವ ಬಡಜನರೆ ಏಳಿರೈ ಏಳಿ!
ಶ್ರೀಮಂತರಡಿಗಳಡಿ ಹುಡಿಯಲ್ಲಿ ಹೊರಳಾಡಿ
ಕುಸಿದು ಕುಗ್ಗಿದವರೆಲ್ಲ ಸಂತಸವ ತಾಳಿ.
ಕಂಗೆಟ್ಟ ಸೋದರರೆ, ಬರುತಿಹಳು ಕಾಣಿರೈ
ದಾನವರ ಸೀಳಿ ಅದೊ ವಿಪ್ಲವದ ಕಾಳಿ"

ಎಂಬ ರಣಗೀತೆಯನ್ನು ಕುವೆಂಪು ಅವರೇ ಬರೆದರು. ಕಮ್ಯುನಿಸ್ಟರ ಹಲವಾರು ಸಭೆ -ಸಮ್ಮೇಳನಗಳಲ್ಲಿ ಈ ಗೀತೆಯನ್ನು ಹಾಡಿದ್ದಾರೆ ಹಾಡುತ್ತಿದ್ದಾರೆ.

## ಕೆಂಪು ಕಾವ್ಯ

"ನವ್ಯಕವಿ'ಗಳ ನಾಯಕಮಣಿ ಗೋಪಾಲಕೃಷ್ಣ ಅಡಿಗರೂ ಸಹ ೧೯೪೭ ರಲ್ಲಿ 'ಕಟ್ಟುವೆವು ನಾವು' 'ನಾವೆಲ್ಲರೂ ಒಂದೇ ಜಾತಿ' ಯಂಥ ಪ್ರಗತಿಶೀಲ ಕವನಗಳನ್ನು ಬರೆದಿದ್ದರು. ಬೇಂದ್ರೆ, ದಿನಕರ ದೇಸಾಯಿ, ಶಿವರುದ್ರಪ್ಪ, ಕಣವಿ, ಮುಂತಾದವರೂ ಸಹ ಇಂಥ ಅನೇಕ ಸ್ಫೂರ್ತಿ ಗೀತೆಗಳನ್ನು ರಚಿಸಿದ್ದರು.

ಆದರೆ 'ನವ್ಯಕಾವ್ಯ' ಬಂದು ಕವಿತೆ ಕೇವಲ ವೈಯಕ್ತಿಕ ಕಸರತ್ತಾಗಿ, ಸಾಮಾನ್ಯ ಜನರಿಗೆ ತಿಳಿಯದಂಥ ಪ್ರತಿಮೆಗಳ ಸಂಕೇತಗಳ ವಿಚಿತ್ರ ವಸ್ತುವಾಯಿತು.

ಐದಾರು ವರ್ಷಗಳ ಹಿಂದೆ 'ನವ್ಯ'ದ ಸತ್ವ ಕೊನೆಗೊಂಡಿತು. ಪುನಃ ವಾಸ್ತವವಾದೀ ಕಾವ್ಯ ಪ್ರಕಟವಾಗತೊಡಗಿತು ಇದು ಪ್ರಗತಿಶೀಲ ಸಾಹಿತ್ಯದ ಇನ್ನೊಂದು ಘಟ್ಟ 'ಬಂಡಾಯ ಸಾಹಿತ್ಯ' ವೆಂದು ಇದನ್ನು ಕರೆಯಲಾಗುತ್ತಿದೆ. ಹೆಸರು ಬೇರೆಯಾದರೂ ಸಹ ಧ್ಯೆಯೋದ್ದೇಶಗಳಾಗಲಿ, ಸ್ಫೂರ್ತಿಯ ನೆಲೆಗಳಾಗಲಿ ಬೇರೆಯವುಗಳಲ್ಲ.

'ಕಪ್ಪು ಜನರ ಕೆಂಪು ಕಾವ್ಯ' ಎಂಬ ಒಂದು ಕವನ ಸಂಕಲನವೂ ಬಂದಿದೆ. ಈ ಆಂದೋಲನದ ನಾಯಕರಾದ ವಿಜಯ ಪಾಟೀಲ ಮತ್ತು ಮಂಗ್ಳೂರ ವಿಜಯ ಅವರು ಈ ಸಂಕಲನ ಪ್ರಕಟಿಸಿದ್ದಾರೆ. "ಇಂದಿನ ಯುವ ಜನಾಂಗದ ಹೊಸ ಸಾಹಿತ್ಯಕ ಧೋರಣೆ" ಯನ್ನು ವ್ಯಕ್ತಪಡಿಸುವ ಈ ಕವನ ಸಂಕಲನ ಅನೇಕ ದೃಷ್ಟಿಗಳಿಂದ ಮಹತ್ವದ್ದಾಗಿದೆ. ಗೋವಿಂದಯ್ಯ, ಸಿದ್ದಲಿಂಗಯ್ಯ, ಮಹಾಬಳೇಶ್ವರ, ಇಂದೂಧರ, ಪಂಡಿತಾರಾಧ್ಯ, ಅಶೋಕ ಶೆಟ್ಟರ, ಚ, ಸರ್ವಮಂಗಳ, ಡಿ. ವಿಜಯ ಬಾಬಾಜಾನ ಅತ್ತಾರ, ಅಲ್ಲಮಪ್ರಭು, ಮೊದಲಾದ ಬಿಸಿ ನೆತ್ತರಿನ ಯವಕ ಯುವತಿಯರ ಹರಿತವಾದ ಹಾಡುಗಳು ಇಲ್ಲಿವೆ. ರಮೇಶ ಧಾನವಾಡಕರರು ಪ್ರಕಟಿಸಿದ 'ತಾಪದಕಿಡಿ' ಎಂಬ ಸಂಕಲನದಲ್ಲೂ 'ಸೌಜನ್ಯ'ರು ಪ್ರಕಟಿಸಿದ 'ಪರಿಸರ ಕಾವ್ಯ'ದಲ್ಲೂ ಇದೇ ಬಗೆಯ 'ಕೆಂಪು ಕವನ'ಗಳಿವೆ ರಂಜಾನದರ್ಗಾ ಧಾನವಾಡಕರ, ನಿಂಗಣ್ಣಸಣ್ಣಕ್ಕಿ, ಚಂದ್ರಶೇಖರ ಅಕ್ಕಿ, ಮಹಲಿಂಗ ಮಂಗಿ, ಬಾಳೇಶ ಲಕ್ಷೆಟ್ಟಿ ಮೊದಲಾದ ಕವಿಗಳು ಇಲ್ಲಿ ಕಾಣಿಸುತ್ತಾರೆ.

ಇವರೆಲ್ಲರೂ ರಚಿಸುತ್ತಿರುವುದು ನಿಜಕ್ಕೂ 'ಕೆಂಪು ಕಾವ್ಯ' 'ಸಾಹಿತ್ಯ ಅಗ್ಗದ ಪ್ರಚಾರ ಚೀಟಿಯಾಗಬಾರದು' ಎಂಬ ಅರಿವೂ ಇವರಿಗಿದೆ. "ಕಲೆಯಲ್ಲಿ ರಾಜಕಾರಣವು ತಕ್ಷಣತೆಯನ್ನು ಮೀರಿ ಇಡೀ ಜೀವನ ದರ್ಶನವನ್ನಾವರಿಸಿಕೊಂಡಾಗ ಮಾತ್ರ ಶ್ರೇಷ್ಟತೆ ಹುಟ್ಟುತ್ತದೆ", ಎಂಬ ನಂಬುಗೆಯೂ ಇವರದಾಗಿದೆ.

"ಪ್ರಜಾಪ್ರಭುತ್ವದ ರಕ್ಷಣೆ ಹಾಗೂ ವಿಸ್ತರಣೆಗೆ

ಶೋಷಿತ ಜನತೆಯ ಪರವಾದ ಹೋರಾಟಕ್ಕೆ

ಖಡ್ಗವಾಗಲಿ ಕಾವ್ಯ ಜನರ ನೋವಿಗೆ ಮಿಡಿವ ಪ್ರಾಣ ಮಿತ್ರ"

ಎಂಬುದು ಇವರ ಘೋಷಣೆ 'ಪ್ರಗತಿಶೀಲ' ರ ಮತ್ತು ಪ್ರಗತಿ ಪಂಥ'ದವರ ಘೋಷಣೆಯೂ ಇದೇ ಬಗೆಯದಾಗಿದ್ದಿತು.

ಎಂಟು ನೂರು ವರ್ಷಗಳ ಹಿಂದೆ ಸಾಮಾಜಿಕ ಕ್ರಾಂತಿಗಾಗಿ ಶಿವಶರಣರು ವಚನಗಳನ್ನು ಬಳಸಿಕೊಂಡರು. ಅದಕ್ಕೂ ಮೊದಲೇ ಆದಿಕವಿ ಪಂಪನೂ ಸಹ ಅಸಮಾನತೆಯನ್ನು ಖಂಡಿಸಿದ್ದನೆಂಬುದನ್ನು ನಾವು ಗಮನಿಸಬೇಕು.

ಕುಲಂಕುಲ ಮಲ್ತು

ಛಲಂಕುಲಂ

ಅಣುಗುಣಂ ಕುಲಂ

ಅಭಿಮಾನಮೊಂದೆ ಕುಲಂ

ಎಂದು ಪಂಪಕವಿ ಕರ್ಣನ ಬಾಯಿಂದ ಹೇಳಿಸಿದ ಹರಿಹರ, ರಾಘವಾಂಕ ಸರ್ವಜ್ಞರ ಮೂಲಕ, ದಾಸರ ಮೂಲಕ ಆ ಹೋರಾಟ ಮುಂದುವರಿದುಕೊಂಡು ಬಂದಿತು.

## ಕತ್ತಲ ಜಗತ್ತಿನಿಂದ

ನವ್ಯಕಾವ್ಯದಿಂದಾಗಿ ಸಾಮಾನ್ಯ ಜನರಿಂದ ದೂರವಾಗಿದ್ದ ಕನ್ನಡ ಕವಿತೆಯನ್ನು ಮತ್ತೆ ಜನರೆಡೆಗೆ ಕರೆದು ತಂದ ಶ್ರೇಯಸ್ಸು ಇಬ್ಬರು ಚಂದ್ರಶೇಖರರಿಗೆ ಸಲ್ಲುತ್ತದೆ. ಒಬ್ಬರು ಪಾಟೀಲ, ಇನ್ನೊಬ್ಬರು ಕಂಬಾರ, ಕಳೆದ ಹತ್ತು ವರ್ಷಗಳಿಂದೀಚೆಗೆ ಪಾಟೀಲರು ಹೋರಾಟದ ಕವಿಯೆಂದೇ ಖ್ಯಾತರಾಗಿದ್ದಾರೆ. ಒಕ್ಕೂಟದ ರೂಪದಲ್ಲಿ ಶೂದ್ರರದೊಂದು ಸಂಘವನ್ನು ಅವರು ಕಟ್ಟಿದ್ದರು. ಅದರ ನಂತರ ಬೀದಿ ನಾಟಕ, ಬೀದಿ ಭಾಷಣಗಳ ಮೂಲಕ ಆಂದೋಲನ ಹೂಡಿದರು. ಅದೇ ಸಮಯದಲ್ಲಿ ದಕ್ಷಿಣ ಕರ್ನಾಟಕದಲ್ಲಿ ದೇವನೂರು ಮಹಾದೇವ ಮತ್ತು ಸಿದ್ದಲಿಂಗಯ್ಯರಂಥ ದಲಿತಕವಿ - ಕತೆಗಾರರು ಬೆಳಿಗ್ಗೆ ಬಂದರು. 'ಕತ್ತಲ ಜಗತ್ತಿನಿಂದ ಬಂದ ಈ ಇಬ್ಬರು ಯುವಕರಿಂದ ನಮ್ಮ ಸಾಹಿತ್ಯ ಕ್ಷೇತ್ರದಲ್ಲಿ ಹೊಸ ಶಕ್ತಿಯ ಸಂಚಾರವಾಯಿತೆಂಬುದು ನಿಜ.

ದೇವನೂರು ಮಹಾದೇವರು ಹೇಳುತ್ತಾರೆ: "ನಮ್ಮ ಮಾತುಗಳು ತಮ್ಮ ಮಾತನ್ನು ನಿಲ್ಲಿಸಿ ಕ್ರಿಯೆ ಮಾತಾಡುವದಾದಲ್ಲಿ ಸಮಾಜವಾದ, ಸಮತಾವಾದಗಳು ಚಿಗುರೊಡೆಯಬಹುದು.

"ಇಂಥ ಒಂದು ಆಂದೋಲನದಿಂದ ಮಾತ್ರವೇ ಅಸ್ಪಶ್ಯತೆಯ ಕತ್ತಲು ಕೊನೆಯಾಗಬಹುದು. ಜಾತೀಯ ಗೋಡೆಗಳು ಕುಸಿಯಬಹುದು. ವರ್ಗದ ಪಿರಮಿಡ್ಡು ನೆಲಸಮವಾಗಬಹುದು. ಮನುಷ್ಯ ಮನುಷ್ಯರ ನಡುವೆ ಇರುವ ದ್ವೇಷ - ವಿಷಕ್ಕೆ ಬದಲಾಗಿ ಪ್ರೀತಿ ಹಾಲು ಉಕ್ಕಬಹುದು. ಈ ರೂಪಾಂತರವನ್ನು ಹಿಡಿಯುವ ಕಲೆಯು ತಾನೂ ಹೊಸ ಹುಟ್ಟನ್ನು ಪಡೆದು ಹೊಸ ಮನುಷ್ಯನ ಹುಟ್ಟಿಗೂ ಕಾರಣವಾಗುತ್ತದೆ".

“ಇಲ್ಲಿಯವರೆಗಿನ ಸಾಹಿತ್ಯದಲ್ಲಿ ಕಾಣದ ಶೋಷಿತ ನಡತೆಯ ಬದುಕನ್ನು ಕುರಿತ ಕೃತಿಗಳನ್ನು ಪ್ರಕಟಿಸಬೇಕು ಎಂಬುದಷ್ಟೇ ನಮ್ಮ ಗುರಿಅಲ್ಲ ಈ ಜನತೆ ನಡೆಸುತ್ತಿರುವ ವಿಮೋಚನೆಯ ಹೋರಾಟಕ್ಕೆ ಬೆಂಬಲ ಕೊಡುವುದೂ ಪಾಲುಗೊಳ್ಳುವುದೂ ಅಗತ್ಯವಾಗಿದೆ.” ಎನ್ನುತ್ತಾರೆ ಡಾ. ಸಿದ್ದಲಿಂಗಯ್ಯ.

“ಬರವಣಿಗೆಯಿಂದ ಮಾತ್ರವೇ ಬಂಡಾಯ ಅಸಾಧ್ಯ, ದೈಹಿಕವಾಗಿ ಬೀದಿಗಿಳಿದಾಗ ಮಾತ್ರವೇ ಬದಲಾವಣೆ ಸಾಧ್ಯ.” ಎಂದು ಆಂಧ್ರ ಕವಿಶ್ರೀ ಹೇಳಿದ್ದಾರೆ.

ಕಾವ್ಯವೂ ಸಾಹಿತ್ಯವೂ ಕ್ರಾಂತಿಗೆ ಪ್ರೇರಣೆ - ಪ್ರಚೋದನೆ ನೀಡಬಲ್ಲುದು. ಆದರೆ ಕ್ರಾಂತಿ ನಡೆಯುವುದು ಮಾತ್ರ ಕಾರ್ಮಿಕ ವರ್ಗದಿಂದ, ಶ್ರಮ ಜೀವಿಗಳಿಂದ ಕವಿಗಳು ಇವರ ಭುಜಕ್ಕೆ ಭುಜ ಹಚ್ಚಿ ನಿಂತು ಹೋರಾಡಬೇಕಾಗುತ್ತದೆ. ಆದರೆ ಸದ್ಯದ ಪರಿಸ್ಥಿತಿಯಲ್ಲಿ ಈ ಕವಿಗಳೆಲ್ಲರೂ ಪ್ರತ್ಯೇಕ ಹೋರಾಟಕ್ಕಿಳಿಯಲಾರರು. ಅನೇಕರಿಗೆ ಅವರದೇ ಆದ ಇತಿ ಮಿತಿಗಳಿವೆ.

## ಸಾಹಿತ್ಯ - ಹೋರಾಟ

“ನಾನು ಖಂಡಿತ ಕ್ರಾಂತಿಕಾರನಲ್ಲ. ಆದರೆ ಕ್ರಾಂತಿಗೆ ಆಸೆ ಪಡುತ್ತ, ಈ ವ್ಯವಸ್ಥೆಯಲ್ಲಿ ನೌಕರಿ ಮಾಡುತ್ತ ಕೊನೆಯ ಪಕ್ಷ ಸಾಹಿತ್ಯ ಕೃತಿಗಳಲ್ಲಾದರು ನನಗೆ ಸಾಧ್ಯವಾದಷ್ಟು ಪ್ರಾಮಾಣಿಕವಾಗಿರಲು ಪ್ರಯತ್ನಿಸುವವನು...... ವ್ಯವಸ್ಥೆಯ ಜೊತೆಗೂ ಕೆಲಸ ಮಾಡುತ್ತ ಸರ್ಕಾರದಿಂದ ಸಂಬಳ ಪಡೆಯುತ್ತ, ಅಷ್ಟಿಷ್ಟಾದರೂ ಪ್ರಜಾ ತಂತ್ರ ಹಿಗ್ಗುವಂತೆ ಕೆಲಸಮಾಡಬಹುದೆಂಬ ನಿಲುವಿನವನು” ಎನ್ನುತ್ತಾರೆ. ಡಾ|| ಯು.ಆರ್. ಅನಂತಮೂರ್ತಿ ಕಳೆದ ೫೦ ವರ್ಷಗಳಿಂದ ಕನ್ನಡದಲ್ಲಿ ಮಾತ್ರವಲ್ಲ, ಭಾರತದ ಇನ್ನಿತರ ಭಾಷೆಗಳಲ್ಲೂ ಸಹ ವಾಸ್ತವತೆಯ ಹಾದಿ ಹಿಡಿದು ಬಂದವರೆಲ್ಲರು ಇದೇ ನಿಲುಮೆಯವರು. ಪ್ರಾಧ್ಯಾಪಕರಾಗಿ ನೌಕರಿ ಮಾಡುತ್ತ ಸಂಬಳದಿಂದ ಜೀವಿಸುವವರೆಲ್ಲರು ಇದೇ ನಿಲುಮೆಗೇ ಅಂಟಿಕೊಳ್ಳಬೇಕಾದುದು ಅನಿವಾರ್ಯ.

ಮ್ಯಾಂಗ್ಸೀಂ ಗಾರ್ಕಿಯಂತೆ ಮಾವೋರಂತೆ ವರ್ಗಸಮರಕ್ಕೆ ಪ್ರತ್ಯಕ್ಷರಾಗಿ ಧುಮುಕಿದವರು ನಮ್ಮಲ್ಲಿ ಇಲ್ಲವೇ ಇಲ್ಲ. ಪ್ರಗತಿಶೀಲ ಚಳವಳಿಯ ನನ್ನ ಮಿತ್ರರೊಬ್ಬರು ಕಮ್ಯುನಿಸ್ಟ್ ಪಕ್ಷದಲ್ಲಿ ಹತ್ತು ವರ್ಷ ಇದ್ದವರು ಆನಂತರ ಅದನ್ನು ತ್ಯಜಿಸಿ ಒಂದು ಸಾಹಿತ್ಯಕ್ಕೆ ಅಂಟಿಕೊಂಡರೆಂಬುದನ್ನು ಎಲ್ಲರು ನೆನಪಿನಲ್ಲಿಟ್ಟುಕೊಳ್ಳಬೇಕು. ಶ್ರಮಜೀವಿಗಳ ಆಂದೋಲನದಲ್ಲಿ ಭಾಗವಹಿಸಿದ್ದ ಅವರು ಆನಂತರ ಅದರಿಂದ ದೂರ ಸರಿಯಲು ಕಾರಣವೇನಿದ್ದೀತು? ಕಮ್ಯುನಿಸ್ಟ್ ಪಕ್ಷ ಬಿಟ್ಟ ಬಳಿಕ ಅವರು ಬಂಡವಾಳವಾದಿಯೂ ಆಗಲಿಲ್ಲ. ಸಮಾಜವಾದದ ವಿರೋಧಿಯೂ ಆಗಲಿಲ್ಲ. ನಿಜ, ಆದರೆ ಪಾರ್ಟಿಯನ್ನು ಬಿಟ್ಟು ಬಂದರಲ್ಲ?: ಏಕೆ? ಎಂದು ಯೋಚಿಸಬೇಕು.

ಎಡಪಂಥೀಯರೆಲ್ಲ ಒಂದುಗೂಡಿ ಹೋರಾಟ ನಡೆಸುವುದೂ ಸುಲಭವಲ್ಲ. ಎಡ ಪಂಥೀಯರಲ್ಲಿಯೇ ಹಲವು ಬಲ ಪಂಥೀಯರೂ ಇದ್ದಾರೆ. ಬಂಡವಾಳ ಶಾಹಿಗಳಿಂದ ರಹಸ್ಯವಾಗಿ ಹಣ ಪಡೆಯುತ್ತ, ಸಮಾಜವಾದೀ ಚಳುವಳಿಗೆ ಒಳಗೊಳಗೇ ಸುರಂಗ ಹಾಕುವವರು ಇದ್ದಾರೆ. ಕಳೆದ ನಲವತ್ತು ವರ್ಷಗಳಿಂದ ಇವರೆಲ್ಲರನ್ನು ಚೆನ್ನಾಗಿ

ಬಲ್ಲ ನನಗೆ ಇವರ ನಿಜ ಸ್ವರೂಪ ಗೊತ್ತಿದೆ. ಹೊಸ ಹುರುಪಿನ ಅನುಭವಿಕರಿಗೆ ಇದೆಲ್ಲ ಗೊತ್ತಾಗುವದಿಲ್ಲ. ಬಂಡಾಯ ಸಂಘಟನೆಯಲ್ಲೂ ಸೇರಿಕೊಂಡು ಇವರು ಅದನ್ನು ಹಾಳುಮಾಡಲು ಯತ್ನಿಸುತ್ತಾರೆ. ಇದರ ಅರಿವು ಪಾಟೀಲರಿಗೂ ಇದೆ. "ಬಂಡಾಯ ಸಾಹಿತ್ಯ ಸಂಘಟನೆಯಂಥ ಸಾಮೂಹಿಕ ಚಳವಳಿಗೆ ದಲಿತ ಶಕ್ತಿಯೇ ನಾಯಕತ್ವ ವಹಿಸಬೇಕು" ಎಂದು ಪಾಟೀಲರೇ ಹೇಳಿದ್ದಾರೆ.

## ಕ್ರಾಂತಿಕಾರಕ ಕೃತಿಗಳು

ದೇವನೂರು ಮಹಾದೇವರು ಕಲೆಯದೃಷ್ಟಿಯಿಂದಲೂ ಶ್ರೇಷ್ಠವಾದ ಸಣ್ಣಕತೆಗಳನ್ನು ಬರೆದಿದ್ದಾರೆ. ಅವರ 'ಮಾರಿಕೊಂಡವರು' 'ಗ್ರಸ್ತರು' 'ಒಂದು ದಹನದ ಕಥೆ' 'ಡಾಂಬರು ಬಂದುದು' 'ಮೂಡಲ ಸೀಮೇಲಿ' ಮುಂತಾದ ಕತೆಗಳು ೭೦ರ ದಶಕದ ಅತ್ಯುತ್ತಮ ಕಥೆಗಳು. ತಮ್ಮದೇ ಆದ ಒಂದು ಶೈಲಿಯನ್ನು ಅವರು ರೂಪಿಸಿಕೊಂಡಿದ್ದಾರೆ. ಅವರ ಭಾಷೆಯೂ ಶಕ್ತಿ ಪೂರ್ಣವಾದದ್ದು. ಬೇರೆಯಾರೂ ಅವರಂತೆ ಬರೆಯಲಾರರು.

ದಲಿತರ ಅನಿಸಿಕೆಗಳನ್ನು ಹಾಡುಗರು ರೂಪದಲ್ಲಿ ಪ್ರಕಟಿಸಿ ಕನ್ನಡ ಕಾವ್ಯಕ್ಕೆ ಹೊಸ ತಿರುವು ಕೊಟ್ಟ ಕೀರ್ತಿ ಡಾ. ಸಿದ್ಧಲಿಂಗಯ್ಯನವರಿಗೆ ಸಲ್ಲುತ್ತದೆ. ಅವರ 'ಹೊಲೆಮಾದಿಗರ ಹಾಡು' ಮತ್ತು ಸಾವಿರಾರು ನದಿಗಳು' ಎಂಬ ಕವನ ಸಂಕಲನಗಳು ಕಳೆದ ದಶಕದ ಕ್ರಾಂತಿಕಾರಕ ಕೃತಿಗಳು.

"ಒಪ್ಪೊತ್ತಿನ ತುತ್ತಿಗಾಗಿ ತತ್ತರಿಸುವ ಮೈಗಳನ್ನು
ಸುಪ್ಪತ್ತಿಗೆ ಮಾಡಿ ಮೆರೆವ ದರಬಾರಿನ ಧೀರರೆ
ಘೋರ ಹೆರಿಗೆ ನೋವುಗಳಿಗೆ ಬಂಗಾರದ ಭರವಸೆಗಳ
ಕೊಟ್ಟು ಕಾಲನೂಕುವಂಥ ಅಧಿಕಾರದ ಮಿಂಡರೆ
ಬಡಜನಗಳ ಗುಂಡಿಗೆಗಳ ಇಟ್ಟಿಗೆಗಳ ಗಟಗಟಿ ಮಾಡಿ

ಸೌಧಗಳನು ಕಟ್ಟುವಂಥ ಚುನಾವಣೆಯ ವೀರರೆ
ಇತಿಹಾಸದ ಕತ್ತಲೆಯಲಿ ಕಾಣದಾದ ಸತ್ಯಗಳನು
ಸುಟ್ಟು ಬೂದಿಮಾಡುವಂಥ ಸತ್ಯ ಹರಿಶ್ಚಂದ್ರರೆ

ಭಾಷಣಗಳ ಬಡಿಸಿದಿರಿ ಘೋಷಣೆಗಳ ಕುಡಿಸಿದಿರಿ
ಸಂಕಟಗಳ ಕಂಪನಕ್ಕೆ ಕೊನೆಯಿಲ್ಲದೆ ಹೇಳಿರಿ
ನಿಮ್ಮ ಬೇಟೆಯುತ್ಸವದಲಿ ಕುರಿಗಳಾಗಿ ಸತ್ತ ಜನರು
ಬಂದಿರುವನು ಹುಲಿಗಳಾಗಿ ಗರ್ಜನೆಯನುಕೇಳಿರಿ".

ಎಂಬ ಅವರ ಹಾಡು, ಶೋಷಕರನ್ನು ನಡುಗಿಸುವ ಗುಡುಗಿನಂತಿವೆ. ೫೦ ವರ್ಷಗಳ ಹಿಂದೆ ಕುವೆಂಪು ಅವರು ಬರೆದ 'ಕಲ್ಕಿ' ಯನ್ನು ಇದು ನೆನಪಿಗೆ ತರುತ್ತದೆ.

## ಕಥೆ – ಕಾದಂಬರಿ

ಇಂದು ಕನ್ನಡದಲ್ಲಿ ಕಥೆ, ಕಾದಂಬರಿ ಬರೆಯುವವರಿಗಿಂತ ಕವಿತೆ ಬರೆಯುವವರ ಸಂಖ್ಯೆಯೇ ದೊಡ್ಡದು. ರಂಜಾನದರ್ಗಾ, ಹಿಂಗಮಿರೆ, ಸರಜೂಕಾಟಕರ, ಸತೀಶ ಕುಲಕರ್ಣಿ, ದೇಶಪಾಂಡೆ ಸುಬ್ಬರಾಯ, ಕೆ. ಎಸ್. ಶರ್ಮ, ಚೆನ್ನಣ್ಣ ವಾಲೀಕಾರ, ಪುಂಡಲೀಕ ಪಾಟೀಲ ಪಿ. ವಿ .ವಜ್ರಮಟ್ಟಿ, ರಮೇಶ ಧಾನವಾಡಕರ, ನಾ. ಮೊಗಸಾಲೆ, ವೀರಭದ್ರಪ್ಪ, ಪಂಡಿತಾರಾಧ್ಯ, ಅಲ್ಲಮಪ್ರಭು ಬೆಟ್ಟದೂರು, ಬಾಳೇಶ ಲಕ್ಷೆಟ್ಟಿ, ಶಂ.ಗು. ಬಿರಾದಾರ, ಧರಣೇಂದ್ರ ಕುರಕುರಿ, ಚಂದ್ರಶೇಖರ ಅಕ್ಕಿ, ಎಸ್.ಎಸ್.ಹಿರೇಮಠ, ಮಹಲಿಂಗಮಂಗಿ, ವಿಜಯಪಾಟೀಲ, ಚ.ಸರ್ವಮಂಗಳ, ಡಿ.ವಿಜಯ. ಅಶೋಕ್ ಶೆಟ್ಟರ, ಸಿದ್ದಲಿಂಗದೇಸಾಯಿ, ಇಂದೂಧರ ಹೊನ್ನಾಪುರ, ಗವಿಸಿದ್ಧ ಬಳ್ಳಾರಿ, ಗೋವಿಂದಯ್ಯ ಮತ್ತು ನೂರಾರು ಜನ ಸಮರ್ಥರಾದ ಕವಿಗಳು ನಮ್ಮಲ್ಲಿದ್ದಾರೆ.

ಉತ್ತಮ ತರಗತಿಯ ಕಥೆ- ಕಾದಂಬರಿಗಳ ಮಾತ್ರ ಹೆಚ್ಚಾಗಿ ಬರುತ್ತಲಿಲ್ಲ. ಇತ್ತೀಚೆಗೆ ಅನಂತಮೂರ್ತಿಯವರ 'ಅವಸ್ಥೆ', ಚಿತ್ತಾಲರ 'ಶಿಕಾರಿ', ಶಾಂತಿನಾಥ ದೇಸಾಯಿಯವರ 'ಸೃಷ್ಟಿ', ವೆಂಕಟೇಶಮೂರ್ತಿಯವರ 'ತಾಪಿ', ರಾವಬಹಾದ್ದೂರರ "ಗೌಡರ ಕೋಣ', ಕಂಬಾರರ 'ಕರಿಮಾಯಿ, ಬೆಳಗಲಿ ಅವರ 'ಸೀಮೆಗಳು', ತರಾಸುರವರ 'ನಾಲ್ಕು + ನಾಲ್ಕು- ಒಂದು', ಭೈರಪ್ಪನವರ 'ಪರ್ವ'ಗಳಂಥ ಒಳ್ಳೆಯ ಕಾದಂಬರಿಗಳು ಬಂದಿವೆ. ಕಾಳೇಗೌಡ ನಾಗವಾರ, ಶಾಂತಾದೇವಿ ಕಣವಿ, ಬೆಸಗರಹಳ್ಳಿ ರಾಮಣ್ಣನವರ ಕಥಾ ಸಂಗ್ರಹಗಳು, ಶ್ರೇಷ್ಠ ದರ್ಜೆಯ ಕಥೆಗಳನ್ನು ಕೊಟ್ಟಿವೆ.

ವಾರ ಪತ್ರಿಕೆಗಳ ಧಾರಾವಾಹಿಗಳ ಮೂಲಕ ಕಾದಂಬರಿಕಾರ್ತಿಯರನೇಕರು ಬೆಳಕಿಗೆ ಬಂದಿದ್ದಾರೆ. ಅವರಲ್ಲಿ ಹಲವರು ಜನಪ್ರಿಯತೆಯನ್ನು ಪಡೆದಿದ್ದಾರೆ. ಅವಸರದ ಬರವಣಿಗೆ ತ್ಯಜಿಸಿ ಜೀವನವನ್ನು ಪಡೆದಿದ್ದಾರೆ. ತ್ಯಜಿಸಿ ಜೀವನವನ್ನು ಆಳವಾಗಿ ಅಭ್ಯಸಿಸಿ, ಜೀವಂತಪಾತ್ರಗಳನ್ನು ವಾಸ್ತವ ದೃಶ್ಯಗಳನ್ನು ಚಿತ್ರಿಸುವುದರತ್ತ, ನಮ್ಮ ಸೋದರಿಯರು ಗಮನಿಸಬೇಕೆಂದು ಅವರನ್ನು ಕೇಳಿಕೊಳ್ಳುತ್ತೇವೆ.

## "ಸಮುದಾಯ"

"ಸಮುದಾಯ'ದ ಕಲಾವಿದರು ತಮ್ಮ ಕ್ರಾಂತಿಕಾರಕ ನಾಟಕಗಳನ್ನಾಡುತ್ತಾ ಕರ್ನಾಟಕದಲ್ಲೆಲ್ಲ ಯಾತ್ರೆ ಮಾಡಿದುದು ಇತ್ತೀಚೆಗಿನ ಇತಿಹಾಸದಲ್ಲಿ ಮಹತ್ವದ ಘಟ್ಟ, ಓದು ಬರಹ ಅರಿಯದ ನಮ್ಮ ಹಳ್ಳಿಗರನ್ನೂ ಬಡ ಜನರನ್ನೂ ಜಾಗೃತಗೊಳಿಸಲು 'ಸಮುದಾಯ' ದಂಥ ಪ್ರಾಮಾಣಿಕ ಪ್ರಯತ್ನಗಳು ಎಲ್ಲ ಕಡೆಗಳಲ್ಲೂ ನಡೆಯಬೇಕು.

ಮಾನವನ ಭವಿಷ್ಯದ ಬಗೆಗೆ ಪೂರ್ಣ ನಂಬುಗೆಯಿರಿಸಿಕೊಂಡು ನಾವು ಮುಂದುವರಿಯಬೇಕು. ನಮ್ಮಿಂದಮಾತ್ರವೇ ಲೋಕದ ಉದ್ಧಾರ ಎಂಬ ಸಂಕುಚಿತ ಭಾವನೆಯು ಯಾರಿಗೂ ಸಲ್ಲದು ತಮತಮಗೆ ಸರಿಯೆನಿಸಿದ ರೀತಿಯಲ್ಲಿ ಅನೇಕರು, ಅನೇಕ ಸಂಸ್ಥೆಗಳು ಮಾನವನ ಕಲ್ಯಾಣಕ್ಕಾಗಿ ಶ್ರಮಿಸುತ್ತಿವೆ "ನೂರು ಹೂಗಳು ಅರಳಲಿ" ಎಂಬುದೇ ಸರಿಯಾದ ನಿಲುಮೆ.

ಕನ್ನಡ ಸಾಹಿತ್ಯ ಪರಿಷತ್ತು ಈ ದಿಸೆಯಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿದೆ. ಇನ್ನಿತರ ಸಂಸ್ಥೆಗಳೂ ತಮ್ಮಿಂದಾಗುವುದನ್ನು ಮಾಡಲು. ಆದರೆ ಪರಿಷತ್ತನ್ನು ವಿರೋಧಿಸುವ ಅಸಹಕಾರದ ನಿಲುಮೆಯನ್ನು ಮಾತ್ರ ಯಾರೂ ತಳೆಯಬಾರದು.

## ಆಲೂರರ ವರ ಜನ್ಮ ಶತಮಾನೋತ್ಸವ

ಮರಾಠಿಮಯವಾಗಿದ್ದ ಉತ್ತರ ಕರ್ನಾಟಕದ ಕನ್ನಡಿಗರನ್ನು ತಮ್ಮ ಲೇಖನಗಳಿಂದಲೂ, ಭಾಷಣಗಳಿಂದಲೂ 'ಜಯ ಕರ್ನಾಟಕ' ಪತ್ರಿಕೆಯಿಂದಲೂ ಜಾಗೃತಗೊಳಿಸಿ, ಈ ಶತಮಾನದ ಆದಿ ಭಾಗದಲ್ಲಿ ಕನ್ನಡ ಚಳವಳಿಯ ಮಹಾ ಮುಖಂಡರಾಗಿ ದುಡಿದು ಅಮರರಾದ ಆಲೂರುವೆಂಕಟರಾಯರ ಜನ್ಮ ಶತಮಾನೋತ್ಸವವು ಈ ವರ್ಷದ ಜುಲೈ ತಿಂಗಳಿನಿಂದ ಮುಂದಿನ ವರ್ಷ ಜೂನ್ ತಿಂಗಳಿನವರೆಗೆ ಕರ್ನಾಟಕದಲ್ಲೆಲ್ಲ ವಿಜೃಂಭಣೆಯಿಂದ ಜರುಗಲಿದೆ. ಅದಕ್ಕಾಗಿ ಹಲವಾರು ಸಮಿತಿಗಳು ರಚಿತವಾಗಿದೆ. ಕನ್ನಡ ಸಾಹಿತ್ಯ ಪರಿಷತ್ತು ಸಹ ಒಂದು ಕೇಂದ್ರ ಸಮಿತಿ ರಚಿಸಿ ಈ ಬಗೆಗೆ ಸಿದ್ಧತೆ ಮಾಡಿಕೊಳ್ಳುತ್ತಿದೆ.

## ಹಳಕಟ್ಟಿಯವರ ಜನ್ಮ ಶತಮಾನೋತ್ಸವ

ದಿ|| ಫ.ಗು. ಹಳಕಟ್ಟಿಯವರು, ದಿ|| ಆಲೂರವರೂ ಓರಗೆಯವರು ಒಂದೇ ಸಂವತ್ಸರದಲ್ಲಿ ಜನಿಸಿದವರು. ವಚನ ಸಾಹಿತ್ಯವನ್ನು ಬೆಳಕಿಗೆ ತರುವುದರ ಮೂಲಕ ಹಳಕಟ್ಟಿಯವರು ಕನ್ನಡಕ್ಕೆ ಸಲ್ಲಿಸಿದ ಸೇವೆ ಚಿರಸ್ಮರಣೀಯ. ಮರಾಠಿಮಯವಾಗಿದ್ದ ಪ್ರದೇಶಗಳಲ್ಲಿ ಕನ್ನಡ ಶಾಲೆಗಳನ್ನು ಸ್ಥಾಪಿಸಲು ಅವರು ಪ್ರಯತ್ನ ಪಟ್ಟಿದ್ದರು. ಅವರು ಬದುಕಿ ಬಾಳಿ ಕೊನೆಯುಸಿರೆಳೆದ ವಿಜಾಪುರದಲ್ಲಿ ಅವರಿಗಾಗಿ ಸ್ಮಾರಕ ರಚಿಸಲು ಸಿದ್ಧತೆ ನಡೆಯುತ್ತಿದೆ. ಕನ್ನಡ ಸಾಹಿತ್ಯ ಪರಿಷತ್ತು ಸಹ ಒಂದು ಕೇಂದ್ರ ಸಮಿತಿ ರಚಿಸಿ ಸಿದ್ಧತೆ ಮಾಡಿಕೊಳ್ಳುತ್ತಿದೆ. ದಿ|| ಆಲೂರರ ಜನ್ಮ ಶತಮಾನೋತ್ಸವದಂತೆಯೇ ದಿ| ಹಳಕಟ್ಟಿಯವರ ಜನ್ಮ ಶತಮಾನೋತ್ಸವನ್ನು ಸಾಹಿತ್ಯ ಪರಿಷತ್ತು ಇನ್ನಿತರ ಸಂಸ್ಥೆಗಳೂ ವಿಶಿಷ್ಟವಾದ ರೀತಿಯಲ್ಲಿ ಜರುಗಿಸಬೇಕು.

**ಜಯ ಕರ್ನಾಟಕ, ಜಯ ಹಿಂದ್.**

# ಅನುಬಂಧ – 2

ಬಸವರಾಜ ಕಟ್ಟೀಮನಿ ಅವರ ಸಾಹಿತ್ಯ ಸೂಚಿ –

| ಕೃತಿ | | ಪ್ರಕಟಣೆಯ ವರ್ಷ |
|---|---|---|
| **ಕಾದಂಬರಿಗಳು** | | |
| 1) ಸ್ವಾತಂತ್ರ್ಯದೆಡೆಗೆ | – | 1944 |
| 2) ಮಾಡಿ ಮಡಿದವರು | – | 1950 |
| 3) ಜ್ವಾಲಾಮುಖಿಯ ಮೇಲೆ | – | 1951 |
| 4) ಬೀದಿಯಲ್ಲಿ ಬಿದ್ದವಳು | – | 1952 |
| 5) ಮೋಹದ ಬಲೆಯಲ್ಲಿ | – | 1952 |
| 6) ಖಾನಾವಳಿ ನೀಲಾ | – | 1952 |
| 7) ಜರತಾರಿ ಜಗದ್ಗುರು | – | 1953 |
| 8) ಮಣ್ಣು ಮತ್ತು ಹೆಣ್ಣು | – | 1953 |
| 9) ಜನಿವಾರ ಮತ್ತು ಶಿವದಾರ | – | 1954 |
| 10) ನೀ ನನ್ನ ಮುಟ್ಟಬೇಡ | – | 1954 |
| 11) ಬಂಗಾರದ ಜಿಂಕೆಯ ಹಿಂದೆ | – | 1954 |
| 12 ನಾನೂ ಪೋಲೀಸನಾಗಿದ್ದೆ | – | 1954 |
| 13) ಬಲೆಯ ಬೀಸಿದರು | – | 1954 |
| 14) ಗೋವಾ ದೇವಿ | – | 1955 |
| 15) ಗಿರಿಯ ನವಿಲು | – | 1956 |
| 16) ಪಾತರಗಿತ್ತಿ | – | 1956 |
| 17) ಸಮರ ಭೂಮಿ (ನರಗುಂದ ಬಂಡಾಯ) | – | 1956 |
| 18) ಸಾಕ್ಷಾತ್ಕಾರ | – | 1956 |
| 19) ಆಶ್ರಮವಾಸಿ | – | 1956 |
| 20) ಬೆಳಗಿನ ಗಾಳಿ | – | 1956 |
| 21) ಜಲತರಂಗ | – | 1957 |
| 22) ಪೌರುಷ ಪರೀಕ್ಷೆ | – | 1958 |
| 23) ಕತ್ತರಿ ಪ್ರಯೋಗ | – | 1958 |
| 24) ಗೆಳೆಯನ ಮಡದಿ | – | 1959 |
| 25) ದ್ರೋಹಿ | – | 1961 |

| | | | |
|---|---|---|---|
| 26) | ಪ್ರಿಯ ಬಾಂಧವಿ | – | 1963 |
| 27) | ಹೆಂಡತಿ | – | 1964 |
| 28) | ಚಕ್ರವ್ಯೂಹ | – | 1964 |
| 29) | ಬೆಂಗಳೂರಿಗೊಂದು ತಿಕೀಟು | – | 1964 |
| 30) | ಪ್ರಪಾತ | – | 1965 |
| 31) | ಐದನೆಯ ದೇಸಾಯಿಣಿ | – | 1967 |
| 32) | ಗ್ರಾಮ ಸೇವಕ | – | 1967 |
| 33) | ಸಂಗೊಳ್ಳಿ ರಾಯಣ್ಣ | – | 1968 |
| 34) | ಮಾಜಿ ಮಂತ್ರಿ | – | 1975 |
| 35) | ಹರಿಜನಾಯಣ | – | 1979 |
| 36) | ತಿರುಗಣಿ | – | 1984 |
| 37) | ಸೈತಾನ್ | – | 1985 |
| 38) | ಜೊತೆಗಾತಿ | – | 1985 |
| 39) | ಮಗನ ತಾಯಿ | – | 1985 |
| 40) | ಆಧುನಿಕ ಬಸವಣ್ಣ | – | 1986 |

**ಕಥಾ ಸಂಕಲನಗಳು**

| | | | |
|---|---|---|---|
| 1) | ಕಾರವಾನ್ | – | 1945 |
| 2) | ಗುಲಾಬಿ ಹೂ | – | 1946 |
| 3) | ಆಗಸ್ಟ ಒಂಬತ್ತು | – | 1947 |
| 4) | ಸೆರೆಯಿಂದ ಹೊರಗೆ | – | 1947 |
| 5) | ಜೋಳದ ಬೆಳೆಯ ನಡುವೆ | – | 1953 |
| 6) | ಸುಂಟರ ಗಾಳಿ | – | 1957 |
| 7) | ಜೀವನ ಕಲೆ | – | 1954 |
| 8) | ಸೈನಿಕನ ಹೆಂಡತಿ | – | 1966 |
| 9) | ಹುಲಿಯಣ್ಣನ ಮಗಳು | – | 1968 |
| 10) | ಗರಡಿಯಾಳು | – | 1975 |

**ಅನುವಾದಿತ ಕಥಾ ಸಂಕಲನ**

| | | | |
|---|---|---|---|
| 1) | ಕಾಡಿನ ಹಾಡು<br>(ಬೈಲೊರಶಿಯನ್ ಕಥೆಗಳ ಅನುವಾದ) | – | 1977 |

## ಅನುಬಂಧ–3

ಬಸವರಾಜ ಕಟ್ಟೀಮನಿ ಅವರ ಬದುಕಿನ ಕೆಲವು ಘಟನೆಗಳು

1) 5.10.1919 ಜನನ, ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಮಲಾಮರಡಿ ಯಲ್ಲಿ ತಾಯಿ ಬಾಳವ್ವ, ತಂದೆ ಅಪ್ಪಣ್ಣ

2) 1919 ಹಳ್ಳಿಯ ಹುಡುಗಿ ಮೊದಲನೆ ಕಥೆ ಬರೆದಿದ್ದು

3) 1937 ಮ್ಯಾಟ್ರಿಕ್ ಮುಗಿಸಲಾಗದೆ ಶಿಕ್ಷಣಕ್ಕೆ ನಮಸ್ಕಾರ ಹೇಳಿ ಬೆಳಗಾವಿಯಿಂದ ಪ್ರಕಟವಾಗುತ್ತಿದ್ದ "ಸಂಯುಕ್ತ ಕರ್ನಾಟಕ ದಲ್ಲಿ ಸೇರಿದ್ದು.

4) 1938 "ತರುಣ ಕರ್ನಾಟಕ"ದ ಉಪಸಂಪಾದಕರಾಗಿ ಅನಂತರ ಬೆಂಗಳೂರಿನಲ್ಲಿ "ಸಮಾಜ ಪತ್ರಿಕೆಯಲ್ಲಿ ಸೇರಿದ್ದು"

5) 1936 ಹುಬ್ಬಳ್ಳಿಯಲ್ಲಿ 'ಲೋಕಮತ' ಕೆಲಸ ಅನಂತರ ಗದುಗಿನ ' ಕರ್ನಾಟಕ ಬಂಧು' ಪತ್ರಿಕೆಯಲ್ಲಿ ಸೇರಿಕೊಂಡಿದ್ದು ಅನೇಕ ಕಥೆಗಳನ್ನು ಪ್ರಕಟಿಸಿದ್ದು.

5) 1941 ಜೀವನ ನಿರ್ವಹಣೆಯ ಸಲುವಾಗಿ ಬೆಂಗಳೂರಿಗೆ ಮರು ಆಗಮನ, ಸ್ವತಂತ್ರ ಕರ್ನಾಟಕದಲ್ಲಿ ಮೂರು ತಿಂಗಳ ತಾತ್ಕಾಲಿಕ ವೃತ್ತಿ, ಹಿಂದಿನ ಕರ್ನಾಟಕ ಬಂಧು ಪತ್ರಿಕೆಯ ನಿರ್ವಹಣೆಗಾಗಿ ಪಯಣ.

7) 1942 ಚಲೇಜಾವ್ ಚಳುವಳಿಯಲ್ಲಿ ಭಾಗವಹಿಸಿ ಸೆರೆಮನೆವಾಸ ಅನುಭವಿಸಿದ್ದು. ಸೆರೆಮನೆಯಲ್ಲಿ ಅಪಾರಓದು ಹಲವಾರು ಕತೆಗಳನ್ನು ರಚಿಸಿದ್ದು.

8) 1942 ಸೆರೆಮನೆಯಿಂದ ಹೊರಗೆ, ಬೆಂಗಳೂರಿನಲ್ಲಿ 'ಉಷಾ' ಪತ್ರಿಕೆ ಆರಂಭಿಸಿದ್ದು.

9) 1944 ಬಸವಜಯಂತಿಯಂದು ಯಲಹಂಕದ ಗಂಗಮ್ಮ ಅವರೊಡನೆ ವಿವಾಹ.

10) 1945 ಪ್ರಥಮ ಕಥಾಸಂಕಲನ 'ಕಾರವಾನ್' ಪ್ರಕಟ

11) 1946 ಪ್ರಥಮ ಕಾದಂಬರಿ 'ಸ್ವಾತಂತ್ರದೆಡೆಗೆ' ಪ್ರಕಟವಾದದ್ದು, ಬೆಂಗಳೂರಿನಿಂದ 'ಸ್ವತಂತ್ರ ಪತ್ರಿಕೆಯ ಆರಂಭ.

ಕವನ ಸಂಕಲನಗಳು :

1) ಕಂಪೋಜಿಟರ್ – 1976

2) ಸ್ವತಂತ್ರವ್ವ (ಗೀತರೂಪಕ) – 1977

ನಾಟಕ

1) ಪಟ್ಟಣದ ಹುಡುಗಿ – 1956

ಜೀವನ ಚಿತ್ರಗಳು

1) ಸೇನಾಪತಿ ಚನ್ನಪ್ಪ ವಾಲಿ – 1950

2) ಪ್ರಿಯ ದರ್ಶಿನಿ ಮಾರ್ಗದರ್ಶಿನಿ ಇಂದಿರಾಗಾಂಧಿ – 1975

ಪ್ರವಾಸ ಕಥನಗಳು

1) ನಾನು ಕಂಡ ರಶಿಯಾ – 1970

ಮಕ್ಕಳ ಕಥೆಗಳು

1) ಸಂಗೊಳ್ಳಿ ರಾಯಣ್ಣ – 1973

2) ಕುಮಾರ ರಾಮ – 1975

ಆತ್ಮ ಕಥೆ –

1) ಕಾದಂಬರಿಕಾರನ ಕಥೆ – 1981

ಸಂಪಾದನೆಗಳು

1) ನವಿಲೂರ ಮನೆಯಿಂದ
(ಚೆನ್ನವೀರ ಕಣವಿಯವರೊಂದಿಗೆ) – 1981

2) ರಸಿಕರಂಗ ದರ್ಶನ್
(ಮಾಧವ ಮಹಿಷಿ ಅವರೊಂದಿಗೆ) – 1966

3) ಗೋಕಾಕ್ ತಾಲೂಕಿನಲ್ಲಿಯ ಸ್ವಾತಂತ್ರ್ಯ ಸಮರ
(ಶಿವಲಿಂಗಪ್ಪ ಭಾವಿಕಟ್ಟಿ ಅವರೊಂದಿಗೆ) – 1980

4) ಹಾಲತೊರೆಗೆ ಬೆಲ್ಲದ ಕೆಸರು – 1982

12) 1946 ಸ್ವತಂತ್ರ ಲಿಮಿಟೆಡ್ ಕಂಪನಿಗೆ ಶರಣು ಹೊಡೆದು ಧಾರವಾಡಕ್ಕೆ ಬಂದು 'ಮಾಡಿ ಮಡಿದವರು' ಕಾದಂಬರಿಯ ಬರಹವನ್ನು ಪ್ರಾರಂಭಿಸಿದ್ದು.

13) 1947 ಪ್ರಥಮ ಪುತ್ರ ಜಯಪ್ರಕಾಶ ಜನಿಸಿದ್ದು.

14) 1950 'ಮಾಡಿ ಮಡಿದವರು' ಕಾದಂಬರಿ ಪ್ರಕಟ

15) 1951 'ಜರತಾರಿಜಗದ್ಗುರು' ರಚನೆ 1964ರ ವರೆಗೆ ಮಲಾಮರಡಿಯಲ್ಲಿ ನಿಂತು ರೈತರ ಸಂಘಟನೆ ಹಾಗೂ ಗ್ರಾಮ ಸುಧಾರಣೆ ಇತ್ಯಾದಿ ಕೆಲಸ ಮಾಡಿದರು ಇದೇ ಅವಧಿಯಲ್ಲಿ ಅವರಿಂದ ಕಾದಂಬರಿ ಗಳು ಹುಲುಸಾಗಿ ಬೆಳೆದದ್ದು.

16) 1964 ಮೇ: 13ರಂದು ವಿಧಾನ ಪರಿಷತ್ತಿನ ಸದಸ್ಯರಾಗಿ ನಾಮಕರಣ ಗೊಂಡಿದ್ದು ಹಾಗೂ 'ಜ್ವಾಲಾಮುಖಿಯ ಮೇಲೆ' ಕಾದಂಬರಿಗೆ ಸೋವಿಯಟ್ ಲ್ಯಾಂಡಿನ ನೆಹರೂ ಪ್ರಶಸ್ತಿ ದೊರಕಿದ್ದು. ಮತ್ತು ಮೈಸೂರು ರಾಜ್ಯದ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದದ್ದು.

17) 1965 ಮರಳಿ ಧಾರವಾಡಕ್ಕೆ ಬಂದದ್ದು.

18) 1966 ಸಾಧನ ಕೇರಿಯಲ್ಲಿ ' ಕಾದಂಬರಿ ' ನಿಲಯ ಕಟ್ಟಿಕೊಂಡದ್ದು.

19) 1968 ಮೇ–13ರಂದು ವಿಧಾನ ಪರಿಷತ್ತಿನ ಸದಸ್ಯರಾಗಿ ನಾಮಕರಣಗೊಂಡಿದ್ದು ಹಾಗೂ 'ಜ್ವಾಲಾಮುಖಿಯ ಮೇಲೆ' ಕಾದಂಬರಿಗೆ ಸೋವಿಯತ್ ಲ್ಯಾಂಡಿನ ನೆಹರೂ ಪ್ರಶಸ್ತಿ ದೊರಕಿದ್ದು. ಮತ್ತು ಮೈಸೂರು ರಾಜ್ಯದ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದದ್ದು.

20) 1969 ಕರ್ನಾಟಕ ವಿಶ್ವವಿದ್ಯಾಲಯದ ಸಿನೇಟ್ ಸದಸ್ಯರಾದದ್ದು (1969ರಿಂದ 1972ರ ವರೆಗೆ) ಜೂನ್ ನಲ್ಲಿ ಸೋವಿಯತ್ ದೇಶದ ಪ್ರವಾಸ ಮಾಡಿದ್ದು.

ಕಟ್ಟೀಮನಿಯವರಿಗೆ ಐವತ್ತು ತುಂಬಿದಾಗ, ಅವರ ಮೈಸೂರಿನ ಗೆಳೆಯರು ಅಭಿನಂದಿಸಿ' ಕಟ್ಟೀಮನಿ ಬದುಕು ಬರಹ'ವೆಂಬ ಅಭಿನಂದನ ಗ್ರಂಥವನ್ನು ಅರ್ಪಿಸಿದ್ದು.

ಧಾರವಾಡ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ.

21) 1974 ವಿಧಾನ ಪರಿಷತ್ ಸದಸ್ಯತ್ವದಿಂದ ನಿವೃತ್ತಿ.

22) 1980 ಬೆಳಗಾವಿಯಲ್ಲಿ ನಡೆದ ಅಖಿಲ ಭಾರತ ಐವತ್ತೆರಡನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾದದ್ದು.

23) 1981 'ಕಾದಂಬರಿಕಾರನ ಕಥೆ' ಸಮಗ್ರ ಆತ್ಮ ಕಥೆ ಪ್ರಕಟವಾದದ್ದು.


24) 1982 ಗೋಕಾಕ ಸಮಿತಿ ವಿರುದ್ಧ ಪ್ರತಿಭಟನೆ ಸರಕಾರದ ಭಾಷಾ ನೀತಿಯ ವಿರುದ್ಧ ಹೋರಾಟ. ಜೇಲುವಾಸ, ಅನಾರೋಗ್ಯ.

ದಾವಣಗೆರೆಯ ಸಾಹಿತಿಮಿತ್ರರು ಅವರನ್ನು ಅಭಿನಂದಿಸಿ 'ಬಸವರಾಜ ಕಟ್ಟೀಮನಿ ಜೀವನ ಸಾಹಿತ್ಯ'ವೆಂಬ ಅಭಿನಂದನ ಗ್ರಂಥ ಅರ್ಪಿಸಿದ್ದು.


25) 23.10.1989: ಧಾರವಾಡದಲ್ಲಿ ಅಕ್ಟೋಬರ್ 23 ರಂದು ನಿಧನರಾದದ್ದು.

ಗ್ರಂಥ ಋಣ


* ಬಸವರಾಜ ಕಟ್ಟೀಮನಿ: ಡಾ॥ ಬಸವರಾಜ ಸಾದರ ವೀರಶೈವ ಅಧ್ಯಯನ ಸಂಸ್ಥೆ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ ಡಂಬಳ– ಗದಗ.
* ಬಸವರಾಜ ಕಟ್ಟೀಮನಿ: ಕೃ–ನಾರಾಯಣರಾವ್ ಸೃಷ್ಟಿ ಪಬ್ಲಿಕೇಷನ್ ನಂ–28, 1ನೇ ಕ್ರಾಸ್, ರೈಲ್ವೇ ಗೇಟ್ ಬಳಿ, ಬಾಪೂಜಿ ನಗರ ಬೆಂಗಳೂರು–560026
* ಬಸವರಾಜ ಕಟ್ಟೀಮನಿ: ಜೀವನ ಸಾಹಿತ್ಯ ಸಂಪಾದಕರು: ಪ್ರಿ:ಸಿದ್ದಣ್ಣ ಮಸಳಿ ಪ್ರಾ–ಅಣ್ಣಪ್ಪ ಮಟ್ಟಿಕಲ್ಲಿ ಪ್ರಕಾಶಕರು: ಅರುಣ ಪ್ರಕಾಶನ ಧಾರವಾಡ–3
* ಬಸವರಾಜ ಕಟ್ಟೀಮನಿ: ಬೆ.ಗೋ. ರಮೇಶ ಪ್ರಕಾಶಕರು: ದಿವ್ಯಚಂದ, ಪ್ರಕಾಶನ ನಂ–45, ಪಾಪಣ್ಣನ ತೋಟ 1ನೇ ಮುಖ್ಯ ರಸ್ತೆ, ಕರ್ನಾಟಕ ಹೌಸಿಂಗ್ ಬೋರ್ಡ್ ಕಾಲೋನಿ, 2ನೇ ಹಂತ ಬಸವೇಶ್ವರ ನಗರ, ಬೆಂಗಳೂರು–76
* ಪತ್ರಿಕಾಋಣ: 1) ಕನ್ನಡ ನುಡಿ, ಬೆಂಗಳೂರು–18,<br>2) ಕನ್ನಡ ದೈನಿಕ ಪತ್ರಿಕೆಗಳು.
* ಅಖಿಲಭಾರತ 52 ನೆಯ ಕನ್ನಡ ಸಾಹಿತ್ಯ ಸಮ್ಮೆಳನಾಧ್ಯಕ್ಷರಾದ ಶ್ರೀ ಬಸವರಾಜ ಕಟ್ಟೀಮನಿ ಅವರು ದಿನಾಂಕ 8–2 1980 ರಂದು ಮಾಡಿದ ಅಧ್ಯಕ್ಷೀಯ ಭಾಷಣ.




ಬಸವರಾಜ ಕಟ್ಟೀಮನಿಯವರು ಸ್ವಹಸ್ತಾಕ್ಷರದಲ್ಲಿ
ಕೊತ್ತಲ ಮಹಾದೇವಪ್ಪರಿಗೆ ಬರೆದ ಪತ್ರ



# ಬಸವರಾಜ ಕಟ್ಟೀಮನಿಯವರ ಭಾವಚಿತ್ರಗಳು



ಬಸವರಾಜ ಕಟ್ಟೀಮನಿಯವರು
ಜನನ : 1919, ಮರಣ : 1989




ಬಸವರಾಜ ಕಟ್ಟೀಮನಿಯವರು ರಶಿಯಾಕ್ಕೆ ಹೊರಟಾಗ ಬೆಳಗಾವಿ
ವಿಮಾನ ನಿಲ್ದಾಣದಲ್ಲಿ ತಮ್ಮ ಆತ್ಮೀಯ ಮಿತ್ರ ವೃಂದದೊಡನೆ.



ಬಸವರಾಜ ಕಟ್ಟೀಮನಿ ಅವರೊಂದಿಗೆ
ಶ್ರೀಮತಿ ಬಸವರಾಜ ಕಟ್ಟೀಮನಿಯವರು



ಬಸವರಾಜ ಕಟ್ಟೀಮನಿಯವರು
ಸಾಹಿತ್ಯ ಮಿತ್ರರಾದ ಪಂಚಾಕ್ಷರಿ
ಹಿರೇಮಠ. ಡಾ. ಹಾ.ಮಾ. ನಾಯಕ್
ಈಶ್ವರ ಸಣಕಲ್ ಮತ್ತು ಪಿ.ಆರ್.
ತಿಪ್ಪೇಸ್ವಾಮಿ ಅವರೊಂದಿಗೆ ತಮ್ಮ
ಮನೆ 'ಸಾಹಿತ್ಯಶ್ರೀ'
ಅಂಗಳದಲ್ಲಿಯ ಚಿತ್ರ



ಖ್ಯಾತ ಕಾದಂಬರಿಕಾರ
ಬಸವರಾಜ ಕಟ್ಟೀಮನಿ



ರಾಷ್ಟ್ರಕವಿ ಕುವೆಂಪು
ಅವರೊಂದಿಗೆ
ಬಸವರಾಜ ಕಟ್ಟೀಮನಿ



ಬಸವರಾಜ ಕಟ್ಟೀಮನಿ




ಬೆಂಗಳೂರ (1968)ರಲ್ಲಿ ಕಟ್ಟೀಮನಿಯವರ ಜ್ವಾಲಾಮುಖಿಯ ಮೇಲೆ ಕಾದಂಬರಿಗೆ ಸೋವಿಯತ್ ರಶಿಯಾ ದೇಶದ ನೆಹರೂ ಪ್ರಶಸ್ತಿ ಬಂದ ಸಂದರ್ಭದಲ್ಲಿ ನಡೆದ ಸನ್ಮಾನ ಸಮಾರಂಭದಲ್ಲಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ॥ ವಿ.ಕೃ. ಗೋಕಾಕ್‌ರವರು ಮಾತಾಡುತ್ತಿದ್ದಾರೆ.



1970ರಲ್ಲಿ ಜರುಗಿದ ಧಾರವಾಡ ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ
ಬಸವರಾಜ ಕಟ್ಟೀಮನಿಯವರು ಮಾತನಾಡುತ್ತಿರುವುದು.
ಚಿತ್ರದಲ್ಲಿ ವರಕವಿ ಡಾ. ದ.ರಾ. ಬೇಂದ್ರೆಯವರು ಇದ್ದಾರೆ.



ಬಸವರಾಜ ಕಟ್ಟೀಮನಿಯವರು ಧರ್ಮಪತ್ನಿ ಶ್ರೀಮತಿ ಗಂಗಮ್ಮನವರೊಂದಿಗೆ

***